ಶಾಲಾ ಶಿಕ್ಷಣ ಇಲಾಖೆ

# ಮರುಸಿಂಚನ

# ಕನ್ನಡ

## 2026–2027

## ವಿದ್ಯಾರ್ಥಿ ಅಭ್ಯಾಸ ಪುಸ್ತಕ

@KTBS NOT TO BE REPUBLISHED

## 7

## ಎಳನೇ ತರಗತಿ

**ಸಮಗ್ರ ಶಿಕ್ಷಣ– ಕರ್ನಾಟಕ**
ರಾಜ್ಯ ಯೋಜನಾ ನಿರ್ದೇಶಕರ ಕಚೇರಿ
ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು – 560 001

## ಪರಿಕಲ್ಪನೆ

| | | |
|---|---|---|
| **ಶ್ರೀಮತಿ ವಿ. ರಶ್ಮಿ ಮಹೇಶ್** ಭಾ.ಆ.ಸೇ<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು<br>ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ<br>ಕರ್ನಾಟಕ ಸರ್ಕಾರ | **ಶ್ರೀ ವಿಕಾಸ್ ಕಿಶೋರ್ ಸುರಳ್ಕರ್** ಭಾ.ಆ.ಸೇ<br>ಆಯುಕ್ತರು<br>ಶಾಲಾ ಶಿಕ್ಷಣ ಇಲಾಖೆ<br>ನೃಪತುಂಗ ರಸ್ತೆ ಬೆಂಗಳೂರು | **ಶ್ರೀಮತಿ ಡಾ. ಕೆ. ವಿದ್ಯಾಕುಮಾರಿ** ಭಾ.ಆ.ಸೇ<br>ರಾಜ್ಯ ಯೋಜನಾ ನಿರ್ದೇಶಕರು<br>ಸಮಗ್ರ ಶಿಕ್ಷಣ ಕರ್ನಾಟಕ<br>ಬೆಂಗಳೂರು |
| **ಶ್ರೀ ಮಾರುತಿ ಎಂ.ಆರ್.**<br>ನಿರ್ದೇಶಕರು, ಗುಣಮಟ್ಟ<br>ಸಮಗ್ರ ಶಿಕ್ಷಣ ಕರ್ನಾಟಕ<br>ಬೆಂಗಳೂರು | **ಶ್ರೀ ಹೆಚ್.ಎನ್. ಗೋಪಾಲಕೃಷ್ಣ**<br>ನಿರ್ದೇಶಕರು<br>ಡಿ.ಎಸ್.ಇ.ಆರ್.ಟಿ<br>ಬೆಂಗಳೂರು | **ಶ್ರೀ ಸಿ.ಆರ್. ನಾಗರಾಜಯ್ಯ**<br>ಪ್ರಾಂಶುಪಾಲರು ಹಾಗೂ<br>ಉಪನಿರ್ದೇಶಕರು (ಅಭಿವೃದ್ಧಿ)<br>ಡಯಟ್ ಮೈಸೂರು |

## ಸಹಕಾರ

| | |
|---|---|
| **ಶ್ರೀ ಬಿ.ಎಸ್. ಜಗದೀಶ್ವರ**<br>ಸಹನಿರ್ದೇಶಕರು<br>ಡಿ.ಎಸ್.ಇ.ಆರ್.ಟಿ ಬೆಂಗಳೂರು | **ಶ್ರೀಮತಿ ಮಂಗಳ ಜಿ.**<br>ಉಪನಿರ್ದೇಶಕರು<br>ಡಿ.ಎಸ್.ಇ.ಆರ್.ಟಿ ಬೆಂಗಳೂರು |

## ಸಂಪನ್ಮೂಲ ರಚನಾ ತಂಡ (2024–2025)

| | | |
|---|---|---|
| **ಶ್ರೀ ಸಂಜಯ್ ಕುಮಾರ್.ಹೆಚ್.ಕೆ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ಕಂಪಲಾಪುರ, ಪಿರಿಯಾಪಟ್ಟಣ ತಾ॥,<br>ಮೈಸೂರು ಜಿಲ್ಲೆ. | **ಶ್ರೀ ರಾಘವೇಂದ್ರ.ವಿ**<br>ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,<br>ಗುಂಗ್ರಾಲ್‌ಛತ್ರ, ಮೈಸೂರು ಗ್ರಾಮಾಂತರ,<br>ಮೈಸೂರು ಜಿಲ್ಲೆ. | **ಶ್ರೀಮತಿ ಜಯಶ್ರೀ.ಹೆಚ್.ಕೆ**<br>ಸಹ ಶಿಕ್ಷಕರು, ಸ.ಪ.ಪೂ.ಕಾಲೇಜು<br>(ಪ್ರೌ.ಶಾ.ವಿಭಾಗ), ಹೊಮ್ಮರಗಳ್ಳಿ,<br>ಹೆಚ್.ಡಿ.ಕೋಟೆ ತಾ॥, ಮೈಸೂರು ಜಿಲ್ಲೆ. |
| **ಶ್ರೀಮತಿ. ರೇಖಾ.ಆರ್**<br>ಸಹ ಶಿಕ್ಷಕರು, ಸ.ಹಿ.ಪ್ರಾ.ಶಾಲೆ,<br>ಬೊಕ್ಕಹಳ್ಳಿ 1, ನಂಜನಗೂಡು ತಾ॥,<br>ಮೈಸೂರು ಜಿಲ್ಲೆ. | **ಶ್ರೀಮತಿ ಜ್ಯೋತಿ.ಕೆ.ಎಮ್**<br>ಸಹ ಶಿಕ್ಷಕರು, ಸ.ಹಿ.ಪ್ರಾ.ಶಾಲೆ,<br>ಮೇಗರಮಕ್ಕಿ, ನರಸಿಂಹರಾಜಪುರ ತಾ॥,<br>ಚಿಕ್ಕಮಗಳೂರು ಜಿಲ್ಲೆ. | **ಶ್ರೀ ಲೋಕೇಶ್. ಎ**<br>ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ,<br>ಕಟ್ಟೆಮಳಲವಾಡಿ ಕ್ಲಸ್ಟರ್,<br>ಹುಣಸೂರು ತಾ॥, ಮೈಸೂರು ಜಿಲ್ಲೆ. |

| | |
|---|---|
| **ಶ್ರೀ ರವಿಶಂಕರ.ವಿ**<br>ಪದವೀಧರ ಪ್ರಾಥಮಿಕ ಶಿಕ್ಷಕರು, ಉ.ಸ.ಹಿ.ಪ್ರಾ.ಶಾಲೆ,<br>ಕೆ.ಎಡತೊರೆ, ಹೆಚ್.ಡಿ.ಕೋಟೆ ತಾ॥, ಮೈಸೂರು ಜಿಲ್ಲೆ. | **ಶ್ರೀ ಶ್ರೀನಿವಾಸ.ಜಿ.ಪಿ**<br>ಪದವೀಧರ ಪ್ರಾಥಮಿಕ ಶಿಕ್ಷಕರು, ಉ.ಸ.ಹಿ.ಪ್ರಾ.ಶಾಲೆ, ಆಲನಹಳ್ಳಿ,<br>ಪಿರಿಯಾಪಟ್ಟಣ ತಾ॥, ಮೈಸೂರು ಜಿಲ್ಲೆ. |

## ಸಂಪನ್ಮೂಲ ಪರಿಷ್ಕರಣ ತಂಡ (2026–2027)

**ಶ್ರೀ ಆರ್.ಡಿ.ರವೀಂದ್ರ**
ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಲೋಕನಾಥಪುರ,
ಕೊಪ್ಪ ತಾ॥, ಚಿಕ್ಕಮಗಳೂರು ಜಿಲ್ಲೆ.

| | |
|---|---|
| **ಶ್ರೀ ರವಿಶಂಕರ.ವಿ**<br>ಪದವೀಧರ ಪ್ರಾಥಮಿಕ ಶಿಕ್ಷಕರು, ಉ.ಸ.ಹಿ.ಪ್ರಾ.ಶಾಲೆ,<br>ಕೆ.ಎಡತೊರೆ, ಹೆಚ್.ಡಿ.ಕೋಟೆ ತಾ॥, ಮೈಸೂರು ಜಿಲ್ಲೆ. | **ಶ್ರೀ ಶ್ರೀನಿವಾಸ.ಜಿ.ಪಿ**<br>ಪದವೀಧರ ಪ್ರಾಥಮಿಕ ಶಿಕ್ಷಕರು, ಉ.ಸ.ಹಿ.ಪ್ರಾ.ಶಾಲೆ, ಆಲನಹಳ್ಳಿ,<br>ಪಿರಿಯಾಪಟ್ಟಣ ತಾ॥, ಮೈಸೂರು ಜಿಲ್ಲೆ. |

## ಸಮನ್ವಯ

- **ಶ್ರೀಮತಿ ನಾಗಮಣಿ ಎಂ.** ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು
- **ಶ್ರೀಮತಿ ಶಿವಮ್ಮ,** ಹಿರಿಯ ಸಹಾಯಕ ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಕರ್ನಾಟಕ.
- **ಶ್ರೀ ಕೆ.ವಿ.ಸುರೇಶ್,** ಹಿರಿಯ ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು.
- **ಶ್ರೀಮತಿ ಬಿ.ಎನ್.ನಳಿನಾಕ್ಷಿ,** ಉಪನ್ಯಾಸಕರು, ಕಾರ್ಯಾನುಭವ ವಿಭಾಗ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು.
- **ಶ್ರೀ ಶಿವಶಂಕರಯ್ಯ,** ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು.

**ಬೆಂಬಲ ಟ್ರಾನ್ಸ್ ಫಾರ್ಮ್ ಸ್ಕೂಲ್ಸ್,**

NOT TO BE REPUBLISHED @KTBS

# ಮುನ್ನುಡಿ

ವಿದ್ಯಾರ್ಥಿಗಳು ಆಲೋಚನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಾಗ, ತಮ್ಮ ತಿಳುವಳಿಕೆಯನ್ನು ವಿಶ್ಲೇಷಿಸಿದಾಗ ಮತ್ತು ಹೊಸ ಪರಿಕಲ್ಪನೆಗಳನ್ನು ತಮ್ಮಲ್ಲಿನ ಪೂರ್ವಜ್ಞಾನದೊಂದಿಗೆ ಜೋಡಿಸಿಕೊಂಡಾಗ ಮಾತ್ರ ಕಲಿಕೆಯು ಅರ್ಥ ಪೂರ್ಣವಾಗುತ್ತದೆ. ಇದನ್ನು ಮನಗಂಡು, **'ಮರುಸಿಂಚನ'** ಕಾರ್ಯಕ್ರಮವು ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆ ಮತ್ತು ಅನುಭವ ಆಧಾರಿತ ಕಲಿಕೆಗೆ ಹೆಚ್ಚಿನ ಒತ್ತು ನೀಡಿದೆ. ಈ ಕಾರ್ಯಕ್ರಮವನ್ನು ವಿಶೇಷವಾಗಿ ಕಲಿಕಾ ಅಂತರಗಳನ್ನು **(learning gaps)** ಇಲ್ಲವಾಗಿಸಲು ಹಾಗೂ ವಿದ್ಯಾರ್ಥಿಗಳು ತಮ್ಮ ತರಗತಿಗೆ ಅನುಗುಣವಾದ ಕಲಿಕಾ ಮಟ್ಟವನ್ನು ತಲುಪಲು ಅತ್ಯಗತ್ಯವಾದ ಬುನಾದಿ **(foundational)** ಮತ್ತು ಪೂರ್ವ–ಅಗತ್ಯ (ಠಿಡಿಜಡಿಜಡಣ್ಞುಣಜ) ಸಾಮರ್ಥ್ಯಗಳಲ್ಲಿ ಪ್ರಾವೀಣ್ಯತೆ ಸಾಧಿಸಲು ಅನುವಾಗುವಂತೆ ರೂಪಿಸಲಾಗಿದೆ.

ಈ ದೂರ ದೃಷ್ಟಿಯನ್ನು ಸಾಕಾರಗೊಳಿಸಲು **'ವಿದ್ಯಾರ್ಥಿ ಅಭ್ಯಾಸ ಪುಸ್ತಕ'** **(Student Activity Book - SAB)** ವನ್ನು ಅಭಿವೃದ್ಧಿಪಡಿಸಲಾಗಿದೆ. ಇದು ವಿದ್ಯಾರ್ಥಿಗಳಿಗೆ ಒಂದು ವ್ಯವಸ್ಥಿತ ಕಲಿಕಾ ಸಂಗಾತಿಯಾಗಿ ಕಾರ್ಯ ನಿರ್ವಹಿಸುತ್ತದೆ; ವಿದ್ಯಾರ್ಥಿಗಳು ತಮ್ಮ ಪೂರ್ವ–ಅಗತ್ಯ ಪರಿಕಲ್ಪನೆಗಳನ್ನು ಪುನರ್ಮನನ ಮಾಡಿಕೊಳ್ಳಲು, ಮಾರ್ಗದರ್ಶಿತ ಕಲಿಕಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಮತ್ತು ತರಗತಿವಾರು ಪಾಠಗಳ ಬಗ್ಗೆ ತಮ್ಮ ತಿಳುವಳಿಕೆಯನ್ನು ದೃಢೀಕರಿಸಿಕೊಳ್ಳಲು ಇದು ಸಹಕಾರಿಯಾಗಲಿದೆ.

ಈ ಪುಸ್ತಕದಲ್ಲಿ ಅಳವಡಿಸಲಾಗಿರುವ ಚಟುವಟಿಕೆಗಳನ್ನು ಈ ಕೆಳಗಿನ ಉದ್ದೇಶಗಳಿಗಾಗಿ ರೂಪಿಸಲಾಗಿದೆ :

- ವಿದ್ಯಾರ್ಥಿಗಳಲ್ಲಿನ ಕಲಿಕಾ ನ್ಯೂನತೆಗಳನ್ನು ಸರಿದೂಗಿಸಿ ಸಮನ್ವಯಗೊಳಿಸುವುದು.
- ವಿದ್ಯಾರ್ಥಿಗಳಲ್ಲಿ ಆಲೋಚನಾ ಸಾಮರ್ಥ್ಯ, ಚರ್ಚೆ ಮತ್ತು ಸಮಸ್ಯೆಪರಿಹರಿಸುವ ಕೌಶಲಗಳನ್ನು ಉತ್ತೇಜಿಸುವುದು.
- ತರಗತಿವಾರು ನಿಗದಿಪಡಿಸಿದ ಕಲಿಕಾ ಸಾಮರ್ಥ್ಯಗಳ ಕಡೆಗೆ ಹಂತ ಹಂತವಾಗಿ ಪ್ರಗತಿ ಸಾಧಿಸಲು ಬೆಂಬಲ ನೀಡುವುದು.

ಈ **ವಿದ್ಯಾರ್ಥಿ ಅಭ್ಯಾಸ ಪುಸ್ತಕವು** ಕೇವಲ ಪರೀಕ್ಷಾ ಅಭ್ಯಾಸ ಪುಸ್ತಕವಲ್ಲ ಅಥವಾ ಹೆಚ್ಚುವರಿ ಪಠ್ಯ ಪುಸ್ತಕವೂ ಅಲ್ಲ. ಇದನ್ನು ದೈನಂದಿನ ಕಲಿಕಾ ಪ್ರಕ್ರಿಯೆಯ ಭಾಗವಾಗಿ, ಶಿಕ್ಷಕರ ಮಾರ್ಗದರ್ಶನದಲ್ಲಿ, ಸಾಮಾನ್ಯ ತರಗತಿ ಬೋಧನೆಯ ಸಮಯದಲ್ಲಿ ಬಳಸಲು ರೂಪಿಸಲಾಗಿದೆ. ಪಠ್ಯಪುಸ್ತಕದ ಪಾಠಗಳಿಗೆ ಪೂರಕವಾಗಿರುವ ಮತ್ತು ಕ್ರಮಬದ್ಧವಾಗಿ ಜೋಡಿಸಲಾದ ಚಟುವಟಿಕೆಗಳ ಮೂಲಕ, ಸಿದ್ಧತೆಯಿಂದ ಹಿಡಿದು ಕಲಿಕೆಯ ದೃಢೀಕರಣದವರೆಗಿನ ಪ್ರತಿಯೊಂದು ಹಂತದಲ್ಲೂ ವಿದ್ಯಾರ್ಥಿಗಳಿಗೆ ಇದು ನೆರವು ನೀಡುತ್ತದೆ.

ಈ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ವಿದ್ಯಾರ್ಥಿಗಳು ಸಕ್ರಿಯವಾಗಿ ಕಲಿಯಲು, ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸಲು, ಸಹಪಾಠಿಗಳಿಂದ ಕಲಿಯಲು ಮತ್ತು ವಿಷಯದ ಬಗ್ಗೆ ಆತ್ಮ ವಿಶ್ವಾಸವನ್ನು ಬೆಳೆಸಿಕೊಳ್ಳಲು ಪ್ರೇರೇಪಿತರಾಗುತ್ತಾರೆ.

ಶಿಕ್ಷಕರ ಆಪ್ತ ಮಾರ್ಗದರ್ಶನದೊಂದಿಗೆ ಈ ವಿದ್ಯಾರ್ಥಿ ಅಭ್ಯಾಸ ಪುಸ್ತಕದ ನಿರಂತರ ಬಳಕೆಯು ವಿದ್ಯಾರ್ಥಿಗಳ ಪರಿಕಲ್ಪನಾ ತಿಳುವಳಿಕೆಯನ್ನು ಬಲಪಡಿಸುತ್ತದೆ, ಕಲಿಕಾಫಲಗಳನ್ನು ಸುಧಾರಿಸುತ್ತದೆ ಮತ್ತು ತರಗತಿಗಳಲ್ಲಿ ಆನಂದದಾಯಕ ಕಲಿಕಾ ವಾತಾವರಣವನ್ನು ನಿರ್ಮಿಸುತ್ತದೆ ಎಂದು ನಾವು ನಂಬಿದ್ದೇವೆ.

ಈ ಪುಸ್ತಕವು ವಿದ್ಯಾರ್ಥಿಗಳ ಕಲಿಕಾ ಪಯಣದಲ್ಲಿ ಅವರ ಕುತೂಹಲ, ಪಾಲ್ಗೊಳ್ಳುವಿಕೆ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸಲಿ ಎಂದು ನಾವು ಆಶಿಸುತ್ತೇವೆ.

ಈ ಸಾಹಿತ್ಯ ರಚನೆಯಲ್ಲಿ ಭಾಗವಹಿಸಿದ ಎಲ್ಲಾ ಸಂಪನ್ಮೂಲವ್ಯಕ್ತಿಗಳಿಗೂ, ಅಧಿಕಾರಿ ಬಂಧುಗಳಿಗೂ ಧನ್ಯವಾದಗಳು.

@KTBS NOT TO BE REPUBLISHED

# ಪರಿವಿಡಿ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

## ಬುನಾದಿ ಹಂತ


| ಕ್ರ.ಸಂ. | ಅವಧಿ | ಪುಟ ಸಂಖ್ಯೆ |
|---|---|---|
| 01 | ವರ್ಣಮಾಲೆ | 01 |
| 02 | ಯೋಗವಾಹಗಳು | 03 |
| 03 | ಗುಣಿತಾಕ್ಷರಗಳು | 05 |
| 04 | ಒತ್ತಕ್ಷರಗಳು | 07 |
| 05 | ಒತ್ತಕ್ಷರದ ವಿಧಗಳು | 09 |
| 06 | ವಾಕ್ಯರಚನೆ | 11 |
| 07 | ವಾಕ್ಯದ ಘಟಕಗಳು | 13 |
| 08 | ನಾಮಪದಗಳು | 15 |
| 09 | ವಸ್ತುವಾಚಕಗಳು | 17 |
| 10 | ವಚನಗಳು–ಲಿಂಗಗಳು | 19 |
| 11 | ಸರ್ವನಾಮಗಳು | 21 |
| 12 | ದ್ವಿರುಕ್ತಿ–ಅನುಕರಣಾವ್ಯಯ | 23 |
| 13 | ವಿರುದ್ಧಾರ್ಥಕ ಮತ್ತು ನಾನಾರ್ಥಕ ಪದಗಳು | 25 |
| 14 | ನುಡಿಗಟ್ಟು ಮತ್ತು ಒಗಟುಗಳು | 27 |
| 15 | ಗಾದೆಗಳು | 29 |
| 16 | ವಿಭಕ್ತಿ ಪ್ರತ್ಯಯಗಳು | 31 |
| 17 | ಆಡುಭಾಷೆ ಮತ್ತು ಗ್ರಾಂಥಿಕಭಾಷೆ | 33 |
| 18 | ದೇಶ್ಯ–ಅನ್ಯದೇಶ್ಯ ಪದಗಳು | 35 |
| 19 | ತತ್ಸಮ–ತದ್ಭವಗಳು | 37 |
| 20 | ಲೇಖನ ಚಿಹ್ನೆಗಳು | 39 |
| 21 | ಶಬ್ದಕೋಶ ಬಳಸೋಣ | 41 |
| 22 | ಸೂಚನಾಫಲಕಗಳು | 43 |
| 23 | ಟಿಪ್ಪಣಿ ಬರೆಹ | 45 |
| 24 | ಸುದ್ದಿ ಸಮಾಚಾರ | 47 |


© KTBS NOT TO BE REPUBLISHED

# ಪರಿವಿಡಿ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ


| ಬೆಂಬಲಿತ ಕಲಿಕೆಯ ಹಂತ | | |
|---|---|---|
| ಕ್ರ.ಸಂ. | ಅವಧಿ | ಪುಟ ಸಂಖ್ಯೆ |
| 01 | ನನ್ನ ಅನಿಸಿಕೆ | 49 |
| 02 | ಚಿತ್ರ ಮಾತು | 51 |
| 03 | ಆಲಿಸು ಪ್ರಶ್ನಿಸು | 53 |
| 04 | ಧ್ವನಿ ಪ್ರತಿಧ್ವನಿ | 55 |
| 05 | ಚಿತ್ರ ಕಥೆ | 57 |
| 06 | ಮಾತು ಮಾಣಿಕ್ಯ | 59 |
| 07 | ಮಾತು ಪ್ರತಿಮಾತು | 61 |
| 08 | ಜನಪದ ಜಗಲಿ | 63 |
| 09 | ಓಲೆ ಕರೆಯೋಲೆ | 66 |
| 10 | ನಿರೂಪಣೆ | 68 |
| 11 | ವಚನಾಮೃತ | 70 |
| 12 | ವಿಮರ್ಶೆ | 72 |
| 13 | ಚರ್ಚೆ–ಸಂವಾದ | 74 |
| 14 | ಸಂಧಿ ಮಾಡೋಣ–1 | 76 |
| 15 | ಸಾರಾಂಶ ಬರೆಹ | 78 |
| 16 | ಸಂಧಿ ಮಾಡೋಣ–2 | 81 |
| 17 | ಸ್ಪಷ್ಟಮಾತು | 83 |
| 18 | ಸಮಸ್ತ ಪದಗಳು–1 | 85 |
| 19 | ಆಲೋಚನೆ | 87 |
| 20 | ಯೋಚನಾ ಲಹರಿ | 89 |
| 21 | ಭಾವಾಭಿನಯ | 91 |
| 22 | ಸಮಸ್ತ ಪದಗಳು–2 | 93 |
| 23 | ವೇದನೆ–ಸಂವೇದನೆ | 95 |
| 24 | ಹೇಗಾಯ್ತು? | 98 |
| 25 | ಸಾಂಧರ್ಭಿಕ ನಡೆ | 100 |
| 26 | ನಡೆ ನುಡಿ | 102 |
| 27 | ಅಂದ ಚಂದ | 104 |
| 28 | ಪ್ರಸ್ತಾರ ವಿಸ್ತಾರ | 106 |


@KTBS NOT TO BE REPUBLISHED

## ಬುನಾದಿ ಹಂತ - ಚಟುವಟಿಕೆ ಹಾಳೆ 1

# ವರ್ಣಮಾಲೆ

(ಸ್ವರಗಳು ಮತ್ತು ವ್ಯಂಜನಗಳು)

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವರ್ಣಮಾಲೆಯ ಅಕ್ಷರಗಳ ಆಕಾರ ಮತ್ತು ಧ್ವನಿಯನ್ನು ಗುರುತಿಸಿ ಓದುವರು ಮತ್ತು ಬರೆಯುವರು.

**ಚಟುವಟಿಕೆ 1 :** ಈ ಹಾಡನ್ನು ಗುಂಪಿನಲ್ಲಿ ಹಾಡುತ್ತಾ ಅಭಿನಯಿಸಿರಿ. ನಂತರ ಈ ಹಾಡಿನ ಪ್ರತೀ ಸಾಲಿನ ಮೊದಲ ಅಕ್ಷರವನ್ನು ಕೆಳಗೆ ಕೊಟ್ಟಿರುವ ಚೌಕಗಳಲ್ಲಿ ಬರೆಯಿರಿ.

ಅಮ್ಮನು ಮಾಡಿದ ದೇವರ ಮೂರ್ತಿ
ಆಟಕ್ಕೆ ಪಡೆದೆನು ಹರುಷದಲ್ಲಿ
ಇಲಿಯ ಮೇಲೆ ಕುಳಿತವನಾರು
ಈಶನ ಸುತನು ಗಣಪಣ್ಣ

ಉದಯ ಕಾಲದಲ್ಲಿ ಸ್ನಾನವ ಮಾಡಿ
ಊಟಕೆ ತಯಾರಿ ನಡೆದಿರಲು
ಋಣ ತೀರಿಸಿ ಭಾರವ ಕಳೆಯಲು
ಎಲೆಯನ್ನಿರಿಸಿ ಬಡಿಸಿದರು

ಏಕ ಚಿತ್ತದಿ ಧ್ಯಾನವ ಮಾಡಿ
ಐದು ಬಗೆಯ ಭಕ್ಷ್ಯವ ಬಡಿಸಿ
ಒಲವಿನಿಂದಲಿ ನೈವೇದ್ಯ ಮಾಡಿ
ಓಟದ ಆಟವ ಮಕ್ಕಳು ಆಡಿ
ಔತಣದೂಟವ ಮಾಡಿದರು

ಅಂದ ಚಂದದ ಊಟ ಮಾಡಿ.
ಅಃ ಹಾಹಾ ಎಂದರು ಹರುಷದಲಿ



NOT TO BE REPUBLISHED

| | | | | | |
|---|---|---|---|---|---|
| | | | | | |

| | | | | | | | | |
|---|---|---|---|---|---|---|---|---|
| | | | | | | | | |

**ಹೀಗೊಂದು ಕಲಿಕೆ !**

ಸ್ವರ ಅಕ್ಷರಗಳು : 'ಅ' ಇಂದ 'ಔ' ವರೆಗಿನ ಅಕ್ಷರಗಳು. (ಒಟ್ಟು 13 ಅಕ್ಷರಗಳು)
ವ್ಯಂಜನಗಳು : 'ಕ' ಇಂದ 'ಳ' ವರೆಗಿನ ಅಕ್ಷರಗಳು. (ಒಟ್ಟು 34 ಅಕ್ಷರಗಳು)

**ಚಟುವಟಿಕೆ 2 :** ಮುನ್ನಿಗೆ ಕ್ಯಾರೆಟ್ ಬೇಕಾಗಿದೆ. ಕ್ಯಾರೆಟ್ ತಿನ್ನಲು 'ಅ' ಇಂದ 'ಳ' ವರೆಗಿನ ಅಕ್ಷರಗಳಿಗೆ ಅಕಾರಾದಿಯಾಗಿ ಬಣ್ಣ ತುಂಬಿ ದಾರಿ ತೋರಿಸಿರಿ.



**ಚಟುವಟಿಕೆ 3 :** ವರ್ಣಮಾಲೆಯ ಅಕ್ಷರಗಳನ್ನು ಬಳಸಿಕೊಂಡು ಒತ್ತಕ್ಷರವಿಲ್ಲದೆ ಪದ ರಚಿಸಿ, ಈ ಚಿತ್ರಗಳ ಹೆಸರನ್ನು ಬರೆಯಿರಿ.

   

________ ________ ________ ________

   

________ ________ ________ ________

@KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 2

# ಯೋಗವಾಹಗಳು

(ಅನುಸ್ವಾರ ಮತ್ತು ವಿಸರ್ಗ)

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವರ್ಣಮಾಲೆಯ ಅಕ್ಷರಗಳ ಆಕಾರ ಮತ್ತು ಧ್ವನಿಯನ್ನು ಗುರುತಿಸಿ ಓದುವರು ಮತ್ತು ಬರೆಯುವರು.

**ಚಟುವಟಿಕೆ 1 :** ಈ ಪದ್ಯವನ್ನು ಗುಂಪಿನಲ್ಲಿ ರಾಗವಾಗಿ ಹಾಡಿರಿ. ನಂತರ ಕೊಟ್ಟಿರುವ ಸ್ಥಳದಲ್ಲಿ ಸೂಕ್ತ ಉತ್ತರ ಬರೆಯಿರಿ.

## ಊರಿಗೊಬ್ಬ ರಾಜನಂತೆ

ಒಂದಾನೊಂದು ಊರಿತ್ತಂತೆ
ಊರಿಗೊಬ್ಬ ರಾಜನಂತೆ
ರಾಜಗೊಬ್ಬ ಮಂತ್ರಿಯಂತೆ
ಮಂತ್ರಿಗೊಬ್ಬ ಮಗಳಂತೆ

ಮಗಳಿಗೊಂದು ಗೊಂಬೆಯಂತೆ
ಗೊಂಬೆಗೊಂದು ಅಂಗಿಯಂತೆ
ಅಂಗಿಗೊಂದು ಗುಂಡಿಯಂತೆ
ಗುಂಡಿ ಕಿತ್ತು ಹೋಯಿತಂತೆ

ದರ್ಜಿಯನ್ನು ಕರೆದರಂತೆ
ದರ್ಜಿ ಬಂದು ನೋಡಿದನಂತೆ
ಗುಂಡಿ ಬಲು ಹಳೆಯದಂತೆ
ಬೇರೆ ಗುಂಡಿ ತಂದನಂತೆ

ಅಂಗಿಗಿಟ್ಟು ಹೊಲಿದನಂತೆ
ಅಂಗಿ ಸರಿಯಾಯಿತಂತೆ
ಮಂತ್ರಿ ಮಗಳ ಆಸೆಯಂತೆ
ಗೊಂಬೆಗಂಗಿ ಹಾಕಿದರಂತೆ

ತುಂಬ ಚಂದ ಕಂಡಿತಂತೆ
ಗೊಂಬೆಯಾಟ ಆಡಿದಳಂತೆ
ಬೇರೆ ಗೊಂಬೆ ತಂದಳಂತೆ
ಎರಡಕ್ಕೂ ಮದುವೆಯಂತೆ

ಊರಿನ ರಾಜ ಬರುವನಂತೆ
ನಿಂತು ಮದುವೆ ಮಾಡುವನಂತೆ
ನಾನೂ ನೀನೂ ಹೋಗೋಣಂತೆ
ಮದುವೆ ನೋಡಿ ಬರೋಣಂತೆ

– ಗಿರಿಬಾಲೆ



ಪದ್ಯದಲ್ಲಿ ಅನುಸ್ವಾರದಿಂದ ಕೂಡಿರುವ ಪದಗಳನ್ನು ಆರಿಸಿ ಬರೆದು, ಗಮನವಿಟ್ಟು ಸ್ಪಷ್ಟವಾಗಿ ಓದಿರಿ.

NOT TO BE REPUBLISHED ©KTBS

**ಹೀಗೊಂದು ಕಲಿಕೆ**

**ಅನುಸ್ವಾರದಿಂದ ಕೂಡಿದ ಪದಗಳ ಉಚ್ಚಾರಣೆ**

ಅನುಸ್ವಾರದಿಂದ ಕೂಡಿದ ಎಲ್ಲಾ ಪದಗಳ ಉಚ್ಚಾರಣೆ ಒಂದೇ ರೀತಿಯಲ್ಲಿದೆಯೇ? ಗಮನಿಸಿ. ಅನುಸ್ವಾರಗಳಿಂದ ಕೂಡಿದ ಪದವನ್ನು ಉಚ್ಚರಿಸುವಾಗ ಅನುಸ್ವಾರವಿರುವ ಮುಂದಿನ ಅಕ್ಷರವು ವರ್ಗೀಯ ವ್ಯಂಜನದ ಯಾವ ವರ್ಗಕ್ಕೆ ಸೇರುತ್ತದೋ ಆ ವರ್ಗದ ಅನುನಾಸಿಕ ಅಕ್ಷರದ ಉಚ್ಚಾರಣೆಯನ್ನು ಪಡೆಯುತ್ತದೆ.
ಉದಾ : 'ಒಂದು' ಈ ಪದವನ್ನು ಉಚ್ಚರಿಸುವಾಗ ಅನುಸ್ವಾರದ ಮುಂದಿರುವ ಅಕ್ಷರ 'ದ', ಇದು 'ತ' ವರ್ಗಕ್ಕೆ ಸೇರುತ್ತದೆ. ಹೀಗೇ 'ತ' ವರ್ಗದ ಅನುನಾಸಿಕ ಅಕ್ಷರ 'ನ', ಹೀಗಾಗಿ ಈ ಪದದಲ್ಲಿ ಅನುಸ್ವಾರವು 'ನ್' ಉಚ್ಚಾರವನ್ನು ಹೊಂದುತ್ತದೆ. ಒಂದು → ಒನ್ದು.

- 'ಕ್' ವರ್ಗದ ಅನುನಾಸಿಕ ಅಕ್ಷರ 'ಙ್' : ಮಂಗ → ಮಙ್ಗ, ಅಂಕ → ಅಙ್ಕ
- 'ಚ್' ವರ್ಗದ ಅನುನಾಸಿಕ ಅಕ್ಷರ 'ಞ' : ಚಂಚಲ → ಚಞ್ಚಲ, ಮಂಜು → ಮಞ್ಜು
- 'ಟ್' ವರ್ಗದ ಅನುನಾಸಿಕ ಅಕ್ಷರ 'ಣ್' : ಮಂಡಲ → ಮಣ್ಡಲ, ಕಂಠ → ಕಣ್ಠ
- 'ತ್' ವರ್ಗದ ಅನುನಾಸಿಕ ಅಕ್ಷರ 'ನ್' : ಮಂಥರೆ → ಮನ್ಥರೆ, ಕಂದ → ಕನ್ದ
- 'ಪ್' ವರ್ಗದ ಅನುನಾಸಿಕ ಅಕ್ಷರ 'ಮ್' : ಸಂಪಿಗೆ → ಸಮ್ಪಿಗೆ, ಕಂಬ → ಕಮ್ಬ
- ಅನುಸ್ವಾರದ ಮುಂದೆ ಅವರ್ಗೀಯ ವ್ಯಂಜನಗಳು ಬಂದಾಗ 'ಮ್' ಉಚ್ಚಾರಣೆ ಮಾಡಬೇಕು.
  ಸಂಯುಕ್ತ → ಸಮ್ಯುಕ್ತ, ಸಂಶಯ → ಸಮ್ಶಯ, ಶಿಂಷಾ → ಶಿಮ್ಷಾ

NOT TO BE REPUBLISHED @KTBS

**ಚಟುವಟಿಕೆ 2 :** ವೃತ್ತಗಳಲ್ಲಿರುವ ಅಕ್ಷರಗಳನ್ನು ಬಳಸಿಕೊಂಡು ವಿಸರ್ಗದಿಂದ ಕೂಡಿದ ಪದಗಳನ್ನು ಮಾದರಿಯಂತೆ ರಚಿಸಿ ಬರೆಯಿರಿ.




**ಅಂತಃಪುರ**

## ಬುನಾದಿ ಹಂತ – ಚಟುವಟಿಕೆ ಹಾಳೆ 3

# ಗುಣಿತಾಕ್ಷರಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಗುಣಿತಾಕ್ಷರ ಮತ್ತು ಒತ್ತಕ್ಷರಗಳನ್ನು ಗುರುತಿಸಿ ಓದುವರು ಮತ್ತು ಬರೆಯುವರು.

**ಚಟುವಟಿಕೆ 1 :** ಕೊಟ್ಟಿರುವ ಚಿತ್ರಗಳನ್ನು ಗಮನಿಸಿ, ಮಾದರಿಯಂತೆ ಪ್ರತಿ ಚಿತ್ರಕ್ಕೆ ಸಂಬಂಧಿಸಿದ ಸರಳ ಪದಗಳನ್ನು ಹೇಳುತ್ತಾ ಬರೆಯಿರಿ.



**ಮಾದರಿ : ಸಂತೆ**



**ಮಾದರಿ : ಶಾಲೆ**

@KTBS NOT TO BE REPUBLISHED

**ಹೀಗೊಂದು ಕಲಿಕೆ !**

ಗುಣಿತಾಕ್ಷರಗಳಿಲ್ಲದೇ ಭಾಷೆಯನ್ನು ಮಾತನಾಡಲು ಅಥವಾ ಬರೆಯಲು ಸಾಧ್ಯವಾಗುವುದಿಲ್ಲ.
ಗುಣಿತಾಕ್ಷರಗಳು ರಚನೆಯಾಗಲು ಸ್ವರಗಳು ಮುಖ್ಯವಾಗಿವೆ.
ಒತ್ತಕ್ಷರಗಳನ್ನು, ಸಂಯುಕ್ತಾಕ್ಷರಗಳು ಎಂದೂ ಕರೆಯುವರು.

**ಚಟುವಟಿಕೆ 2 :** ಬರೆದ ಪದಗಳನ್ನು ಮಾದರಿಯಂತೆ ಅವುಗಳ ಗುಣಿತಾಕ್ಷರಗಳನ್ನು ಕೊಟ್ಟಿರುವ ಸ್ಥಳದಲ್ಲಿ ಬಿಡಿಸಿ ಬರೆಯಿರಿ.



| | |
|---|---|
| **ಶಾಲೆ** | **ಶ್+ಆ, ಲ್+ಎ** |
| | |
| | |
| | |
| | |
| | |
| | |
| | |

@KTBS NOT TO BE REPUBLISHED

**ಹೀಗೊಂದು ಕಲಿಕೆ !**

ವ್ಯಂಜನಗಳಿಗೆ ಸ್ವರಗಳನ್ನು ಸೇರಿಸಿ ಬರೆದಾಗ 'ಗುಣಿತಾಕ್ಷರ'ಗಳು ರಚನೆಯಾಗುತ್ತವೆ.
ಉದಾ : ಮ್+ಆ=ಮಾ, ರ್+ಈ=ರೀ, ಝ್+ಎ=ಝೆ

## ಬುನಾದಿ ಹಂತ – ಚಟುವಟಿಕೆ ಹಾಳೆ 4
# ಒತ್ತಕ್ಷರಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಗುಣಿತಾಕ್ಷರ ಮತ್ತು ಒತ್ತಕ್ಷರಗಳನ್ನು ಗುರುತಿಸಿ ಓದುವರು, ಬರೆಯುವರು ಮತ್ತು ಅಕ್ಷರ – ಧ್ವನಿ ಸಂಬಂಧೀಕರಿಸಿ ಪ್ರಯೋಗ ಮಾಡುವರು.

**ಚಟುವಟಿಕೆ 1 :** ಮಾದರಿಯಂತೆ ಕೊಟ್ಟಿರುವ ಅಕ್ಷರಗಳ ಒತ್ತಕ್ಷರಗಳನ್ನು ಬರೆಯಿರಿ.

**ಒತ್ತಕ್ಷರಗಳ ಮೂರು ರೂಪಗಳು**

ಮೂಲ ಅಕ್ಷರವನ್ನೇ ಹೋಲುವ ಒತ್ತಕ್ಷರಗಳು

| | | | | |
|---|---|---|---|---|
| **ಜ** | ಣ | ಬ | ವ | ಖ |
| ್ಜ | | | | |
| | ಜ | ಞ | | |
| | | | | |

ಮೂಲ ಅಕ್ಷರವನ್ನು ಹೋಲದ ಒತ್ತಕ್ಷರಗಳು

| | | | |
|---|---|---|---|
| **ತ** | ನ | ಮ | ಯ |
| ್ತ | | | |
| | ರ | ಲ | |
| | | | |

**ತಲಕಟ್ಟು ಇಲ್ಲದ ಒತ್ತಕ್ಷರಗಳು**

| | | | | | | | | | |
|---|---|---|---|---|---|---|---|---|---|
| **ಕ** | ಗ | ಚ | ಟ | ಡ | ದ | ಪ | ಶ | ಷ | ಸ |
| ್ಕ | | | | | | | | | |

| | | | | | | | | | | |
|---|---|---|---|---|---|---|---|---|---|---|
| **ಹ** | ಳ | ಘ | ಛ | ಝ | ಠ | ಢ | ಥ | ಧ | ಫ | ಭ |
| | | | | | | | | | | |

**ಚಟುವಟಿಕೆ 2 :** ಬಿಟ್ಟು ಹೋದ ಒತ್ತಕ್ಷರಕ್ಕೆ ವೃತ್ತಹಾಕಿ, ಪದವನ್ನು ಮಾದರಿಯಂತೆ ಕೊಟ್ಟಿರುವ ಸ್ಥಳದಲ್ಲಿ ಬರೆಯಿರಿ.

| | | | | |
|---|---|---|---|---|
| ಅಮ | ್ಲ | ್ಕ | (್ಮ) | ಅಮ್ಮ |
| ಪುಸಕ | ್ತ | ್ಖ | ್ಗ | |
| ನಾಯ | ್ಚ | ್ಲ | ್ಯ | |
| ಚಮ | ್ಯ | ್ಞ | ್ರ | |
| ಕಬಡಿ | ್ಬ | ್ಡ | ್ಕ | |
| ಬಿಜಳ | ್ಬ | ್ವ | ್ಜ | |

@KTBS NOT TO BE REPUBLISHED

**ಚಟುವಟಿಕೆ 3 :** ಈ ಪ್ರಕೃತಿ ಗೀತೆಯನ್ನು ಶಿಕ್ಷಕರ ಸಹಾಯದಿಂದ ರಾಗಬದ್ಧವಾಗಿ ಹಾಡಿರಿ. ಗೀತೆಯಲ್ಲಿರುವ ಒತ್ತಕ್ಷರದಿಂದ ಕೂಡಿದ ಪದಗಳನ್ನು ಕೊಟ್ಟಿರುವ ಸ್ಥಳದಲ್ಲಿ ಬರೆಯಿರಿ.

## ರಮ್ಯ ಸೃಷ್ಟಿ

ಮಹಾಕಾಶ ಶಿರದ ಮೇಲೆ
ಆಹಾ-ಪೃಥ್ವಿ ರಮ್ಯ ಮುಂದೆ
ಬಾನುಭೂಮಿ ಅಪ್ಪಿದಲ್ಲಿ
ಏನು ರಮ್ಯ ದೂರದಲ್ಲಿ

ಪ್ರಭಾಮಯನು ವಿಭಾಕರನು
ನಭಾಂಗಣದಿ ವಿರಾಜಿಪನು
ಹಾಲು ಮೋಡ ಅಲ್ಲಿ ಇಲ್ಲಿ
ನೀಲಗಗನ ಅಲ್ಲಿ ಇಲ್ಲಿ

ಹೊನ್ನ ಬಿಸಿಲು ಸೂಸಿ ಸೂಸಿ
ರನ್ನನೆಲದಿ ಹಾಸಿ ಹಾಸಿ
ತರುವು ಹಸಿರು ಮರವು ಹಸಿರು
ಮೆರೆವ ಹುಲ್ಲು ಹಚ್ಚಹಸಿರು

ಮರದ ಸಾಲು ಮೇವ ಮೇಕೆ
ತೆರೆದ ಹಕ್ಕಿ ಏನು ಚೆಲುವು
ಎತ್ತು ಎಮ್ಮೆ ಆಡು ಆವು
ಚಿತ್ತಗೊಟ್ಟು ಮೇವ ಠೀವು

ಹೆಣ್ಣು ಗಂಡು ಕೂಸು ಕುನ್ನಿ
ದಿನ್ನಿ ದಿಬ್ಬ ಹಾದಿ ಬೀದಿ
ಏನು ಚಂದ ಏನು ಚೆಲುವು
ಏನು ಬೇಕು ಇದಕು ಮಿಗಿಲು

ಮಹಾಕಾಶ ಶಿರದ ಮೇಲೆ
ಆಹಾ-ಪೃಥ್ವಿ ರಮ್ಯ ಮುಂದೆ
ಬಾನು ಭೂಮಿ ಅಪ್ಪಿದಲ್ಲಿ
ಏನು ರಮ್ಯ ದೂರದಲಿ

ರಚನೆ : ಮಧುರಚೆನ್ನ



@KTBS NOT TO BE REPUBLISHED

ಈ ಪ್ರಕೃತಿಗೀತೆಯಲ್ಲಿರುವ ಒತ್ತಕ್ಷರ ಪದಗಳನ್ನು ಪಟ್ಟಿ ಮಾಡಿ ಬರೆಯಿರಿ.

## ಬುನಾದಿ ಹಂತ – ಚಟುವಟಿಕೆ ಹಾಳೆ 5

# ಒತ್ತಕ್ಷರದ ವಿಧಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಗುಣಿತಾಕ್ಷರ ಮತ್ತು ಒತ್ತಕ್ಷರಗಳನ್ನು ಗುರುತಿಸಿ ಓದುವರು, ಬರೆಯುವರು ಮತ್ತು ಅಕ್ಷರ – ಧ್ವನಿ ಸಂಬಂಧೀಕರಿಸಿ ಬರೆವಣಿಗೆಯಲ್ಲಿ ಬಳಸುವರು.

**ಚಟುವಟಿಕೆ 1 :** ಈ ಕಥೆಯನ್ನು ಗಟ್ಟಿಯಾಗಿ ಓದಿರಿ, ಗುಂಪಿನಲ್ಲಿ ಚರ್ಚಿಸಿ, ಕಥೆಗೆ ಶೀರ್ಷಿಕೆ ನೀಡಿ. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

________________

ಭವ್ಯ, ಕಾವ್ಯ, ಶರಣ್ಯ ಮೂವರೂ ಸಹಪಾಠಿಗಳು. ಶಾಲೆಗೆ ಒಟ್ಟಿಗೆ ಹೋಗಿಬರುತ್ತಿದ್ದರು. ಕಾವ್ಯ ಯಾವಾಗಲೂ ಭವ್ಯಳನ್ನೇ ಅನುಕರಿಸುತ್ತಿದ್ದಳು. ಆದರೆ ಶರಣ್ಯ ಸ್ವಂತ ಬುದ್ಧಿಯಿಂದ ಯೋಚಿಸಿ ಕೆಲಸ ಮಾಡುತ್ತಿದ್ದಳು. ಹೀಗಿದ್ದರೂ ಮೂವರೂ ಒಳ್ಳೆಯ ಗೆಳತಿಯರಾಗಿದ್ದರು.

ಒಂದು ದಿನ ಮೂವರೂ ಶಾಲೆಯಿಂದ ಬರುವಾಗ ದಾರಿಯಲ್ಲಿ ಅಡ್ಡವಾಗಿ ಒಂದು ಮುಳ್ಳಿನಗಿಡ ಬಿದ್ದಿತ್ತು. ಭವ್ಯ ಮುಳ್ಳಿನ ಗಿಡವನ್ನು ಛಂಗನೆ ಹಾರಿ ಮುಂದೆ ಬಂದಳು. ಕಾವ್ಯ ಭವ್ಯಳನ್ನೇ ಅನುಸರಿಸಿ ಮುಳ್ಳಿನ ಗಿಡವನ್ನು ದಾಟಿದಳು. ಆದರೆ ಶರಣ್ಯ 'ಅರೇ! ಈ ಮುಳ್ಳಿನ ಗಿಡದಿಂದ ಈ ದಾರಿಯಲ್ಲಿ ನಡೆಯುವವರೆಲ್ಲರಿಗೂ ತೊಂದರೆ' ಎಂದು ಯೋಚಿಸಿ ಆ ಮುಳ್ಳಿನ ಗಿಡವನ್ನು ಕಷ್ಟಪಟ್ಟು ಎತ್ತಿ ರಸ್ತೆಯ ಪಕ್ಕದಲ್ಲಿದ್ದ ಕಸದ ಬುಟ್ಟಿಗೆ ಹಾಕಿದಳು.

**ಈ ಕಥೆಯಿಂದ ತಿಳಿದು ಬರುವ ಅಂಶವೇನು? ಈ ಕಥೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.**

@KTBS NOT TO BE REPUBLISHED

**ನೀವು ಇಂತಹ ಕಾರ್ಯಗಳನ್ನು ಮಾಡಿದ್ದೀರಾ? ಅದರ ಬಗ್ಗೆ ಬರೆಯಿರಿ.**

**ಚಟುವಟಿಕೆ 2 :** ನೀಡಿದ ಕಥೆಯಲ್ಲಿರುವ ಒತ್ತಕ್ಷರದಿಂದ ಕೂಡಿದ ಪದಗಳಲ್ಲಿ ಸಜಾತಿ ಮತ್ತು ವಿಜಾತಿ ಒತ್ತಕ್ಷರ ಪದಗಳನ್ನು ಕೆಳಗಿನಂತೆ ವಿಭಾಗಿಸಿ ಬರೆಯಿರಿ.

**ಒತ್ತಕ್ಷರ ಪದಗಳು**







@KTBS
NOT TO BE REPUBLISHED

**ಹೀಗೊಂದು ಕಲಿಕೆ !**

ಒಂದು ವ್ಯಂಜನಕ್ಕೆ ಅದೇ ವ್ಯಂಜನ ಒತ್ತಕ್ಷರವಾಗಿದ್ದರೆ ಅದನ್ನು 'ಸಜಾತಿ ಒತ್ತಕ್ಷರ' ಎನ್ನುವರು.
ಉದಾ : ಅಮ್ಮ, ಅಪ್ಪ, ಕನ್ನಡ, ಅಜ್ಜ, ಕಜ್ಜಾಯ, ಮದ್ದಾನೆ.

ಒಂದು ವ್ಯಂಜನಕ್ಕೆ ಬೇರೆ ವ್ಯಂಜನ ಒತ್ತಕ್ಷರವಾಗಿದ್ದರೆ ಅದನ್ನು 'ವಿಜಾತಿ ಒತ್ತಕ್ಷರ' ಎನ್ನುವರು.
ಉದಾ : ಒತ್ತಕ್ಷರ, ಚಿತ್ರ, ವ್ಯಕ್ತಿ, ಅಭಿಪ್ರಾಯ, ವಾಕ್ಯ, ವಿದ್ಯಾರ್ಥಿ.

ಬುನಾದಿ ಹಂತ - ಚಟುವಟಿಕೆ ಹಾಳೆ 6

# ವಾಕ್ಯ ರಚನೆ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಓದಿದ ಸಾಹಿತ್ಯ ವಿಷಯಗಳ ಬಗ್ಗೆ ತಾರ್ಕಿಕ ಆಲೋಚನೆ ಮಾಡಿ ಏಕೆ? ಏನು? ಹೇಗೆ? ಯಾವಾಗ? ಎಂದು ಪ್ರಶ್ನಿಸುವರು.

**ಚಟುವಟಿಕೆ 1 :** ಅದಲು-ಬದಲಾದ ಅಕ್ಷರಗಳನ್ನು ಅರ್ಥಬದ್ಧವಾಗಿ ಜೋಡಿಸಿ ಮಾದರಿಯಂತೆ ಪದರಚಿಸಿ ಬರೆಯಿರಿ.

| | |
|---|---|
| ಕತೆರಿನಾಗ - ನಾಗರಿಕತೆ | ನಜ್ಞಾವಿ |
| ತ್ರ್ಯತಂಸ್ವಾ | ತಗೀಸಂ |
| ಸರರಿಪ | ತಿಕೃಪ್ರ |

**ಚಟುವಟಿಕೆ 2 :** ಅದಲು-ಬದಲಾದ ಪದಗಳನ್ನು ಅರ್ಥಬದ್ಧವಾಗಿ ಜೋಡಿಸಿ ವಾಕ್ಯ ರಚಿಸಿ ಬರೆಯಿರಿ.

1) ನವಿಲು ರಾಷ್ಟ್ರಪಕ್ಷಿ ಭಾರತದ.

_______________

2) ಅಮರವಾಗಿದೆ ಹೆಸರು ಬಸವಣ್ಣನವರ ವಚನ ಸಾಹಿತ್ಯದಲ್ಲಿ

_______________

3) ಪರಿಸರವು ನಾಶವಾಗುತ್ತಿದೆ ನಗರೀಕರಣದಿಂದ

_______________

4) ನಾಡು ನಮ್ಮ ಕರ್ನಾಟಕ

_______________

5) ರಾಜ್ಯದ ಯಕ್ಷಗಾನವು ನಮ್ಮ ಕಲೆಯಾಗಿದೆ

_______________

6) ವಾಯುಮಾಲಿನ್ಯದಿಂದ ಹದಗೆಡುತ್ತಿದೆ ಆರೋಗ್ಯವು

_______________

**ಹೀಗೊಂದು ಕಲಿಕೆ !**

ಸಂಪೂರ್ಣ ಅರ್ಥವನ್ನು ನೀಡುವ ಪದಗಳ ಸಮೂಹಕ್ಕೆ 'ವಾಕ್ಯ' ಎನ್ನುವರು.

@KTBS NOT TO BE REPUBLISHED

**ಚಟುವಟಿಕೆ 3 :** ಈ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.



ಪ್ಲಾಸ್ಟಿಕ್ ಬಳಕೆ ನಮ್ಮ ದಿನನಿತ್ಯ ಜೀವನದಲ್ಲಿ ಒಂದು ಅನಿವಾರ್ಯವಾದ ಅಂಶವಾಗಿದೆ. ಇದು ತನ್ನ ದೀರ್ಘ ಬಾಳಿಕೆ, ಕಡಿಮೆ ಬೆಲೆ ಮತ್ತು ಹಲವು ವಿಶೇಷತೆಯ ಕಾರಣದಿಂದ ಸರ್ವಸಾಮಾನ್ಯವಾಗಿ ಬಳಕೆಯಲ್ಲಿದೆ. ಆದರೆ ಇದರ ಅತಿಯಾದ ಬಳಕೆ ಮತ್ತು ತ್ಯಾಜ್ಯ ನಿರ್ವಹಣೆಯ ಕೊರತೆ ಪರಿಸರದ ಮೇಲೆ ಗಂಭೀರ ಪರಿಣಾಮವನ್ನು ಉಂಟುಮಾಡುತ್ತಿದೆ.

ಪ್ಲಾಸ್ಟಿಕ್ ಅನ್ನು ಪೆಟ್ರೋಲಿಯಂ ಪದಾರ್ಥಗಳಿಂದ ಉತ್ಪಾದಿಸಲಾಗುತ್ತದೆ. ಪ್ಲಾಸ್ಟಿಕ್ ಬಳಕೆಯು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಬಾಟಲ್‌ಗಳು, ಬ್ಯಾಗ್‌ಗಳು, ಪ್ಯಾಕೇಜಿಂಗ್ ಪದಾರ್ಥಗಳು, ಆಟಿಕೆಗಳು, ವಿವಿಧ ರೀತಿಯ ವಸ್ತುಗಳು, ಎಲೆಕ್ಟ್ರಾನಿಕ್ ಉಪಕರಣಗಳು ಮುಂತಾದವುಗಳನ್ನು ತಯಾರಿಸಲು ಪ್ಲಾಸ್ಟಿಕ್ ಬಳಸಲಾಗುತ್ತದೆ. ಪ್ಲಾಸ್ಟಿಕ್ ತ್ಯಾಜ್ಯವು ನದಿಗಳು, ಸಾಗರಗಳು ಮತ್ತು ಜಮೀನಿನಲ್ಲಿ ಸಂಗ್ರಹವಾಗುತ್ತವೆ. ಇದು ಪ್ರಾಣಿಗಳ ಆರೋಗ್ಯಕ್ಕೆ ಹಾನಿಯನ್ನು ಉಂಟುಮಾಡುತ್ತದೆ. ಪ್ಲಾಸ್ಟಿಕ್ ತ್ಯಾಜ್ಯವು ಮಣ್ಣಿನ ಗುಣಮಟ್ಟವನ್ನು ಹಾಳುಮಾಡುತ್ತದೆ. ದೀರ್ಘಕಾಲದವರೆಗೆ ಬಾಳಿಕೆ ಬರುವುದರಿಂದ ಇದು ತ್ವರಿತವಾಗಿ ಮಣ್ಣಿನಲ್ಲಿ ವಿಲೀನವಾಗುವುದಿಲ್ಲ.

ಪ್ಲಾಸ್ಟಿಕ್ ತ್ಯಾಜ್ಯವು ಮಳೆಯ ನೀರನ್ನು ಶೇಖರಿಸಲು ಅಡ್ಡಿ ಮಾಡುತ್ತದೆ. ಇದು ಪ್ರವಾಹಗಳಿಗೆ ದಾರಿ ಮಾಡಿಕೊಡುತ್ತದೆ. ಪ್ಲಾಸ್ಟಿಕನ್ನು ಕಡಿತಗೊಳಿಸಲು ಇರುವ ಮಾರ್ಗಗಳೆಂದರೆ ಪ್ಲಾಸ್ಟಿಕನ್ನು ಪುನರ್ಬಳಕೆ ಮಾಡುವುದು, ಪ್ಲಾಸ್ಟಿಕ್ ಬದಲಿಗೆ ಕಾಗದ, ಬಾಳೆಎಲೆ, ಅಡಿಕೆಪಟ್ಟೆ ಹೀಗೇ ಮುಂತಾದ ಪರಿಸರಸ್ನೇಹಿ ವಸ್ತುಗಳನ್ನು ಬಳಸುವುದಾಗಿದೆ.

@KTBS NOT TO BE REPUBLISHED

1) ಪ್ಲಾಸ್ಟಿಕ್ ಅನ್ನು ಯಾವ ಪದಾರ್ಥಗಳಿಂದ ಉತ್ಪಾದಿಸಲಾಗುತ್ತದೆ?

2) ಪ್ಲಾಸ್ಟಿಕ್ ತ್ಯಾಜ್ಯವು ಹೆಚ್ಚಾಗಿ ಎಲ್ಲೆಲ್ಲಿ ಸಂಗ್ರಹವಾಗುತ್ತಿದೆ?

3) ಪ್ಲಾಸ್ಟಿಕ್ ಬಳಕೆಯಿಂದ ಆಗುವ ದುಷ್ಪರಿಣಾಮಗಳೇನು?

4) ಪ್ಲಾಸ್ಟಿಕ್ ಬಳಕೆಯನ್ನು ಕಡಿತಗೊಳಿಸಲು ನೀನು ಸೂಚಿಸುವ ಎರಡು ಮಾರ್ಗಗಳೇನು?

## ಬುನಾದಿ ಹಂತ - ಚಟುವಟಿಕೆ ಹಾಳೆ 7
# ವಾಕ್ಯದ ಘಟಕಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿವಿಧ ಉದ್ದೇಶಗಳಿಗಾಗಿ ಬರೆಯುತ್ತಿರುವ ಲೇಖನಗಳಲ್ಲಿ ಶಬ್ದಗಳ ಆಯ್ಕೆ, ವಾಕ್ಯ ರಚನೆ, ವಾಕ್ಯದ ಘಟಕಗಳನ್ನು ತಿಳಿಯುವರು.

**ಚಟುವಟಿಕೆ 1 :** ಕೊಟ್ಟಿರುವ ಚಿತ್ರಗಳಿಗೆ ಸರಿಹೊಂದುವಂತೆ ಎರಡೆರಡು ವಾಕ್ಯಗಳನ್ನು ಮಾದರಿಯಂತೆ ರಚಿಸಿ ಬರೆಯಿರಿ.



ವಿಮಲ ಪುಸ್ತಕದಲ್ಲಿ ಬರೆಯುತ್ತಿದ್ದಾಳೆ.







@KTBS NOT TO BE REPUBLISHED

**ಚಟುವಟಿಕೆ 2 :** ಮೇಲಿನ ಚಿತ್ರದಲ್ಲಿ ಬರೆದ ವಾಕ್ಯಗಳನ್ನು ಆಧರಿಸಿ ಮಾದರಿಯಂತೆ ಉತ್ತರಿಸಿ.

| ಕ್ರ.ಸಂ | ಕೆಲಸವನ್ನು ಸೂಚಿಸುವ ಪದ | ಕೆಲಸವನ್ನು ಮಾಡುತ್ತಿರುವವರು | ಎಲ್ಲಿ? ಏನು? ಹೇಗೆ? |
|---|---|---|---|
| 1 | ಬರೆಯುತ್ತಿದ್ದಾಳೆ | ವಿಮಲ | ಪುಸ್ತಕದಲ್ಲಿ |
| 2 | | | |
| 3 | | | |
| 4 | | | |
| 5 | | | |
| 6 | | | |
| 7 | | | |
| 8 | | | |

**ಚಟುವಟಿಕೆ 3 :** ಈ ವಾಕ್ಯಗಳಲ್ಲಿನ ಕರ್ತೃಪದ, ಕರ್ಮಪದ ಮತ್ತು ಕ್ರಿಯಾಪದಗಳನ್ನು ಗುರುತಿಸಿ ಬರೆಯಿರಿ.

| ಕ್ರ.ಸಂ | ವಾಕ್ಯ | ಕರ್ತೃಪದ | ಕರ್ಮಪದ | ಕ್ರಿಯಾಪದ |
|---|---|---|---|---|
| 01. | ಸರಸ್ವತಿ ಶಾಲೆಗೆ ಹೋಗುತ್ತಾಳೆ. | | | |
| 02. | ಮೊಹಮ್ಮದನು ಮನೆಗೆ ಬರುತ್ತಾನೆ. | | | |
| 03. | ಗಿಳಿಗಳು ಆಕಾಶದಲ್ಲಿ ಹಾರಾಡುತ್ತವೆ. | | | |
| 04. | ಅಮ್ಮ, ಅಣ್ಣನನ್ನು ಕರೆಯುವೆನು. | | | |
| 05. | ಸಿದ್ಧಾರ್ಥನು ಕರೆಯನ್ನು ಕೇಳಿಸಿಕೊಳ್ಳಲಿಲ್ಲ. | | | |
| 06. | ಶ್ರೀನಿವಾಸನು ಹೆಚ್ಚಾಗಿ ಮಾತನಾಡುತ್ತಾನೆ. | | | |
| 07. | ರೈತರು ಕಾಳುಗಳನ್ನು ಬಿತ್ತುತ್ತಿದ್ದಾರೆ. | | | |
| 08. | ಮಕ್ಕಳು ಸಂಭ್ರಮದಿಂದ ಕುಣಿಯುತ್ತಿದ್ದಾರೆ. | | | |
| 09. | ಕೊಕ್ಕರೆಗಳು ಮೀನುಗಳನ್ನು ತಿನ್ನುತ್ತಿವೆ. | | | |
| 10. | ಕಲ್ಲು ಬೀಸಿ ಕನ್ನಡಿಯು ಒಡೆಯಿತು. | | | |

@KTBS NOT TO BE REPUBLISHED

**ಹೀಗೊಂದು ಕಲಿಕೆ !**

-: ವಾಕ್ಯದ ಘಟಕಗಳು :-

ಒಂದು ಅರ್ಥಪೂರ್ಣ ವಾಕ್ಯವನ್ನು ರಚಿಸಲು ಕರ್ತೃ, ಕರ್ಮ, ಕ್ರಿಯಾಪದಗಳು ಮುಖ್ಯವಾಗಿವೆ.

ಕರ್ತೃಪದ : ವಾಕ್ಯದಲ್ಲಿ ನಡೆಯುತ್ತಿರುವ ಕೆಲಸವನ್ನು ಮಾಡುತ್ತಿರುವವರನ್ನು ಸೂಚಿಸುವ ಪದವೇ ಕರ್ತೃಪದವಾಗಿರುತ್ತದೆ.

ಕರ್ಮಪದ : ವಾಕ್ಯದಲ್ಲಿ ಕರ್ತೃವಿಗೆ ಕ್ರಿಯೆಯನ್ನು ನಡೆಸಲು ಸಹಾಯಕವಾಗುವ ಪದವೇ 'ಕರ್ಮಪದ' ಎನ್ನುತ್ತೇವೆ. ಇದು ಎಲ್ಲಿ? ಏಕೆ? ಹೇಗೆ? ಎಂಬ ಪ್ರಶ್ನೆಗಳಿಗೆ ಉತ್ತರ ನೀಡುತ್ತದೆ.

ಕ್ರಿಯಾಪದ : ವಾಕ್ಯದಲ್ಲಿ ನಡೆಯುತ್ತಿರುವ ಕೆಲಸವನ್ನು ಸೂಚಿಸುವ ಪದವೇ 'ಕ್ರಿಯಾಪದ'.

## ಬುನಾದಿ ಹಂತ – ಚಟುವಟಿಕೆ ಹಾಳೆ 8
# ನಾಮಪದಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಭಾಷಾ ವ್ಯಾಕರಣದ ಅಂಶಗಳನ್ನು (ಉದಾ: ನಾಮಪದಗಳು, ಕ್ರಿಯಾ, ಕಾಲ, ವಿರುದ್ಧಾರ್ಥಕ ಪದ ಮುಂತಾದವು) ಗುರುತಿಸುವರು. ಅವುಗಳ ಬಗ್ಗೆ ಸೂಕ್ತವಾಗಿ ಬರೆಯುವರು.

**ಚಟುವಟಿಕೆ 1 :** ಈ ಪದ್ಯವನ್ನು ಹಾಡಿ, ಪದ್ಯದಲ್ಲಿರುವ ವಸ್ತುಗಳು, ಪ್ರಾಣಿ–ಪಕ್ಷಿಗಳು, ಸ್ಥಳಗಳ ಹೆಸರುಗಳನ್ನು ಪಟ್ಟಿಮಾಡಿ.

ಪುಟ್ಟ ಹಕ್ಕಿರೆಕ್ಕೆ ಬಿಚ್ಚಿ ಪುರ್ರನೆಂದು ಹಾರಿತು
ಬೆಟ್ಟ ಗುಡ್ಡ ಹಳ್ಳಕೊಳ್ಳ ನೋಡಿಕೊಂಡು ಸಾಗಿತು
ಹಚ್ಚಹಸಿರು ಜೀವನ ಉಸಿರು ತಂಪು ಗಾಳಿ ಸವಿಯಿತು
ಕೇಕೆ ಹಾಕಿ ಹಿಗ್ಗಿನಿಂದ ಸಂತಸದಿ ನಲಿತು
ಚಿಕ್ಕ ಚಿಕ್ಕ ಹುಲ್ಲು ಕಡ್ಡಿ ಕೊಕ್ಕಿನಿಂದ ಹೆಕ್ಕಿತು
ಎತ್ತಿ ತಂದು ತನ್ನ ಗೂಡು ಶ್ರಮದಿಂದ ಕಟ್ಟಿತು
ಸೊಕ್ಕಿದಂತ ಕೋತಿಯೊಂದು ಮರದ ಮೇಲೆ ಹತ್ತಿತು
ಚೇಷ್ಟೆ ಮಾಡಿ ಹಲ್ಲೆ ಮಾಡಿ ಗೂಡನೆಲ್ಲ ಕಿತ್ತಿತು
ಹೊಟ್ಟೆ ತುಂಬಿಕೊಳ್ಳಲೆಂದು ಹಕ್ಕಿ ಹೊರಗೆ ಹೋಗಿತ್ತು
ಸಂಜೆ ಗೂಡು ಸೇರಲೆಂದು ಬಂದು ಅಲ್ಲಿ ನೋಡಿತು
ಮರದ ಮೇಲೆ ತನ್ನ ಗೂಡು ಇಲ್ಲದನ್ನು ನೋಡಿತು
ದುಃಖದಿಂದ ಕಣ್ಣೀರ ಹರಿಸಿ ತಾನು ನೊಂದಿತು.

(ಸಂಗ್ರಹ)



© KTBS NOT TO BE REPUBLISHED

**ಹೀಗೊಂದು ಕಲಿಕೆ !**

ಯಾವುದೇ ವಸ್ತು, ವ್ಯಕ್ತಿ, ಸ್ಥಳಗಳ ಹೆಸರಾಗಿರಬಹುದು ಅಥವಾ ಯಾವುದೇ ಗುಂಪನ್ನು ಸೂಚಿಸುವ ಪದವಾಗಿರಬಹುದು ಅಥವಾ ಗುಣ, ಸ್ವಭಾವ, ಸಂಖ್ಯೆ, ಸ್ಥಾನ, ಅಳತೆ, ತೂಕ ಹೀಗೆ ಯಾವುದನ್ನೇ ಆಗಲಿ ಗುರುತಿಸಲು ಇಟ್ಟಿರುವ ಹೆಸರುಗಳನ್ನು **'ನಾಮಪದ'** ಎನ್ನುವರು.

**ಚಟುವಟಿಕೆ 2 :** ಕೊಟ್ಟಿರುವ ಸುಳಿವುಗಳನ್ನು ಬಳಸಿಕೊಂಡು ರಾಮಾಯಣ, ಮಹಾಭಾರತದ ಪಾತ್ರಗಳ ಹೆಸರುಗಳಿಂದ ಪದಬಂಧವನ್ನು ಪೂರ್ಣಗೊಳಿಸಿರಿ.




@KTBS NOT TO BE REPUBLISHED

**ಮೇಲಿನಿಂದ ಕೆಳಕ್ಕೆ :**

1) ಧೃತರಾಷ್ಟ್ರನ ಹೆಂಡತಿ (3)
3) ಪಾಂಡವರಲ್ಲಿ ಮೊದಲನೆಯವನು (4)
4) ಗಾಂಧಾರಿಯ ಸಹೋದರ (3)
6) ದ್ರೌಪದಿಗೆ ಸಭೆಯಲ್ಲಿ ಅವಮಾನ ಮಾಡಿದವನು (4)
7) ವಿಷ್ಣುವಿನ ಎಂಟನೆ ಅವತಾರ (2)
8) ಲಂಕಾಧಿಪತಿ (3)
9) ಯಾವಾಗಲೂ ನಿದ್ರಿಸುವವನು (4)
10) ನಿಜವನ್ನು ಹೊಂದಿರುವ ಕೃಷ್ಣನ ಹೆಂಡತಿ (4)
11) ಕುರುಕ್ಷೇತ್ರ ಯುದ್ಧದಲ್ಲಿ ಧೈರ್ಯವಾಗಿ ಹೋರಾಡಿದ ಬಾಲಕ (4)
13) ಪಾಂಡವರ ತಾಯಿ (2)

**ಎಡದಿಂದ ಬಲಕ್ಕೆ :**

2) ಶ್ರೀಕೃಷ್ಣನ ಆತ್ಮೀಯ ಗೆಳತಿ ಇವಳು (2)
4) ರಾಮನಿಗಾಗಿ ಕಾದು ಕುಳಿತವಳು (3)
5) ಕೌರವರ ತಾಯಿಯ ದೇಶ (3)
8) ರಾಮನನ್ನು ಕುರಿತ ಮಹಾಕಾವ್ಯ (4)
11) ಪಾಂಡವರಲ್ಲಿ ಮಧ್ಯದವನು (3)
12) ಸೀತೆಯ ತಂದೆ ಇಲ್ಲಿ ತಿರುಗಿದ್ದಾನೆ (3)
14) ಇವನು ದಾನಶೂರ (2)

# ವಸ್ತುವಾಚಕಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿವಿಧ ರಚನೆಗಳಲ್ಲಿ ಬಂದಿರುವ ವಸ್ತುವಾಚಕ ಪದಗಳನ್ನು ಅರ್ಥಕ್ಕನುಸಾರ ಸಾಂದರ್ಭಿಕವಾಗಿ ಬಳಸುವರು.

**ಚಟುವಟಿಕೆ 1 :** ಕೊಟ್ಟಿರುವ ಕಥೆಯನ್ನು ಓದಿ ನೀಡಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.



ಒಂದು ದಿನ ಒಬ್ಬ ಪಂಡಿತನು ನದಿ ದಾಟಿ ಆಚೆ ಊರಿಗೆ ಹೊರಟಿದ್ದನು. ಅಂಬಿಗನು ದೋಣಿಯನ್ನು ನಡೆಸುತ್ತಿದ್ದನು. ಪಂಡಿತನು ಅಂಬಿಗನನ್ನು ಕುರಿತು "ಅಯ್ಯಾ! ಅಂಬಿಗ, ನಿನಗೆ ಸಂಸ್ಕೃತ ಶ್ಲೋಕಗಳು ಗೊತ್ತೇ" ಎಂದು ಕೇಳಿದನು. ಅಂಬಿಗ “ಇಲ್ಲ” ಎಂದನು. "ಹಾಗಾದರೆ ನಿನ್ನ ಶೇಕಡ 25 ಭಾಗ ಜೀವನ ವ್ಯರ್ಥ" ಎಂದನು. "ಹೋಗಲಿ ನಿನಗೆ ಓದಲಿಕ್ಕೆ ಬರುವುದೇ?" ಎಂದು ಕೇಳಿದನು. ಆಗ ಅಂಬಿಗನು “ಇಲ್ಲ” ಎಂದನು. ಆಗ ಪಂಡಿತನು, “ಈಗ ನಿನ್ನ ಶೇಕಡ 50 ಭಾಗ ಜೀವನ ವ್ಯರ್ಥ” ಎಂದನು. "ನಿನಗೆ ಬರೆಯಲಿಕ್ಕೆ ಬರುವುದೇ?" ಎಂದು ಕೇಳಿದನು. “ಇಲ್ಲ” ಎಂದ ಅಂಬಿಗ, ಆಗ ಪಂಡಿತನು "ಈಗ ನಿನ್ನ ಶೇಕಡ 75 ಭಾಗ ಜೀವನ ವ್ಯರ್ಥ" ಎಂದನು. ಅಷ್ಟರಲ್ಲಿ ದೋಣಿಯಲ್ಲಿ ರಂಧ್ರ ಉಂಟಾಗಿ ದೋಣಿಯೊಳಕ್ಕೆ ನೀರು ಬರಲು ಪ್ರಾರಂಭಿಸಿತು. ಆಗ ಅಂಬಿಗನು "ಸ್ವಾಮಿ! ಪಂಡಿತರೇ, ತಮಗೆ ಈಜು ಬರುವುದೇ?" ಎಂದು ಕೇಳಿದನು. ಆಗ ಪಂಡಿತನು “ಇಲ್ಲ” ಎಂದನು. ಆಗ ಅಂಬಿಗನು "ಹಾಗಾದರೆ ಈಗ ನಿಮ್ಮ ಶೇಕಡ ನೂರಕ್ಕೆ ನೂರು ಜೀವನ ವ್ಯರ್ಥ" ಎಂದನು. ನಂತರ ಅಂಬಿಗನು ದೋಣಿಯಲ್ಲಿದ್ದ ನೀರನ್ನು ಹೊರಗೆ ಹಾಕಲು ಪ್ರಾರಂಭಿಸಿದನು. ಆಗ ಪಂಡಿತನು “ಆ ನೀರನ್ನು ಏಕೆ ಹೊರಗೆ ಹಾಕುವೆ?” ಎಂದನು. ಆಗ ಅಂಬಿಗನು “ಸ್ವಾಮಿ ಪಂಡಿತರೇ ದೋಣಿ ಚಲಿಸಲು ನೀರು ಬೇಕು, ಆದರೆ ಅದೇ ನೀರು ದೋಣಿಯೊಳಗೆ ಬಂದರೆ ದೋಣಿ ಮುಳುಗುವುದು”, ಎಂದು ತಿಳಿಸುತ್ತಾ ಎಲ್ಲಾ ವಿದ್ಯೆಗಳ ಜೊತೆಗೆ ಕಷ್ಟಕ್ಕಾಗುವ ವಿದ್ಯೆಗಳನ್ನು ಕಲಿಯಬೇಕು ಎಂದು ತಿಳಿಸಿದನು. ಪಂಡಿತನು ನಾಚಿಕೆಯಿಂದ ತಲೆತಗ್ಗಿಸಿದನು.

© KTBS NOT TO BE REPUBLISHED

**ಪ್ರಶ್ನೆಗಳು :**

1) ದೋಣಿಯನ್ನು ನಡೆಸುತ್ತಿದ್ದವನು ____________________

2) ಅಂಬಿಗನನ್ನು ಮೂದಲಿಸುತ್ತಿದ್ದವನು ________________

3) ಎಲ್ಲಾ ವಿದ್ಯೆಗಳ ಜೊತೆಗೆ _______________ ವಿದ್ಯೆಗಳನ್ನು ಕಲಿಯಬೇಕು.

4) ದೋಣಿ _________________ ಮೇಲೆ ಚಲಿಸುತ್ತದೆ.

5) ಈ ಕಥೆಗೆ ನೀಡಬಹುದಾದ ಶೀರ್ಷಿಕೆ __________________________

**ಚಟುವಟಿಕೆ 2 :** ಕೆಳಗಿನ ವಾಕ್ಯಗಳಲ್ಲಿ ಗೆರೆ ಎಳೆದ ಪದಗಳನ್ನು ಆಯಾ ನಿಗದಿತ ಚಿತ್ರದಲ್ಲಿ ಬರೆಯಿರಿ.

1. **<u>ನದಿ</u>**ಗಳು ಜನರ ಬದುಕಿನ ಜೀವನಾಡಿಗಳಾಗಿವೆ.
2. ನಮ್ಮ **<u>ಊರು</u>** ಮೈಸೂರು.
3. ನಮ್ಮ **<u>ರಾಜ್ಯ</u>** ಕರ್ನಾಟಕ.
4. ನಿಯತ್ತಿಗೆ ಹೆಸರಾದ **<u>ಪ್ರಾಣಿ</u>** ನಾಯಿ.





1. **<u>ಕಲ್ಪನಾ</u>** ತುಂಬಾ ಸುಂದರವಾದ ಹುಡುಗಿಯಾಗಿದ್ದಾಳೆ.
2. **<u>ಸುರೇಶ</u>**ನು ಚೆನ್ನಾಗಿ ನೃತ್ಯ ಮಾಡುತ್ತಾನೆ.
3. ನಮ್ಮ ಮನೆಯಲ್ಲಿರುವ ಹಸುವಿನ ಹೆಸರು **<u>ಗೌರಿ</u>**.
4. **<u>ಹಿಮಾಲಯ</u>** ತುಂಬಾ ಎತ್ತರವಾದ ಪರ್ವತವಾಗಿದೆ.



1. **<u>ಪುರೋಹಿತರು</u>** ತುಂಬಾ ಚೆನ್ನಾಗಿ ದೇವರಿಗೆ ಅಲಂಕಾರ ಮಾಡಿದ್ದಾರೆ.
2. **<u>ಶಿಕ್ಷಕರು</u>** ಮಕ್ಕಳಿಗೆ ಒಳ್ಳೆಯ ಮೌಲ್ಯಗಳನ್ನು ಕಲಿಸುತ್ತಾರೆ.
3. ಸಂಗೀತಾಳು ಉತ್ತಮ **<u>ಚಿತ್ರಗಾರ್ತಿ</u>** ಆಗಿದ್ದಾಳೆ.
4. **<u>ಹೂವಾಡಗಿತ್ತಿ</u>** ಹೂವಿನ ಮಾಲೆಯನ್ನು ಹುತಾತ್ಮ ಸೈನಿಕರಿಗೆ ಅರ್ಪಿಸಿದಳು.

@KTBS NOT TO BE REPUBLISHED

**ಹೀಗೊಂದು ಕಲಿಕೆ !**

**ವಸ್ತುವಾಚಕದಲ್ಲಿ ಮೂರು ವಿಧಗಳಿವೆ :**

1) **ರೂಢನಾಮ :** ರೂಢಿಯಿಂದ ಬಂದ ಪದಗಳನ್ನು 'ರೂಢನಾಮ' ಎನ್ನುತ್ತೇವೆ.
ಉದಾ : **ಗಂಡು, ಹೆಣ್ಣು, ಪಕ್ಷಿ, ಸಮುದ್ರ.**
2) **ಅಂಕಿತನಾಮ :** ವ್ಯವಹಾರದ ದೃಷ್ಟಿಯಿಂದ ಇಟ್ಟುಕೊಂಡ ಹೆಸರುಗಳನ್ನು 'ಅಂಕಿತನಾಮ' ಎನ್ನುತ್ತೇವೆ.
ಉದಾ : **ಕೃಷ್ಣ, ಚಾಮುಂಡಿಬೆಟ್ಟ, ಕಾವೇರಿನದಿ.**
3) **ಅನ್ವರ್ಥನಾಮ :** ಗುಣ, ಸ್ವಭಾವ, ವೃತ್ತಿ ಇವುಗಳನ್ನು ಸೂಚಿಸುವ ಪದಗಳನ್ನು 'ಅನ್ವರ್ಥನಾಮ' ಎನ್ನುತ್ತೇವೆ.
ಉದಾ : **ವಿದ್ಯಾರ್ಥಿ, ವೈದ್ಯ, ಕುಂಬಾರ, ಚಾಲಕ.**

ಬುನಾದಿ ಹಂತ - ಚಟುವಟಿಕೆ ಹಾಳೆ 10

# ವಚನಗಳು ಮತ್ತು ಲಿಂಗಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಭಾಷೆಯ ಸೂಕ್ಷ್ಮ ಅಂಶಗಳನ್ನು ಉದಾಹರಣೆಗೆ, ಪದಗಳ ಪುನರಾವರ್ತನೆ, ಪದಗಳ ಅರ್ಥ, ಸರ್ವನಾಮ, ವಿಶೇಷಣ, ಲಿಂಗವಾಚಕ, ವಚನ ಮುಂತಾದವುಗಳ ಬಗ್ಗೆ ಎಚ್ಚರವಹಿಸುತ್ತ ಬರೆಯುವರು.

**ಚಟುವಟಿಕೆ 1 :** ಈ ಚಿತ್ರವನ್ನು ಗಮನಿಸಿ ಮಾದರಿಯಂತೆ ಕೊಟ್ಟಿರುವ ಸ್ಥಳದಲ್ಲಿ ಸೂಕ್ತ ಉತ್ತರ ಬರೆಯಿರಿ.



| ಒಂದೇ ಇರುವುದು | ಒಂದಕ್ಕಿಂತ ಹೆಚ್ಚಿರುವುದು |
|---|---|
| **ಚಿತ್ರಪಟ** | **ಹುಡುಗಿಯರು** |
| | |
| | |
| | |
| | |
| | |
| | |

© KTBS NOT TO BE REPUBLISHED

**ಹೀಗೊಂದು ಕಲಿಕೆ !**

ವಚನಗಳು

1) **ಏಕವಚನ :** ವಸ್ತು, ವ್ಯಕ್ತಿ, ಪ್ರಾಣಿ ಅಥವಾ ಯಾವುದೇ ಆಗಿರಲಿ ಕೇವಲ ಒಂದೇ ಒಂದು ಇರುವುದನ್ನು ಸೂಚಿಸುವ ಪದಗಳೇ ಏಕವಚನ ಪದಗಳು. ಉದಾ : ಹುಡುಗ, ನದಿ.
2) **ಬಹುವಚನ :** ಒಂದಕ್ಕಿಂತ ಹೆಚ್ಚಿರುವುದನ್ನು ಸೂಚಿಸುವ ಪದಗಳೇ ಬಹುವಚನ ಪದಗಳು. **ಉದಾ :** ಹುಡುಗರು, ನದಿಗಳು

**ಚಟುವಟಿಕೆ 2 :** ಕೆಳಗಿನ ಕಥೆಯನ್ನು ಓದಿಕೊಂಡು ಕೊಟ್ಟಿರುವ ಸ್ಥಳಗಳಲ್ಲಿ ಸೂಕ್ತ ಉತ್ತರ ಬರೆಯಿರಿ.



ಪುರಾಣ ಕಾಲದಲ್ಲಿ ದೇವತೆಗಳು ಮತ್ತು ಅಸುರರು ಅಮೃತವನ್ನು ಪಡೆಯಲು ಕ್ಷೀರಸಾಗರವನ್ನು ಮಥಿಸಲು ನಿರ್ಧರಿಸಿದರು. ಮಥನಕ್ಕಾಗಿ ಮಂದರಾಚಲ ಪರ್ವತವನ್ನು ಕಡೆಗೋಲಿನಂತೆ ಉಪಯೋಗಿಸಲಾಯಿತು ಮತ್ತು ವಾಸುಕಿ ಎಂಬ ನಾಗರಾಜನನ್ನು ಹಗ್ಗವಾಗಿ ಬಳಸಲಾಯಿತು.

ಮಥನ ಪ್ರಾರಂಭವಾದಾಗ ಮೊದಲು ಹಾಲಾಹಲ (ವಿಷ) ಹೊರಬಂದಿತು. ಅದು ಭಯಾನಕವಾದದ್ದು. ಎಲ್ಲಾ ದೇವತೆಗಳು ಭಯದಿಂದ ತಮ್ಮನ್ನು ರಕ್ಷಿಸಲು ಶಿವನನ್ನು ಪ್ರಾರ್ಥಿಸಿದರು. ಶಿವನು ಆ ಹಾಲಾಹಲವನ್ನು ತನ್ನ ಕಂಠದಲ್ಲಿ ಇಟ್ಟುಕೊಂಡನು. ಈ ಕಾರಣಕ್ಕೆ ಆತನಿಗೆ ನೀಲಕಂಠ ಎಂಬ ಹೆಸರು ಬಂದಿತು.

ಆನಂತರ ಮಥನದಿಂದ ಹಲವು ಅಮೂಲ್ಯ ವಸ್ತುಗಳು ಹೊರಬಂದವು. ಮೊದಲಿಗೆ ಲಕ್ಷ್ಮೀದೇವಿ ನಂತರ ಉಭಯಲೋಕಗಳನ್ನು ಆನಂದದಿಂದ ತುಂಬುತ್ತಾ ಪಾರ್ವತಿದೇವಿಯು ಮುಂದೆ ಕಾಣಿಸಿಕೊಂಡಳು. ನಂತರ ಐರಾವತ ಹಸ್ತಿಯು (ಆನೆ), ಕಲ್ಪವೃಕ್ಷ (ತೆಂಗಿನಮರ), ಕಾಮಧೇನು (ಹಸು) ಮತ್ತು ಚಂದ್ರನು ಹೊರಬಂದರು. ಇವೆಲ್ಲದರ ನಂತರ ಕಡೆಗೆ ಅಮೃತದಿಂದ ತುಂಬಿದ ಕುಂಭ (ಪಾತ್ರೆ) ಕೂಡ ಹೊರಬಂದಿತು. ಈ ಅಮೃತವನ್ನು ಪಡೆದು ಅಮರರಾಗಲು ದೇವತೆಗಳು ಹಾಗೂ ದಾನವರು ಮಿತಿಮೀರಿ ಹೋರಾಡಿದರು. ಆಗ ಮೋಹಿನಿ ರೂಪದಲ್ಲಿ ಶ್ರೀವಿಷ್ಣು ಅವತರಿಸಿದನು. ಅವಳು ತನ್ನ ಸೌಂದರ್ಯದಿಂದ ದಾನವರನ್ನು ಮೋಹಗೊಳಿಸಿ ಅಮೃತವನ್ನು ದೇವತೆಗಳಿಗೆ ನೀಡಿದಳು.

ಹೀಗೆ ದೇವತೆಗಳು ಅಮೃತಪಾನ ಮಾಡಿ ಶಾಶ್ವತ ಜೀವನವನ್ನು ಪಡೆದರು. ಸಮುದ್ರ ಮಂಥನದಿಂದ ಪ್ರಪಂಚಕ್ಕೆ ಅನೇಕ ದೈವಿಕ ವಸ್ತುಗಳು ಲಭಿಸಿದವು. ಈ ಕಥೆ ಧೈರ್ಯ, ಬುದ್ಧಿ, ಮತ್ತು ಭಕ್ತಿ ಸೇರಿ ಯಾವುದೇ ಸಂಕಟವನ್ನು ಗೆಲ್ಲಬಹುದೆಂಬ ಪಾಠವನ್ನು ಕಲಿಸುತ್ತದೆ.

©KTBS NOT TO BE REPUBLISHED

| | |
|---|---|
| ಪುರುಷ ಸೂಚಕ ಪದಗಳು | |
| ಸ್ತ್ರೀ ಸೂಚಕ ಪದಗಳು | |
| ವಸ್ತು, ಪ್ರಾಣಿ ಇತರೆ ಸೂಚಕ ಪದಗಳು | |

**ಹೀಗೊಂದು ಕಲಿಕೆ !**

**ಲಿಂಗಗಳು**

1) ಪುಲ್ಲಿಂಗ : ಮನುಷ್ಯರಲ್ಲಿ ಗಂಡು ಎಂಬುದನ್ನು ಸೂಚಿಸುವ ಪದಗಳು. ಉದಾ : ಅವನು, ರಮೇಶ.

2) ಸ್ತ್ರೀಲಿಂಗ : ಮನುಷ್ಯರಲ್ಲಿ ಹೆಣ್ಣು ಎಂಬುದನ್ನು ಸೂಚಿಸುವ ಪದಗಳು. ಉದಾ: ಕಾವೇರಿ, ನರ್ಮದಾ.

3) ನಪುಂಸಕ ಲಿಂಗ : ಮನುಷ್ಯರನ್ನು ಹೊರತುಪಡಿಸಿ ಉಳಿದ ಎಲ್ಲವನ್ನು ಸೂಚಿಸುವ ಪದಗಳು. ಉದಾ: ಹಸು, ಎತ್ತು.

## ಬುನಾದಿ ಹಂತ – ಚಟುವಟಿಕೆ ಹಾಳೆ 11
# ಸರ್ವನಾಮಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಭಾಷೆಯ ಸೂಕ್ಷ್ಮ ಅಂಶಗಳನ್ನು ಉದಾಹರಣೆಗೆ, ಪದಗಳ ಪುನರಾವರ್ತನೆ, ಪದಗಳ ಅರ್ಥ, ಸರ್ವನಾಮ, ವಿಶೇಷಣ, ಲಿಂಗವಾಚಕ, ವಚನ, ಮುಂತಾದವುಗಳ ಬಗ್ಗೆ ಎಚ್ಚರವಹಿಸುತ್ತ ಬರೆಯುವರು.

**ಚಟುವಟಿಕೆ 1 :** ಕೊಟ್ಟಿರುವ ವಾಕ್ಯಗಳನ್ನು ಓದಿ ಹೆಸರಿಗೆ ಬದಲಾಗಿ ಬಳಸಿರುವ ಪದಗಳಿಗೆ ವೃತ್ತ ಹಾಕಿರಿ. ನಂತರ ನಿಗದಿತ ಸ್ಥಳದಲ್ಲಿ ಮಾದರಿಯಂತೆ ಸೂಕ್ತ ಉತ್ತರಗಳನ್ನು ಬರೆಯಿರಿ.

1) ಮಹೇಶನು ಏಳನೇ ತರಗತಿಯ ವಿದ್ಯಾರ್ಥಿ. ಅವನು ತುಂಬಾ ಜಾಣ ಹುಡುಗ.
2) ನಮ್ಮ ಮನೆಯ ನಾಯಿಗೆ ಜೂಲಿ ಎಂದು ಹೆಸರಿಟ್ಟಿದ್ದೇನೆ.ಅದು ನಮ್ಮನ್ನು ತುಂಬಾ ಪ್ರೀತಿಸುತ್ತದೆ.
3) ಲಕ್ಷ್ಮಿ ಮೇಡಂ ಮಕ್ಕಳಿಗೆ ಚಟುವಟಿಕೆ ಮಾಡಲು ಸಹಾಯ ಮಾಡಿದರು. ಅವರ ಸಹಾಯದಿಂದ ಮಕ್ಕಳು ಚೆನ್ನಾಗಿ ಕಲಿತರು.
4) ದಿವ್ಯ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದಳು. ಆದ್ದರಿಂದ ಅವಳಿಗೆ ಶಾಲೆಯ ಕಡೆಯಿಂದ ಸನ್ಮಾನ ಮಾಡಲಾಯಿತು.
5) ಚಿರತೆಯನ್ನು ನೋಡಿ ಮೇರಿಗೆ ಗಾಬರಿಯಾಯಿತು. ಅವಳು ತಕ್ಷಣ ಅರಣ್ಯಾಧಿಕಾರಿಗಳಿಗೆ ಕರೆ ಮಾಡಿದಳು.

@KTBS NOT TO BE REPUBLISHED

| ವಾಕ್ಯ ಸಂಖ್ಯೆ | ಹೆಸರು | ಹೆಸರಿಗೆ ಬದಲಾಗಿ ಬಳಸಿರುವ ಪದ |
|---|---|---|
| 01 | ಮಹೇಶ | ಅವನು |
| | | |
| | | |
| | | |
| | | |

**ಹೀಗೊಂದು ಕಲಿಕೆ !**

**–: ಸರ್ವನಾಮ :–**

“ನಾಮಪದಗಳ ಬದಲಾಗಿ ಬಳಸುವ ಪದಗಳಿಗೆ ಸರ್ವನಾಮ ಎನ್ನುವರು.”

ಉದಾ : ನಾನು, ನೀನು, ಅವನು, ಅವರು, ಅದು, ಇದು, ಅವು, ಅವಳು, ಇವಳು, ಇವನು

**ಚಟುವಟಿಕೆ 2 :** ಪ್ರತಿ ಕಂಬ ಸಾಲಿನಿಂದ ಒಂದೊಂದು ಪದ ಆರಿಸಿಕೊಂಡು ಅರ್ಥಬದ್ಧವಾಗಿ ವಾಕ್ಯಗಳನ್ನು ರಚಿಸಿ ಬರೆಯಿರಿ.

| | | | |
|---|---|---|---|
| ಇದು | ಇದು | ಇದು | ಇದು |
| ಅದು | ಅದು | ಅದು | ಅದು |
| ಅವರು | ಅವರು | ಅವರು | ಅವರು |
| ಇವರು | ಇವರು | ಇವರು | ಇವರು |






@KTBS NOT TO BE REPUBLISHED

**ಚಟುವಟಿಕೆ 3 :** ಚಿತ್ರಪ್ರಾಸ – ಕೊಟ್ಟಿರುವ ಚಿತ್ರಗಳ ಹೆಸರನ್ನು ಬರೆದು, ಪ್ರಾಸಪದಗಳನ್ನು ಮಾದರಿಯಂತೆ ಹೊಂದಿಸಿ ಬರೆಯಿರಿ.

| ಅ | | ಇ | | ಪ್ರಾಸಪದಗಳು |
|---|---|---|---|---|
|  | ಈಚಲ |  | | ಈಚಲ–ತಬಲ |
|  | |  | ತಬಲ | |
|  | |  | | |
|  | |  | | |

# ದ್ವಿರುಕ್ತಿ ಮತ್ತು ಅನುಕರಣಾವ್ಯಯ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿವಿಧ ರಚನೆಗಳಲ್ಲಿ ಬಂದಿರುವ ದ್ವಿರುಕ್ತಿ ಮತ್ತು ಅನುಕರಣಾವ್ಯಯ ಪದಗಳ ಅರ್ಥವನ್ನು ಸಾಂದರ್ಭಿಕವಾಗಿ ಅರ್ಥೈಸಿಕೊಂಡು ವಾಕ್ಯಗಳಲ್ಲಿ ಬಳಸುವರು.

**ಚಟುವಟಿಕೆ 1 :** ಬಿಂಗೋ ಆಟ – ಕೊಟ್ಟಿರುವ ಪದಗಳಲ್ಲಿ ನಿಮಗಿಷ್ಟವಾದ ಯಾವುದಾದರೂ ಆರು ಪದಗಳನ್ನು ಆರಿಸಿ ಖಾಲಿ ಚೌಕಗಳಲ್ಲಿ ಬರೆದುಕೊಳ್ಳಿರಿ. ನಂತರ ಶಿಕ್ಷಕರು ಕೇಳುವ ಪ್ರಶ್ನೆಗಳಿಗೆ ನೀವು ಆರಿಸಿದ ಪದವು ಉತ್ತರವಾಗಿದ್ದರೆ ಅದಕ್ಕೆ ವೃತ್ತವನ್ನು ಹಾಕಿರಿ.




@KTBS NOT TO BE REPUBLISHED

**ಹೀಗೊಂದು ಕಲಿಕೆ !**

ಒಂದು ವಿಶೇಷಾರ್ಥವನ್ನು ವ್ಯಕ್ತಪಡಿಸುವುದಕ್ಕಾಗಿ ಒಂದು ಪದವನ್ನು ಎರಡೆರಡು ಸಲ ಪ್ರಯೋಗ ಮಾಡುವುದಕ್ಕೆ ದ್ವಿರುಕ್ತಿ (ದ್ವಿಃ ಉಕ್ತಿ – ದ್ವಿರುಕ್ತಿ) ಎನ್ನುವರು. ಇವುಗಳಿಗೆ ಅರ್ಥವಿರುತ್ತದೆ. ಧ್ವನಿ ಅಥವಾ ಶಬ್ದದ ವಿಶೇಷಣಗಳನ್ನು ಅನುಕರಣೆ ಮಾಡುವ ಪದಗಳನ್ನು 'ಅನುಕರಣಾವ್ಯಯ'ಗಳು ಎನ್ನುವರು. ಇವುಗಳಿಗೆ ನಿರ್ದಿಷ್ಟ ಅರ್ಥವಿರುವುದಿಲ್ಲ.

**ಚಟುವಟಿಕೆ 2 :** ಬಿಂಗೋ ಆಟ – ಕೊಟ್ಟಿರುವ ಪದಗಳಲ್ಲಿ ನಿಮಗಿಷ್ಟವಾದ ಯಾವುದಾದರೂ ಆರು ಪದಗಳನ್ನು ಆರಿಸಿ ಖಾಲಿ ಚೌಕಗಳಲ್ಲಿ ಬರೆದುಕೊಳ್ಳಿರಿ. ನಂತರ ಶಿಕ್ಷಕರು ಕೇಳುವ ಪ್ರಶ್ನೆಗಳಿಗೆ ನೀವು ಆರಿಸಿದ ಪದವು ಉತ್ತರವಾಗಿದ್ದರೆ ಅದಕ್ಕೆ ವೃತ್ತವನ್ನು ಹಾಕಿರಿ.




@KTBS
NOT TO BE REPUBLISHED

ಕೊಟ್ಟಿರುವ ಸ್ಥಳದಲ್ಲಿ ನೀವು ಅಭ್ಯಾಸ ಮಾಡಿದ ದ್ವಿರುಕ್ತಿ ಮತ್ತು ಅನುಕರಣಾವ್ಯಯ ಪದಗಳನ್ನು ಬರೆಯಿರಿ.

| ದ್ವಿರುಕ್ತಿ ಪದಗಳು | ಅನುಕರಣಾವ್ಯಯ ಪದಗಳು |
|---|---|
| | |
| | |
| | |
| | |
| | |

ಬುನಾದಿ ಹಂತ - ಚಟುವಟಿಕೆ ಹಾಳೆ 13

# ವಿರುದ್ಧಾರ್ಥಕ ಮತ್ತು ನಾನಾರ್ಥಕ ಪದಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿವಿಧ ಪ್ರಕಾರದ ಕತೆ, ಕವಿತೆಗಳಲ್ಲಿ ಭಾಷಾ ಗಾಂಭೀರ್ಯವುಳ್ಳ (ಉದಾ: ಹೊಸ ಪದಗಳು, ವಿರುದ್ಧಾರ್ಥಕ, ನಾನಾರ್ಥಕ, ಸಮಾನಾರ್ಥಾಕ) ಪದಗಳನ್ನು ಗುರುತಿಸಿ ಪ್ರಯೋಗಿಸುವರು.

**ಚಟುವಟಿಕೆ 1 :** ಅಡಿಗೆರೆ ಎಳೆದಿರುವ ಪದಗಳ ಬದಲಿಗೆ ಅವುಗಳ ವಿರುದ್ಧ ಅರ್ಥವನ್ನು ನೀಡುವ ಪದಗಳನ್ನು ಬರೆದು ವಾಕ್ಯವೃಂದವನ್ನು ಬರೆಯಿರಿ.

ನವಿಲು ಒಂದು **ಕುರೂಪ**ವಾದ ಪಕ್ಷಿಯಾಗಿದೆ. ಅದನ್ನು ನೋಡಿದರೆ ನಮಗೆ **ನೋವಾಗುತ್ತದೆ.** ಇದು **ಕಪ್ಪು** ಬಣ್ಣದಲ್ಲಿಯೂ ಇರುತ್ತದೆ. ಅಲ್ಲದೇ **ಕೆಲವು** ಬಣ್ಣಗಳಿಂದಲೂ ಕೂಡಿದೆ. ಮಳೆಗಾಲದಲ್ಲಿ ಇವು **ದುಃಖ**ದಿಂದ ಕುಣಿಯುತ್ತವೆ. ತಮ್ಮ ಜೊತೆಗಾರರ **ಹಿಂದೆ** ಗರಿಬಿಚ್ಚಿ ಕುಣಿದು **ವಿಕರ್ಷಿಸುತ್ತದೆ.** ಇದರ ಕುಣಿತ ನೋಡಿದರೆ ಮನಸ್ಸಿನಲ್ಲಿ **ಅಸಂತೋಷ** ಉಂಟಾಗುತ್ತದೆ. ಹೀಗೆ ನವಿಲು ಭಾರತದಲ್ಲಿ ರಾಷ್ಟ್ರಪಕ್ಷಿಯ ಸ್ಥಾನವನ್ನು **ಪಡೆದಿಲ್ಲ.** ಇವು ಹಳ್ಳಿಗಳಲ್ಲಿ ಹೊಲ, ಜಮೀನು ಇವುಗಳ **ಹೊರಗೆ** ಬಂದು ಕಾಳುಗಳನ್ನು, **ದೊಡ್ಡ ದೊಡ್ಡ** ಹುಳುಗಳನ್ನು ಆಹಾರವಾಗಿ ಸೇವಿಸುತ್ತವೆ.



@KTBS NOT TO BE REPUBLISHED

**ಹೀಗೊಂದು ಕಲಿಕೆ !**

ಒಂದು ಪದದ ಅರ್ಥಕ್ಕೆ ಸಂಪೂರ್ಣವಾಗಿ ವಿರುದ್ಧವಾದ ಅರ್ಥವನ್ನು ಕೊಡುವ ಪದಗಳನ್ನು 'ವಿರುದ್ಧಾರ್ಥಕ ಪದಗಳು' ಎನ್ನುವರು.

**ಚಟುವಟಿಕೆ 2 :** ಈ ಪದಗಳ ನಾನಾರ್ಥಗಳನ್ನು ಶಬ್ದಕೋಶದಲ್ಲಿ ಹುಡುಕಿ ಬರೆದು, ಆ ಪದಗಳಿಗೆ ಮಾದರಿಯಂತೆ ಸ್ವಂತವಾಕ್ಯದಲ್ಲಿ ಬಳಸಿ ಬರೆಯಿರಿ.

**ಮಾದರಿ : ಕಾಡು**
- ವನ → ಕಾಡಿನಲ್ಲಿ ಹಲವು ಬಗೆಯ ಮರಗಳಿರುತ್ತವೆ.
- ಪೀಡಿಸು → ಬೇಸಿಗೆಯಲ್ಲಿ ರಣಬಿಸಿಲು ನನ್ನನ್ನು ಕಾಡಿಸುತ್ತಿದೆ.

1) ಕರ : ______ ______________________
______ ______________________

2) ಹೊಳೆ : ______ ______________________
______ ______________________

3) ಕರಿ : ______ ______________________
______ ______________________

4) ದಂಡ : ______ ______________________
______ ______________________

5) ತಂದೆ : ______ ______________________
______ ______________________

6) ಪಡೆ : ______ ______________________
______ ______________________

@KTBS NOT TO BE REPUBLISHED

**ಹೀಗೊಂದು ಕಲಿಕೆ !**
ಒಂದು ನಿರ್ದಿಷ್ಟ ಪದವು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಅರ್ಥವನ್ನು ನೀಡುತ್ತದೆ, ಇದನ್ನು 'ನಾನಾರ್ಥಕ ಪದಗಳು' ಎನ್ನುತ್ತೇವೆ.

# ನುಡಿಗಟ್ಟು ಮತ್ತು ಒಗಟುಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಕತೆ, ಕಥನ, ಕವಿತೆ, ವಿವರಣೆ ಮತ್ತು ಒಗಟುಗಳು ಮುಂತಾದವುಗಳನ್ನು ಆಸಕ್ತಿಯಿಂದ ಕೇಳಿ ತಿಳಿಯುವರು ಮತ್ತು ಅರ್ಥಮಾಡಿಕೊಂಡು ಪ್ರತಿಕ್ರಿಯಿಸುವರು.

**ಚಟುವಟಿಕೆ 1 :** ಕೊಟ್ಟಿರುವ ನುಡಿಗಟ್ಟಿಗೆ ಸರಿಹೊಂದುವ ಅರ್ಥವನ್ನು ಆರಿಸಿ ಬರೆಯಿರಿ.

ಮನಸ್ಸಿಟ್ಟು ಕೇಳು, ದಯೆ ತೋರಿಸು, ಮುಖ್ಯಸ್ಥಾನ, ಸುಖ ಸಿಕ್ಕಲಿ, ಓಡಿಹೋಗು, ಸಣ್ಣ ಸಹಾಯ, ಬಲಿಷ್ಠ, ಸುಳ್ಳುಹೇಳು, ಪ್ರೋತ್ಸಾಹಿಸು

1) ಕಿವಿಮೇಲೆ ಹಾಕಿಕೊ = ______________________

2) ಕಣ್ಣುಬಿಡು = ______________________

3) ಅಗ್ರಪೀಠ = ______________________

4) ಹೊಟ್ಟೆ ತಣ್ಣಗಿರಲಿ = ______________________

5) ಕಂಬಿಕೀಳು = ______________________

6) ಅಳಿಲುಸೇವೆ = ______________________

@KTBS NOT TO BE REPUBLISHED

**ಚಟುವಟಿಕೆ 2 :** ಕೊಟ್ಟಿರುವ ನುಡಿಗಟ್ಟುಗಳಿಗೆ ಶಬ್ದಕೋಶದಲ್ಲಿ ಅರ್ಥವನ್ನು ಹುಡುಕಿ ಸ್ವಂತವಾಕ್ಯದಲ್ಲಿ ಬಳಸಿ ಬರೆಯಿರಿ

1) ಅಗ್ನಿಪರೀಕ್ಷೆ =______________________

______________________

2) ಮೂಗುತೂರಿಸು =______________________

______________________

3) ಮನೆಬೆಳಗಿಸು =______________________

______________________

4) ಗಾಳಿಗೆ ತೂರು =______________________

______________________

## ಆಟ–ಪಾಠ



ನಮ್ಮ ಬದುಕೆ ಒಂದು ಆಟ
ಮಾಡಿ ನೋಡಿ ಕಲಿಯಿರಿ ಆಟದ ಪಾಠ
ಪಾಠ ಜೀವನದ ಸಂತೋಷ ಕೂಟ
ಸಂತೋಷವೆಂಬುದೇ ನಮ್ಮ ಪರಿಪಾಠ
ಗಾದೆ, ಒಗಟುಗಳಿಂದ ಕಲಿತ ಪಾಠ
ನೂರು ಕಾಲವಿರುವುದು ನಮ್ಮೊಡನೆ ಆದರ್ಶದ ಪಾಠ
ಬನ್ನಿ ಕಲಿತು ಬಿಡಿಸೋಣ ಒಗಟ
ಕಲಿತು ಆಡೋಣ ಪಂಥದ ಆಟ
ಗೆಲ್ಲಲು ಆಡಬೇಡ ಜಂಬದ ಮಾತು
ಸೋಲಲು ಹಿಂಜರಿಯ ಬೇಡ ಕಲಿಯಲು ಅರಿತು
ಅದೇ ಆಟ–ಪಾಠದ ಕಿಮ್ಮತ್ತು
ಸಂತಸದಲಿ ಬಾಳಿರಿ ಎಲ್ಲರೊಡನೆ ಬೆರೆತು.

ರಚನೆ : ಶ್ರೀಮತಿ. ಜಯಶ್ರೀ

**ಚಟುವಟಿಕೆ 3 :** ಕೊಟ್ಟಿರುವ ಒಗಟುಗಳನ್ನು ಓದಿ ಉತ್ತರ ನೀಡಿ ಸಮರ್ಥಿಸಿರಿ.

1) ಅಮ್ಮನ ಸೀರೆ ಮಡಿಸೋಕೆ ಆಗಲ್ಲ, ಅಪ್ಪನ ರೊಕ್ಕ ಎಣಿಸೋಕಾಗಲ್ಲ.

2) ಸಾಗರ ಪುತ್ರ, ಊಟಕೆ ಮಿತ್ರ

3) ಲಟಲಟ ಲೇಡಿಗೆ ಒಂದೇ ಕಣ್ಣು

4) ಹಸಿರು ಕೋಲಿಗೆ ಮುತ್ತಿನ ತುರಾಯಿ.

5) ಹುಟ್ಟುತ್ತಲೇ ಹುಡುಗ ತಲೆಗೆ ಟೋಪಿ ಹಾಕಿದ್ದಾನೆ.

@KTBS NOT TO BE REPUBLISHED

**ಹೀಗೊಂದು ಕಲಿಕೆ !**

ನುಡಿಗಟ್ಟುಗಳೆಂದರೆ ಪದಪುಂಜವಾಗಿದೆ. ಮಾತನಾಡುವಾಗ ಮಾತಿಗೆ ಬಲ ತುಂಬಲು ಹಲವು ವಾಕ್ಯಗಳನ್ನು ಹೇಳುವುದಕ್ಕೆ ಬದಲಾಗಿ ಅವುಗಳ ಪ್ರಾತಿನಿಧ್ಯ ವಹಿಸುವ ಪದ ಸಮುಚ್ಚಯವೇ 'ನುಡಿಗಟ್ಟುಗಳು'.

ಒಗಟು ಜನಪದ ಸಾಹಿತ್ಯದಲ್ಲಿ ಒಂದು ಮುಖ್ಯವಾದ ಪ್ರಕಾರ. ಕನ್ನಡದಲ್ಲಿ ಒಡಪು, ಮುಂಡಿಗೆ ಎಂಬ ಬೇರೆ ಹೆಸರಗಳೂ ಉಂಟು. ಒಗಟು ಎಂದರೆ ಒಬ್ಬರು ಮತ್ತೊಬ್ಬರಿಗೆ ಒಡ್ಡಿದ ಸವಾಲು, ಸಮಸ್ಯೆ ಒಂದು ವಸ್ತುವನ್ನು ಮತ್ತೊಂದು ವಸ್ತುವಿನ ಮೂಲಕ ಚಮತ್ಕಾರವಾಗಿ ವರ್ಣಿಸಿ ಆ ಅವ್ಯಕ್ತ ವಸ್ತುವನ್ನು ಕಂಡುಹಿಡಿಯುವಂತೆ ಹೇಳುವುದು ಇದರ ಕ್ರಮ.

ಬುನಾದಿ ಹಂತ – ಚಟುವಟಿಕೆ ಹಾಳೆ 15

# ಗಾದೆಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿವಿಧ ಸಾಹಿತ್ಯ ರಚನೆಗಳಲ್ಲಿ ಬರುವ ಗಾದೆ ಮಾತುಗಳನ್ನು ಸಾಂದರ್ಭಿಕವಾಗಿ ಗ್ರಹಿಸಿ ಅವುಗಳ ಅರ್ಥವನ್ನು ವಿವರಿಸುವರು.

**ಚಟುವಟಿಕೆ 1 :** ಚಿತ್ರಕ್ಕೆ ಸರಿಹೊಂದುವ ಸೂಕ್ತವಾದ ಪದ ಬರೆದು, ಮಾದರಿಯಂತೆ ಗಾದೆ ಮಾತನ್ನು ಊಹಿಸಿ ಬರೆಯಿರಿ.


ಹಣ


ಹೆಣ


ಬಾಯಿ

**ಹಣ ಎಂದರೆ ಹೆಣನೂ ಬಾಯಿಬಿಡುತ್ತೆ.**




















@KTBS NOT TO BE REPUBLISHED

**ಚಟುವಟಿಕೆ 2 :** ನೀಡಲಾಗಿರುವ ಕಥೆಯನ್ನು ಓದಿಕೊಂಡು, ಅಲ್ಲಿರುವ ಗಾದೆಮಾತುಗಳನ್ನು ಆರಿಸಿ ಬರೆಯಿರಿ.



ಒಂದು ಊರಿನಲ್ಲಿ ಸೋಮಣ್ಣನೆಂಬ ರೈತನಿದ್ದನು. 'ಕಾಯಕವೇ ಕೈಲಾಸ' ಎಂಬ ಮಂತ್ರದೊಂದಿಗೆ ಜೀವಿಸುತ್ತಿದ್ದನು. 'ತಾಳಿದವನು ಬಾಳಿಯಾನು' ಎಂಬ ವ್ಯಕ್ತಿತ್ವವನ್ನು ಹೊಂದಿದ್ದನು. 'ಆಡು ಮುಟ್ಟದ ಸೊಪ್ಪಿಲ್ಲ'ವೆಂಬಂತೆ ಗಂಡ ಹೆಂಡತಿ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದರು. ಅವನ ಹೆಂಡತಿಯು ಸಹ ಕಷ್ಟಪಟ್ಟು ದುಡಿಯುತ್ತಿದ್ದು, 'ಕೈ ಕೆಸರಾದರೆ ಬಾಯಿ ಮೊಸರು' ಎಂದು ನಂಬಿದ್ದಳು. ಆ ದಂಪತಿಗೆ ಇಬ್ಬರು ಮಕ್ಕಳಿದ್ದರು. ಒಬ್ಬ ಮಗ ಮತ್ತು ಒಬ್ಬಳು ಮಗಳು. ಸೋಮಣ್ಣನು ಮಕ್ಕಳಿಗೆ 'ಸಗಣಿಯವನ ಜೊತೆ ಸ್ನೇಹಕ್ಕಿಂತ ಗಂಧದವನ ಜೊತೆ ಗುದ್ದಾಟವೇ ಮೇಲು', 'ಆಳಾಗಿ ದುಡಿ ಅರಸನಾಗಿ ಉಣ್ಣು' ಎಂಬ ಬುದ್ಧಿ ಮಾತನ್ನು ಹೇಳುತ್ತಿದ್ದನು. ಊರಿನವರು ಇವರನ್ನು ಕಂಡರೆ ಹೊಟ್ಟೆಕಿಚ್ಚು ಪಡುತ್ತಿದ್ದರು. 'ದುಷ್ಟರನ್ನು ಕಂಡರೆ ದೂರ ಇರು' ಎಂಬಂತೆ ಅವರಿಂದ ದೂರವಿದ್ದು, 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬಂತೆ ಜೀವನವನ್ನು ನಡೆಸುತ್ತಿದ್ದರು.

@KTBS NOT TO BE REPUBLISHED

**ಚಟುವಟಿಕೆ 3 :** ನೀವು ಪಟ್ಟಿ ಮಾಡಿದ ಗಾದೆಗಳಲ್ಲಿ ಯಾವುದಾದರೂ ಒಂದು ಗಾದೆಮಾತನ್ನು ಕುರಿತು ವಿಸ್ತರಿಸಿ ಬರೆಯಿರಿ.

**ಹೀಗೊಂದು ಕಲಿಕೆ !**

ಗಾದೆಮಾತುಗಳು ನಮ್ಮ ಕನ್ನಡ ಭಾಷೆಯ ಜಾನಪದ ಸಾಹಿತ್ಯದ ಅತ್ಯಂತ ವಿಶಿಷ್ಟವಾದ ಕೊಡುಗೆಯಾಗಿದೆ. ಇವು ನಿತ್ಯ ಜೀವನದ ಅನುಭವಗಳ ಸಾರವಾಗಿದೆ.

## ಬುನಾದಿ ಹಂತ – ಚಟುವಟಿಕೆ ಹಾಳೆ 16

# ವಿಭಕ್ತಿ ಪ್ರತ್ಯಯಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ** : ವಿವಿಧ ಸಾಹಿತ್ಯ ರಚನೆಗಳಲ್ಲಿ ಬರುವ ವಿಭಕ್ತಿ ಪ್ರತ್ಯಯಗಳನ್ನು ಸಾಂದರ್ಭಿಕವಾಗಿ ಗ್ರಹಿಸಿ ಅರ್ಥಬದ್ಧವಾಗಿ ಬರೆವಣಿಗೆಯಲ್ಲಿ ಬಳಸುವರು.

**ಚಟುವಟಿಕೆ 1 :** ನೀಡಲಾಗಿರುವ ವಾಕ್ಯಗಳನ್ನು ಓದಿ, ವ್ಯತ್ಯಾಸ ಗುರುತಿಸಿ ಸರಿಪಡಿಸಿ ಮಾದರಿಯಂತೆ ಬರೆಯಿರಿ.

**ಮಾದರಿ** : ಇರುವೆ ಗೂಡಲ್ಲಿ ನಡೆಯಿತು. **ಇರುವೆ ಗೂಡಿಗೆ ನಡೆಯಿತು.**

1) ಇರುವೆ ಗೂಡನ್ನು ಬಂದಿತು. ______________________

2) ಇರುವೆ ಗೂಡಿನಲ್ಲಿ ಬಂದಿತು. ______________________

3) ಇರುವೆ ಗೂಡುವು ಕಟ್ಟಿತು. ______________________

4) ಇರುವೆ ಗೂಡಿಗೆ ಇದೆ. ______________________

**ಚಟುವಟಿಕೆ 2 :** ಅಡಿಗೆರೆ ಎಳೆದಿರುವ ಪದಗಳಲ್ಲಿರುವ ವಿಭಕ್ತಿಗಳು ಮತ್ತು ಪ್ರತ್ಯಯಗಳನ್ನು ಹೆಸರಿಸಿ.

| ಕ್ರ.ಸಂ | ವಾಕ್ಯ | ಪ್ರತ್ಯಯ | ವಿಭಕ್ತಿ |
|---|---|---|---|
| 01. | <u>ಶಾಮನು</u> ಕಾರ್ಯಕ್ರಮಕ್ಕೆ ಬಂದನು. | | |
| 02. | <u>ಶಾಮನನ್ನು</u> ಮುಖ್ಯ ಶಿಕ್ಷಕರು ಕರೆದರು. | | |
| 03. | <u>ಶಾಮನಿಂದ</u> ಹಲವರಿಗೆ ಸಹಾಯವಾಗಿದೆ. | | |
| 04. | <u>ಶಾಮನಿಗೆ</u> ಓಟದ ಸ್ಪರ್ಧೆಯಲ್ಲಿ ಬಹುಮಾನ ಬಂದಿತು. | | |
| 05. | <u>ಶಾಮನ</u> ದೆಸೆಯಿಂದ ಶಿವನಿಗೆ ತೊಂದರೆಯಾಯಿತು. | | |
| 06. | <u>ಶಾಮನ</u> ಹೆಂಡತಿಯ ಹೆಸರು ಸೀತೆ. | | |
| 07. | <u>ಶಾಮನಲ್ಲಿ</u> ಉತ್ತಮವಾದ ಹವ್ಯಾಸಗಳಿವೆ. | | |

NOT TO BE REPUBLISHED @KTBS

**ಹೀಗೊಂದು ಕಲಿಕೆ !** **ವಿಭಕ್ತಿ ಪ್ರತ್ಯಯಗಳು**

ವಾಕ್ಯ ರಚನೆಯ ಸಂದರ್ಭದಲ್ಲಿ ನಾಮಪ್ರಕೃತಿಗಳು ಪಡೆಯಬೇಕಾದ ಅರ್ಥ ವಿಶೇಷತೆಗಳನ್ನು ಕೊಡಲು ಸಹಾಯ ಮಾಡುವ ಪ್ರತ್ಯಯಗಳಿಗೆ 'ವಿಭಕ್ತಿ ಪ್ರತ್ಯಯ'ಗಳೆಂದು ಕರೆಯುವರು.

| ಕ್ರ.ಸಂ | ವಿಭಕ್ತಿ | ಪ್ರತ್ಯಯ | ಕ್ರ.ಸಂ | ವಿಭಕ್ತಿ | ಪ್ರತ್ಯಯ |
|---|---|---|---|---|---|
| **1.** | **ಪ್ರಥಮ** | **ಉ** | **2.** | **ದ್ವಿತೀಯ** | **ಅನ್ನು** |
| **3.** | **ತೃತೀಯ** | **ಇಂದ** | **4.** | **ಚತುರ್ಥಿ** | **ಗೆ / ಕ್ಕೆ** |
| **5.** | **ಪಂಚಮಿ** | **ದೆಸೆಯಿಂದ** | **6.** | **ಷಷ್ಠಿ** | **ಅ** |
| **7.** | **ಸಪ್ತಮಿ** | **ಅಲ್ಲಿ** | | | |

**ಚಟುವಟಿಕೆ 3 :** ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು ವಿಭಕ್ತಿ ಪ್ರತ್ಯಯಗಳಿಂದ ಕೂಡಿರುವ ಪದಗಳಿಗೆ ವೃತ್ತ ಹಾಕಿ ಮತ್ತು ವಿಭಕ್ತಿ ಪ್ರತ್ಯಯಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.

## ಮಕ್ಕಳ ಹಕ್ಕುಗಳು



ಮಕ್ಕಳು **ಭವಿಷ್ಯದ** ನಿರ್ಮಾತೃಗಳು. ಒಂದು ದೇಶದ ಪ್ರಗತಿಯು ಅಲ್ಲಿನ ಮಕ್ಕಳ ಯೋಗಕ್ಷೇಮವನ್ನು ನಿರ್ಧರಿಸುತ್ತದೆ. ಭಾರತ ಸಂವಿಧಾನವು ಮಕ್ಕಳಿಗೆ ಹಲವು ಮುಖ್ಯ ಹಕ್ಕುಗಳನ್ನು ನೀಡಿದೆ. ಈ ಪ್ರಬಂಧವು ಭಾರತದಲ್ಲಿ ಮಕ್ಕಳ ಹಕ್ಕುಗಳ ಕುರಿತು ಚರ್ಚಿಸುತ್ತದೆ.

**ಶಿಕ್ಷಣದ ಹಕ್ಕು :** ಪ್ರತಿ ಮಗುವಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯುವ ಹಕ್ಕಿದೆ. ಶಿಕ್ಷಣವು ಮಕ್ಕಳ ಬೌದ್ಧಿಕ ಮತ್ತು ಸಾಮಾಜಿಕ ಬೆಳವಣಿಗೆಯ ಆಧಾರವಾಗಿದೆ.

**ಆರೋಗ್ಯದ ಹಕ್ಕು :** ಪ್ರತಿ ಮಗುವಿಗೂ ಉತ್ತಮ ಆರೋಗ್ಯ ಪಡೆಯುವ ಹಕ್ಕಿದೆ. ಸರ್ಕಾರವು ಉಚಿತ ಲಸಿಕೆಗಳು, ಪೌಷ್ಟಿಕ ಆಹಾರ ಮತ್ತು ವೈದ್ಯಕೀಯ ಚಿಕಿತ್ಸೆ ಒದಗಿಸಬೇಕು.

**ಆಟದ ಹಕ್ಕು :** ಮಕ್ಕಳಿಗೆ ಆಟವಾಡಲು, ಮನರಂಜನೆ ಪಡೆಯಲು ಮತ್ತು ವಿಶ್ರಾಂತಿ ಪಡೆಯಲು ಹಕ್ಕಿದೆ. ಆಟವು ಮಕ್ಕಳ ಬೆಳವಣಿಗೆಯ ಅಂಶವಾಗಿದೆ.

**ಸ್ವಂತ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು :** ಮಕ್ಕಳು, ತಮ್ಮ ಅಭಿಪ್ರಾಯಗಳನ್ನು ಧೈರ್ಯವಾಗಿ ವ್ಯಕ್ತಪಡಿಸುವ ಹಕ್ಕನ್ನು ಹೊಂದಿದ್ದಾರೆ. ಅವರ ಅಭಿಪ್ರಾಯಗಳನ್ನು ಗೌರವಿಸಬೇಕು ಮತ್ತು ಪರಿಗಣಿಸಬೇಕು.



**ಹಿಂಸೆ ಮತ್ತು ಶೋಷಣೆಯಿಂದ ರಕ್ಷಣೆಯ ಹಕ್ಕು :** ಯಾವುದೇ ರೀತಿಯ ಹಿಂಸೆ, ಶೋಷಣೆ, ಬಾಲಕಾರ್ಮಿಕ ಪದ್ಧತಿ ಅಥವಾ ಮಾನವ ವ್ಯಾಪಾರದಿಂದ ಮಕ್ಕಳನ್ನು ರಕ್ಷಿಸಬೇಕು.

**ಸಮಾನತೆಯ ಹಕ್ಕು :** ಜಾತಿ, ಧರ್ಮ, ಲಿಂಗ ಅಥವಾ ಆರ್ಥಿಕ ಸ್ಥಿತಿಗತಿಯ ಆಧಾರದ ಮೇಲೆ ಮಕ್ಕಳ ನಡುವೆ ತಾರತಮ್ಯ ಮಾಡಬಾರದು.

@KTBS NOT TO BE REPUBLISHED

**ಮಾದರಿ :** ಭವಿಷ್ಯದ = ಭವಿಷ್ಯ + ಅ = ಷಷ್ಠಿ ವಿಭಕ್ತಿ ಪ್ರತ್ಯಯ.

## ಬುನಾದಿ ಹಂತ – ಚಟುವಟಿಕೆ ಹಾಳೆ 17

# ಆಡುಭಾಷೆ ಮತ್ತು ಗ್ರಾಂಥಿಕ ಭಾಷೆ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಓದಿದ ವಿಷಯವಸ್ತು ಮತ್ತು ತಮಗೆ ದೈನಂದಿನ ಜೀವನದಲ್ಲಿ ಆದ ಸ್ವತಃ ಅನುಭವಗಳನ್ನು ಸೇರಿಸಿ, ಅವುಗಳಿಂದ ಉಂಟಾದ ಸಂವೇದನಾತ್ಮಕ ವಿಚಾರಗಳನ್ನು ಮೌಖಿಕವಾಗಿ / ಲಿಖಿತವಾಗಿ ಅಭಿವ್ಯಕ್ತಪಡಿಸುವರು. (ಆಡುಭಾಷೆ ಮತ್ತು ಗ್ರಾಂಥಿಕ ಭಾಷೆ)

**ಚಟುವಟಿಕೆ 1 :** ಏಕಪಾತ್ರಾಭಿನಯ – ನಿಮಗೆ ದೊರೆತಿರುವ ಪದವನ್ನು ಗಟ್ಟಿಯಾಗಿ ಹೇಳದೇ ಅಭಿನಯಿಸಿ ತೋರಿಸಿರಿ. ನಿಮ್ಮ ಗುಂಪಿನ ಸಹಪಾಠಿಗಳು ಅದನ್ನು ಊಹಿಸಿ ಹೇಳಬೇಕು. ನಂತರ ಆ ಪದದ ಗ್ರಾಂಥಿಕ ರೂಪ ಪದವನ್ನು ಕೊಟ್ಟಿರುವ ವೃತ್ತದಲ್ಲಿ ಬರೆಯಿರಿ.




**ಚಟುವಟಿಕೆ 2 :** ಈ ಆಡುಭಾಷೆಯ ಪದಗಳ ಗ್ರಾಂಥಿಕ ರೂಪ ಪದವನ್ನು ಮಾದರಿಯಂತೆ ಬರೆಯಿರಿ.

| | | | |
|---|---|---|---|
| ಸೊಸಿ | ಸೊಸೆ | ಹಾಸ್ಗೆ | |
| ಐತಿ | | ಮಕ್ಳು | |
| ಆಯ್ತು | | ಸಾಲಿ | |
| ಬಂದ್ರೆ | | ಬತ್ತದೆ | |
| ಊರಾಗ | | ಬಂದ್ರೆ | |

**ಹೀಗೊಂದು ಕಲಿಕೆ !**

ಒಂದು ಭಾಷೆಯು ಎರಡು ಬಗೆಯಲ್ಲಿರುತ್ತದೆ. ಒಂದು 'ಆಡು ಭಾಷೆ' ಮಾತನಾಡುವ ರೀತಿ. ಇನ್ನೊಂದು 'ಗ್ರಾಂಥಿಕ ಭಾಷೆ' ವ್ಯಾಕರಣಬದ್ಧ ರೂಪದ ಭಾಷೆ.

@KTBS NOT TO BE REPUBLISHED

**ಚಟುವಟಿಕೆ 3 :** ಜೋಡಿ ಮಾಡಿ ಆಟ – ಕವಡೆ ಬೀಳುವ ಸಂಖ್ಯೆಗಳ ಅನುಗುಣವಾಗಿ ಚೌಕದಲ್ಲಿ ಇರುವ ಪದಗಳನ್ನು ಮಾದರಿಯಂತೆ ಜೋಡಿ ಮಾಡಿ ಬರೆಯಿರಿ.

| | | |
|---|---|---|
| 1 ಅಂದ | 2 ಅತ್ತ | 3 ಅದಲು |
| 4 ಅಂಕು | 5 ಅಕ್ಕ | 6 ಅವಳಿ |

| | | |
|---|---|---|
| 6 ಜವಳಿ | 3 ಬದಲು | 4 ಡೊಂಕು |
| 2 ಇತ್ತ | 1 ಚಂದ | 5 ಪಕ್ಕ |

**ತಂಡ 2 :**

| | | |
|---|---|---|
| 3 ಆಚಾರ | 6 ಆಳು | 1 ಆಟ |
| 5 ಅಡ್ಡಾ | 2 ಆಚೆ | 4 ಅಚ್ಚು |

| | | |
|---|---|---|
| 6 ಕಾಳು | 5 ದಿಡ್ಡ | 2 ಈಚೆ |
| 4 ಮೆಚ್ಚು | 3 ವಿಚಾರ | 1 ಪಾಠ |

**ತಂಡ 3 :**

| | | |
|---|---|---|
| 5 ಕಸ | 4 ಓದು | 3 ಉಡುಗೆ |
| 6 ಕಾಸು | 1 ಆಸ್ತಿ | 2 ಉಪ್ಪು |

| | | |
|---|---|---|
| 3 ತೊಡುಗೆ | 4 ಬರಹ | 1 ಪಾಸ್ತಿ |
| 2 ಹುಳಿ | 6 ಗೀಸು | 5 ಕಡ್ಡಿ |

**ತಂಡ 4 :**

| | | |
|---|---|---|
| 4 ಗೊತ್ತು | 6 ತಲೆ | 5 ಗಡ್ಡೆ |
| 1 ಕೆರೆ | 3 ಗುಡಿ | 2 ಕೂಲಿ |

| | | |
|---|---|---|
| 2 ನಾಲಿ | 5 ಗೆಣಸು | 1 ಕಟ್ಟೆ |
| 3 ಗೋಪುರ | 4 ಗುರಿ | 6 ಗಿಲೆ |

ಅತ್ತ – ಇತ್ತ

@KTBS
NOT TO BE REPUBLISHED

**ಹೀಗೊಂದು ಕಲಿಕೆ !**

ದ್ವಿರುಕ್ತಿಗಳ ಹಾಗೇ ಒಂದಕ್ಕೊಂದು ಪೂರಕವಾದ ಪದಗಳನ್ನು ಜೊತೆಯಾಗಿ ಬಳಸುತ್ತೇವೆ ಇವುಗಳನ್ನು 'ಜೋಡುನುಡಿ' ಎನ್ನುವರು. ಇವುಗಳಲ್ಲಿ ಕೆಲವೊಮ್ಮೆ ಎರಡೂ ಪದಗಳಿಗೂ ಅರ್ಥವಿರುತ್ತದೆ. ಕೆಲವು ಪದಗಳಲ್ಲಿ ಒಂದಕ್ಕೆ ಮಾತ್ರ ಅರ್ಥವಿರುತ್ತದೆ.

ಬುನಾದಿ ಹಂತ – ಚಟುವಟಿಕೆ ಹಾಳೆ 18

# ದೇಶ್ಯ – ಅನ್ಯದೇಶ್ಯ ಪದಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿವಿಧ ಸಾಹಿತ್ಯ ರಚನೆಗಳಲ್ಲಿ ಬರುವ ದೇಶ್ಯ–ಅನ್ಯದೇಶ್ಯ ಪದಗಳನ್ನು ಸಾಂದರ್ಭಿಕವಾಗಿ ಗ್ರಹಿಸಿ ಅವುಗಳ ಅರ್ಥವನ್ನು ಹೇಳುವರು.

**ಚಟುವಟಿಕೆ 1 :** ಪದಕಟ್ಟುವ ಆಟ : ಕೊಟ್ಟಿರುವ ಚಿತ್ರಗಳಿಗೆ ಕನ್ನಡದಲ್ಲಿ ಏನೆನ್ನುತ್ತಾರೆ? ಎಂಬುದನ್ನು ಬರೆಯಿರಿ.

















@KTBS NOT TO BE REPUBLISHED

**ಚಟುವಟಿಕೆ 2 :** ಕೊಟ್ಟಿರುವ ಗದ್ಯಭಾಗವನ್ನು ಓದಿ ದೇಶ್ಯ ಹಾಗೂ ಅನ್ಯದೇಶ್ಯ ಪದಗಳನ್ನು ಗುರುತಿಸಿ ಬರೆಯಿರಿ.




ನಮ್ಮ ಊರಿನಲ್ಲಿ ಒಂದು ಪ್ರಸಿದ್ಧ ಶಾಲೆಯಿತ್ತು. ಶಾಲೆಯ ಹತ್ತಿರ ದೊಡ್ಡ ಬಸ್ ನಿಲ್ದಾಣವಿತ್ತು. ಪ್ರತಿದಿನವೂ ವಿದ್ಯಾರ್ಥಿಗಳು ಬೈಕ್, ಸೈಕಲ್‌ಗಳ ಮೂಲಕ ಮತ್ತು ಕೆಲವರು ನಡೆದು ಶಾಲೆಗೆ ಬರುತ್ತಿದ್ದರು. ಕೆಲವರು ಆಟೋಗಳಲ್ಲಿ ಬರುತ್ತಿದ್ದರು. ಶಾಲೆಯ ಆವರಣದಲ್ಲಿ ಬೃಹತ್ ಪಾರ್ಕಿಂಗ್ ವ್ಯವಸ್ಥೆ ಇತ್ತು. ಮಕ್ಕಳಿಗೆ ಕಲಿಕೆ ಸುಲಭವಾಗಲೆಂದು ಟೀಚರ್‌ಗಳು ಪ್ರೊಜೆಕ್ಟರ್‌ಗಳ ಸಹಾಯದಿಂದ ಪಾಠವನ್ನು ವಿವರಿಸುತ್ತಿದ್ದರು. ಶಾಲೆಯ ಗ್ರಂಥಾಲಯದಲ್ಲಿ ಹಲವಾರು ಪುಸ್ತಕಗಳಿದ್ದವು. ಅಲ್ಲಿ ಕನ್ನಡ, ಇಂಗ್ಲಿಷ್, ವಿಜ್ಞಾನ, ಇತಿಹಾಸ, ಗಣಿತ ಹಾಗೂ ಇತರೆ ವಿಷಯಗಳ ಪುಸ್ತಕಗಳು ಲಭ್ಯವಿದ್ದವು. ಮಧ್ಯಾಹ್ನದ ಬಿಸಿ ಊಟ ವ್ಯವಸ್ಥೆಯು ಉತ್ತಮವಾಗಿತ್ತು. ಅಡುಗೆ ಮನೆಯಲ್ಲಿ ಅನ್ನ, ಸಾರು, ಪಲ್ಯ, ಮೆಣಸು ಸಹಿತ ಆಹಾರ ತಯಾರಿಸಲಾಗುತ್ತಿತ್ತು. ಕೆಲವೊಮ್ಮೆ ವಿದ್ಯಾರ್ಥಿಗಳಿಗೆ ಡ್ರಿಲ್, ಸ್ಪರ್ಧೆಗಳು ಮತ್ತು ಕಲಾಸಾಹಿತ್ಯ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿತ್ತು. ಶಾಲೆಯ ಹತ್ತಿರ ಕಾಫಿ ಅಂಗಡಿ, ಮೆಡಿಕಲ್ ಶಾಪ್ ಹಾಗೂ ಬುಕ್‌ಸ್ಟಾಲ್ ಇತ್ಯಾದಿ ಅಂಗಡಿಗಳಿದ್ದವು. ಅಲ್ಲಿ ಪೆನ್, ಪೆನ್ಸಿಲ್, ಪುಸ್ತಕ, ನೀರಿನ ಬಾಟಲ್ ಮೊದಲಾದವುಗಳನ್ನು ಮಾರಾಟ ಮಾಡಲಾಗುತ್ತಿತ್ತು. ಈ ಶಾಲೆಯ ಶಿಸ್ತು ಮತ್ತು ಶಿಕ್ಷಣ ಪದ್ಧತಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು.

| ದೇಶ್ಯ ಪದಗಳು | ಅನ್ಯದೇಶ್ಯ ಪದಗಳು |
|---|---|
| | |
| | |
| | |
| | |
| | |
| | |

@KTBS NOT TO BE REPUBLISHED

**ಹೀಗೊಂದು ಕಲಿಕೆ !**

ದೇಶ್ಯ ಪದಗಳು : ಹೊರಗಿನ ಭಾಷೆಗಳಿಂದ ಬಾರದೆ, ಒಂದು ಭಾಷೆಯಲ್ಲಿ ಮೊದಲಿನಿಂದಲೂ ಇರತಕ್ಕ ಅಥವಾ ಅದರ ಪ್ರಕೃತಿಗಳಿಂದಲೇ ಸಾಧಿತವಾಗಿರುವ ಪದಗಳಿಗೆ 'ದೇಶ್ಯ ಪದ'ಗಳೆಂದು ಹೆಸರು.

ಉದಾಹರಣೆ : ನೆಲ, ಹೊಲ, ಅಕ್ಕಿ, ಕಲ್ಲು, ಹೊಳೆ, ಒಂದು, ಎರಡು ಇತ್ಯಾದಿ.

ಅನ್ಯದೇಶ್ಯ ಪದಗಳು : ಹಲವು ಸಂದರ್ಭಗಳಲ್ಲಿ ಬೇರೆ ಭಾಷೆಗಳಿಂದ ಹಲವು ಪದಗಳು ಒಂದು ದೇಶಭಾಷೆಗೆ ಸೇರಿಹೋಗುತ್ತವೆ. ಹೀಗೆ ಹೊರಗಿನ ಭಾಷೆಗಳಿಂದ ಬಂದು, ಒಂದು ಭಾಷೆಗೆ ಸೇರುವ ಪದಗಳಿಗೆ ಅನ್ಯದೇಶ್ಯಪದಗಳೆಂದು ಹೆಸರು.

ಉದಾಹರಣೆ : ಜಮೀನು, ಸರ್ಕಾರ, ರೈತ, ಸಲಾಮು, ಕಾನೂನು, ಕಾಗದ, ಬಂದೂಕು.

## ಬುನಾದಿ ಹಂತ – ಚಟುವಟಿಕೆ ಹಾಳೆ 19

# ತತ್ಸಮ – ತದ್ಭವಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿವಿಧ ಸಾಹಿತ್ಯ ರಚನೆಗಳಲ್ಲಿ ಬರುವ ತತ್ಸಮ–ತದ್ಭವ ಪದಗಳನ್ನು ಸಾಂದರ್ಭಿಕವಾಗಿ ಗ್ರಹಿಸಿ ಅವುಗಳ ಅರ್ಥವನ್ನು ತಿಳಿದು ಹೇಳುವರು.

**ಚಟುವಟಿಕೆ 1 :** ಜೋಡಿ ಮಾಡಿ ಆಟ – ಡೈಸ್‌ನಲ್ಲಿ ಬೀಳುವ ಸಂಖ್ಯೆಗಳ ಅನುಗುಣವಾಗಿ ಚೌಕದಲ್ಲಿ ಇರುವ ಪದಗಳನ್ನು ಜೋಡಿ ಮಾಡಿ ಬರೆದು, ನಿಮಗಿಷ್ಟವಾದ ಪದಗಳಿಗೆ ಮಾದರಿಯಂತೆ ಸ್ವಂತವಾಕ್ಯ ರಚಿಸಿರಿ.

**ತಂಡ 1 :**

| | | |
|---|---|---|
| 1 ಯುದ್ಧ | 2 ಪಕ್ಷಿ | 3 ಅಕ್ಷರ |
| 4 ವನ | 5 ರತ್ನ | 6 ಋಷಿ |

| | | |
|---|---|---|
| 6 ರಿಸಿ | 3 ಅಕ್ಕರ | 4 ಬನ |
| 2 ಹಕ್ಕಿ | 1 ಜುದ್ಧ | 5 ರತುನ |

**ತಂಡ 2 :**

| | | |
|---|---|---|
| 3 ವೀರ | 6 ವೈಶಾಖ | 1 ರಕ್ತ |
| 5 ಮಲ್ಲಿಗೆ | 2 ಪುಸ್ತಕ | 4 ಕಾರ್ಯ |

| | | |
|---|---|---|
| 6 ಬೇಸಿಗೆ | 5 ಮಲ್ಲಿಕ | 2 ಹೊತ್ತಿಗೆ |
| 4 ಕಜ್ಜ | 3 ಬೀರ | 1 ರಕುತ |

**ತಂಡ 3 :**

| | | |
|---|---|---|
| 5 ವಿಜ್ಞಾನ | 4 ಯಾತ್ರ | 3 ಶಾಲಾ |
| 6 ರಾಜ | 1 ವಸತಿ | 2 ಮುಖ |

| | | |
|---|---|---|
| 3 ಸಾಲೆ | 4 ಯಾತ್ರೆ | 1 ಬಸದಿ |
| 2 ಮೊಗ | 6 ರಾಯ | 5 ಬಿನ್ನಣ |

**ತಂಡ 4 :**

| | | |
|---|---|---|
| 4 ಭೂಮಿ | 6 ಯೋಗಿ | 5 ಕವಿ |
| 1 ಪದ್ಮ | 3 ಭಕ್ತಿ | 2 ಸಂಧ್ಯಾ |

| | | |
|---|---|---|
| 2 ಸಂಜೆ | 5 ಕಬ್ಬಿಗ | 1 ಪದುಮ |
| 3 ಭಕುತಿ | 4 ಬುವಿ | 6 ಜೋಗಿ |

**ಮಾದರಿ :** ಪಕ್ಷಿಯು ನೋಡಲು ಸುಂದರವಾಗಿದೆ. (ತತ್ಸಮ ಪದ)
ಹಕ್ಕಿಯು ನೋಡಲು ಸುಂದರವಾಗಿದೆ. (ತದ್ಭವ ಪದ)

1)________________________________

2)________________________________

3)________________________________

4)________________________________

©KTBS NOT TO BE REPUBLISHED

## ಹಾಡಿಗೊಂದು ನೃತ್ಯ



ಹೊಂದಿಸಿ ತತ್ಸಮ ತದ್ಭವ
ಕಲಿಯಿರಿ ಪದಗಳ ಉದ್ಭವ
ಬಂದಿತಂದು ಪದ ಸಂಸ್ಕೃತದಿಂದ
ಸ್ವೀಕರಿಸಿ ತಂದು ಕನ್ನಡದ ಕಂದ
ಅರ್ಥ ಬದಲಾಗದಿರುವುದೇ ಚಂದ
ಅದ ನೀ ತಿಳಿದು ಕಲಿ ಕಂದ
ಮಾಡು ವಾಕ್ಯ ತತ್ಸಮದಲಿ
ಪದಗಳು ಬದಲಾಗದಿರಲಿ ತದ್ಭವದಲಿ
ಕಲಿತ ದಿನದಂದೇ ನೀ ಕನ್ನಡದ ಕಲಿ
ಇನ್ನೊಬ್ಬರಿಗೂ ಅದನ್ನು ತಿಳಿಸಿ ನೀ ನಲಿ

**ಚಟುವಟಿಕೆ 2 :** ಕೊಟ್ಟಿರುವ ಕಥೆಯನ್ನು ಓದಿ ಅಡಿಗೆರೆ ಎಳೆದಿರುವ ಪದಗಳಿಗೆ ತದ್ಭವಗಳನ್ನು ಬರೆಯಿರಿ.

ಪದ್ಮ ಮತ್ತು **ಸರಸ್ವತಿ** ಇಬ್ಬರೂ **ಮೃದು** ಸ್ವಭಾವದ ಹುಡುಗಿಯರು. ಇವರಿಬ್ಬರ **ಸ್ನೇಹ** ಎಲ್ಲರಿಗೂ ಮಾದರಿಯಾಗಿತ್ತು. ಇವರು ತಮ್ಮ ಜ್ಞಾನ ಹೆಚ್ಚಿಸಿಕೊಳ್ಳಲು ನಿತ್ಯ ಅನೇಕ ಚಟುವಟಿಕೆಗಳನ್ನು **ಸಂತೋಷ**ದಿಂದ ಮಾಡುತ್ತಿದ್ದರು. ಕಲಿಯುವ ಸಮಯದಲ್ಲಿ **ಕಾವ್ಯ,ಕಥೆ,** ಕವನಗಳನ್ನು ಓದುತ್ತಿದ್ದರು ಮತ್ತು **ಪುಸ್ತಕ**ದಲ್ಲಿ ಬರೆಯುತ್ತಿದ್ದರು. ಮನೆಯಲ್ಲಿ ತಾಯಿಯ **ಕಾರ್ಯ**ದಲ್ಲಿ ಸಹಾಯ ಮಾಡುತ್ತಿದ್ದರು. ತರಗತಿಗೆ ಹೋದ ಕೂಡಲೇ ಮೊದಲಿಗೆ **ಧ್ಯಾನ** ಮಾಡುತ್ತಿದ್ದರು. **ಶಾಲಾ** ಪ್ರಾರ್ಥನಾ ಸಮಯದಲ್ಲಿ ದಿನಕ್ಕೊಂದು ಪುಸ್ತಕವನ್ನು ಇತರರಿಗೆ ಪರಿಚಯಿಸುತ್ತಿದ್ದರು. ಇವರ ತಂದೆಯವರು **ಯೋಧ**ರಾಗಿದ್ದರು. ಅವರು ಯುದ್ಧದಲ್ಲಿ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ್ದರು. ಇವರ ದೇಶ**ಭಕ್ತಿ** ಮಕ್ಕಳಿಗೆ **ಪ್ರೇರಣೆ**ಯಾಗಿತ್ತು.

©KTBS NOT TO BE REPUBLISHED

| ತತ್ಸಮ ಪದಗಳು | ತದ್ಭವ ಪದಗಳು |
|---|---|
| ______ | ______ |
| ______ | ______ |
| ______ | ______ |
| ______ | ______ |
| ______ | ______ |

### ಹೀಗೊಂದು ಕಲಿಕೆ !

**ತತ್ಸಮ – ತದ್ಭವಗಳು**

**ತತ್ಸಮ –** ಕನ್ನಡ ಭಾಷೆಯಲ್ಲಿ ಬಳಕೆಯಾಗುತ್ತಿರುವ ಪದಗಳಲ್ಲಿ ಯಾವ ಪದಗಳು ಸಂಸ್ಕೃತದಿಂದ ನೇರವಾಗಿ ಬಂದಿವೆಯೋ ಅಂತಹ ಪದಗಳನ್ನು 'ತತ್ಸಮ' ಎನ್ನುತ್ತೇವೆ. ಉದಾ: ಚಂದ್ರ, ಲಕ್ಷ್ಮಿ.

**ತದ್ಭವ –** ಕನ್ನಡ ಭಾಷೆಯಲ್ಲಿ ಬಳಕೆಯಾಗುತ್ತಿರುವ ಪದಗಳು ಸಂಸ್ಕೃತದಿಂದ ಬಂದು ಅಲ್ಪ ಸ್ವಲ್ಪ ಬದಲಾವಣೆಯಿಂದ ಉಂಟಾದ ಪದಗಳೇ 'ತದ್ಭವ' ಎನ್ನುತ್ತೇವೆ. ಉದಾ: ಚಂದಿರ, ಲಕುಮಿ.

## ಬುನಾದಿ ಹಂತ – ಚಟುವಟಿಕೆ ಹಾಳೆ 20

# ಲೇಖನ ಚಿಹ್ನೆಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿವಿಧ ಉದ್ದೇಶಗಳಿಗಾಗಿ ಬರೆಯುತ್ತಿರುವ ತಮ್ಮ ಲೇಖನಗಳಲ್ಲಿ ಲೇಖನ ಚಿಹ್ನೆಗಳು (ಉದಾ: ಪೂರ್ಣ ವಿರಾಮ, ಅಲ್ಪವಿರಾಮ, ಪ್ರಶ್ನಾರ್ಥಕ ಚಿಹ್ನೆಗಳ ಇತ್ಯಾದಿ) ಇವುಗಳ ಸೂಕ್ತ ಪ್ರಯೋಗ ಮಾಡುವರು.

**ಚಟುವಟಿಕೆ 1 :** ಈ ಲೇಖನ ಚಿಹ್ನೆಗಳನ್ನು ಹೊಂದಿಸಿ ಬರೆಯಿರಿ.

1) ? – ಪೂರ್ಣವಿರಾಮ ಚಿಹ್ನೆ → ______

2) . – ವಾಕ್ಯವೇಷ್ಟನ ಚಿಹ್ನೆ → ______

3) ! – ಪ್ರಶ್ನಾರ್ಥಕ ಚಿಹ್ನೆ → ______

4) ‘ ’ – ಉದ್ಧರಣ ಚಿಹ್ನೆ → ______

5) “ ” – ಅಲ್ಪವಿರಾಮ ಚಿಹ್ನೆ → ______

6) , – ಭಾವಸೂಚಕ ಚಿಹ್ನೆ → ______

@KTBS NOT TO BE REPUBLISHED

**ಚಟುವಟಿಕೆ 2 :** ಈ ಲೇಖನ ಚಿಹ್ನೆಗಳನ್ನು ಯಾವ ಸಂದರ್ಭಗಳಲ್ಲಿ ಬಳಸುವರು ಎಂಬುದನ್ನು ಗುರುತಿಸಿ ಚಿಹ್ನೆ ಬರೆಯಿರಿ.

1) ಪೂರ್ಣವಿರಾಮ ಚಿಹ್ನೆ – ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಹೇಳುವಾಗ ಬಳಕೆ. → ______

2) ಅಲ್ಪವಿರಾಮ ಚಿಹ್ನೆ – ಅರ್ಥಪೂರ್ಣ ವಾಕ್ಯದ ಕೊನೆಯಲ್ಲಿ ಬಳಕೆ. → ______

3) ಅರ್ಧವಿರಾಮ ಚಿಹ್ನೆ – ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸುವಾಗ ಬಳಕೆ. → ______

4) ಪ್ರಶ್ನಾರ್ಥಕ ಚಿಹ್ನೆ – ಪ್ರಧಾನ ವಾಕ್ಯಗಳಲ್ಲಿನ ಉಪವಾಕ್ಯಗಳ ಅಂತ್ಯದಲ್ಲಿ ಬಳಕೆ. → ______

5) ಭಾವಸೂಚಕ ಚಿಹ್ನೆ – ಸಂಬೋಧನೆಯ ಮುಂದೆ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ವಿಶೇಷಣೆಗಳು ಬಂದಾಗ ಬಳಕೆ. → ______

6) ಉದ್ಧರಣ ಚಿಹ್ನೆ – ಪ್ರಶ್ನೆ ಕೇಳುವ ಸಂದರ್ಭದಲ್ಲಿ ಬಳಕೆ → ______

**ಚಟುವಟಿಕೆ 3 :** ಲೇಖನ ಚಿಹ್ನೆ ಅನುಸರಿಸಿ ಯಥಾವತ್ತಾಗಿ ನಕಲು ಮಾಡಿ ಬರೆಯಿರಿ.

1) ಅಯ್ಯೋ! ಬಹಳ ನೋವಾಗುತ್ತಿದೆ.

______________________________

2) ನಿನ್ನ ಊರಿನ ಹೆಸರು ಏನು?

______________________________

3) ಗೀತಾ, ಶ್ವೇತ, ಸಂಗೀತ ಮೂವರು ಗೆಳತಿಯರು.

______________________________

4) ಬಸವಣ್ಣನವರು "ಕಾಯಕವೇ ಕೈಲಾಸ" ಎಂದು ಹೇಳಿದ್ದಾರೆ.

______________________________

@KTBS NOT TO BE REPUBLISHED

**ಚಟುವಟಿಕೆ 4 :** ಗದ್ಯಭಾಗಕ್ಕೆ ಸೂಕ್ತ ಲೇಖನ ಚಿಹ್ನೆಗಳನ್ನು ಹಾಕಿರಿ.

ನನ್ನ ಹೆಸರು ಅನಿತ ನನ್ನ ಮನೆಯಲ್ಲಿ ನಾನು ನನ್ನ ಅಮ್ಮ ಅಪ್ಪ ಹಾಗೂ ನನ್ನ ತಮ್ಮ ವಾಸವಾಗಿದ್ದೇವೆ ನನ್ನ ಅಪ್ಪ ವ್ಯವಸಾಯ ಮಾಡುತ್ತಾರೆ ಅವರು ಯಾವಾಗಲೂ ಕೃಷಿಯೇ ನನ್ನ ಜೀವನ ನನ್ನ ಪಾಲಿಗೆ ಅದೇ ಸಾಕು ಇನ್ನೇನೂ ಬೇಡ ಎನ್ನುತ್ತಿರುತ್ತಾರೆ ನನ್ನ ಅಮ್ಮ ಅಪ್ಪನ ಕೆಲಸದಲ್ಲಿ ಸಹಾಯ ಮಾಡುತ್ತಾರೆ ನಾನು ನನ್ನ ತಂದೆ ತಾಯಿಗಳಿಂದ ಕೃಷಿಯಲ್ಲಿ ಪ್ರೇರಿತಳಾಗಿದ್ದೇನೆ ನಾನು ದೊಡ್ಡವಳಾದ ಮೇಲೆ ಏನಾಗಬೇಕೆಂದಿರುವೇ ಊಹಿಸಿ ಹೇಳಿ.

**ಹೀಗೊಂದು ಕಲಿಕೆ !**

ಲೇಖನ ಚಿಹ್ನೆಗಳು ಭಾಷೆಯ ಜೀವಾಳವಿದ್ದಂತೆ. ಅರ್ಥಪೂರ್ಣವಾಗಿ ಓದಲು ಅನುಕೂಲವಾಗಲು. ಭಾವನೆಗಳನ್ನು ವ್ಯಕ್ತಪಡಿಸುವಾಗ ಲೇಖನ ಚಿಹ್ನೆಗಳು ಅತಿಮುಖ್ಯವಾಗಿದೆ.

# ಶಬ್ದಕೋಶ ಬಳಸೋಣ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಅಪರಿಚಿತ ಶಬ್ದಗಳ ಅರ್ಥವನ್ನು ಶಬ್ದಕೋಶಗಳಲ್ಲಿ ಹುಡುಕುವರು.

**ಚಟುವಟಿಕೆ 1 :** ನಾನು ಶಬ್ದಕೋಶ – ಶಬ್ದಕೋಶದ ಪರಿಚಯವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ನಾನೊಂದು ಶಬ್ದಕೋಶ. ನನ್ನಲ್ಲಿ ಸಾವಿರಾರು ಪದಗಳಿವೆ. ಪ್ರತಿಯೊಂದು ಪದಗಳನ್ನು 'ಅ' ಕಾರಾದಿಯಾಗಿ ನನ್ನಲ್ಲಿ ಜೋಡಿಸಲಾಗಿದೆ. ನಿಮಗೆ ಗೊತ್ತಿರದ ಯಾವುದೇ ಪದದ ಅರ್ಥವನ್ನು ತಿಳಿಯಬೇಕಿದ್ದರೆ, ನನ್ನನ್ನು ನೀವು ಬಳಸಬಹುದು. ನಾನು ಬೇರೆ ಬೇರೆ ಗಾತ್ರದಲ್ಲಿ ದೊರೆಯುತ್ತೇನೆ. ಒಮ್ಮೆ ನೀವು ನನ್ನನ್ನು ಖರೀದಿಸಿದರೆ ಜೀವನ ಪರ್ಯಂತ ನಿಮ್ಮ ಉಪಯೋಗಕ್ಕೆ ನಾನು ದೊರೆಯುತ್ತೇನೆ.




1) ಹೊಸ ಪದಗಳ ಅರ್ಥವನ್ನು ಹುಡುಕಲು ಬಳಸುವ ಪುಸ್ತಕ ಯಾವುದು?

_______________________________________________

2) ಶಬ್ದಕೋಶದಲ್ಲಿ ಪದಗಳನ್ನು ಯಾವ ಕ್ರಮದಲ್ಲಿ ಜೋಡಿಸಲಾಗಿರುತ್ತದೆ?

_______________________________________________

**ಚಟುವಟಿಕೆ 2 :** ಕೊಟ್ಟಿರುವ ಪದಗಳ ಅರ್ಥವನ್ನು ಶಬ್ದಕೋಶದಲ್ಲಿ ಅರ್ಥಹುಡುಕಿ ಬರೆಯಿರಿ.

1) ದನ – ____________

2) ಮಧ್ಯ – ____________

3) ಫಲ – ____________

4) ಬಾನು – ____________

5) ಅರಿವು – ____________

6) ಧನ – ____________

7) ಹರಿವು – ____________

@KTBS NOT TO BE REPUBLISHED

**ಚಟುವಟಿಕೆ 3 :** ಕೊಟ್ಟಿರುವ ಪದಗಳನ್ನು ಅಕಾರಾದಿಯಾಗಿ ಜೋಡಿಸಿ ಬರೆಯಿರಿ.

ಮನೆ, ಅಕ್ಕಿ, ಶಾಲೆ, ಪುಟ, ಗಿಡ, ತೆನೆ, ಹೊಳೆ, ಕೆರೆ, ಜಲ, ಬೆಳಕು, ಮರ, ನದಿ, ಹಣ್ಣು, ಕಾಲು, ಬಾಗಿಲು, ಕಡಲೆ, ವೃಕ್ಷ, ಪತಂಗ, ತಟ್ಟೆ, ಚೂರು.

______________________________________________

______________________________________________

______________________________________________

______________________________________________

______________________________________________

**ಚಟುವಟಿಕೆ 4 :** ಶಬ್ದಕೋಶದ ಉಪಯೋಗಗಳನ್ನು ಬರೆಯಿರಿ.

______________________________________________

______________________________________________

______________________________________________

______________________________________________

______________________________________________

@KTBS
NOT TO BE REPUBLISHED

**ಹೀಗೊಂದು ಕಲಿಕೆ !**

**ಕನ್ನಡ ನಿಘಂಟಿನ ಇತಿಹಾಸ**

1) ಕನ್ನಡ ನಿಘಂಟುಗಳ ಇತಿಹಾಸವು ಹಳೆಯ ಕಾಲದಿಂದಲೂ ಆರಂಭವಾಗಿದೆ, ಸುಮಾರು 10ನೇ ಶತಮಾನಕ್ಕೆ ಸೇರಿದ ಶಾಸನಗಳಲ್ಲಿ ಪದಾರ್ಥಗಳ ವ್ಯಾಖ್ಯಾನಗಳು ಕಂಡುಬರುತ್ತವೆ.
2) ಮೊದಲನೇ ಕನ್ನಡ ನಿಘಂಟುಗಳಲ್ಲಿ ರನ್ನಕಂದ ಮತ್ತು ಅಮರಕೋಶದ ಭಾಷಾಂತರಗಳು ಪ್ರಮುಖವಾಗಿವೆ.
3) 19ನೇ ಶತಮಾನದಲ್ಲಿ ನಿಘಂಟಿನ ರಚನೆಗೆ ವಿದ್ಯಾವಂತರು ಮತ್ತು ಕ್ರೈಸ್ತ ಮಿಷನರಿಗಳು ಬೆಂಬಲ ನೀಡಿದರು. ಇದರಲ್ಲಿ ಫರ್ಡಿನ್ಯಾಂಡ್ ಕಿಟಲ್ ಅವರ ನಿಘಂಟು ಪ್ರಮುಖವಾಗಿದೆ.
4) ಇಂದಿನ ಕಾಲದಲ್ಲಿ ಡಿಜಿಟಲ್ ತಂತ್ರಜ್ಞಾನದ ಮೂಲಕ ಕನ್ನಡ ನಿಘಂಟಿಗಳು ಆನ್‌ಲೈನ್‌ನಲ್ಲಿ

## ಬುನಾದಿ ಹಂತ – ಚಟುವಟಿಕೆ ಹಾಳೆ 22
## ಸೂಚನಾ ಫಲಕಗಳು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಸೂಚನಾ ಫಲಕಗಳಲ್ಲಿನ ಸರಳ ಸೂಚನೆಗಳನ್ನು ಓದುವರು ಮತ್ತು ವಿವಿಧ ಕೈ ಬರಹಗಳನ್ನು ಓದಿ ಅರ್ಥವನ್ನು ಗ್ರಹಿಸುವರು.

**ಚಟುವಟಿಕೆ 1 :** ಈ ಕೆಳಗೆ ನೀಡಲಾಗಿರುವ ಚಿತ್ರಗಳಿಗೆ ಸರಿಯಾದ ಸೂಚನೆಗಳನ್ನು ಹೊಂದಿಸಿ ಬರೆಯಿರಿ.

ಅ　　　　ಬ

1)  ಜೀಬ್ರಾಪಟ್ಟಿಯಲ್ಲಿ ರಸ್ತೆ ದಾಟುವುದು ____________

2)  ಮೊಬೈಲ್ ಬಳಕೆ ನಿಷೇಧಿಸಿದೆ ____________

3)  ಶಾಲಾವಲಯ ____________

4)  ಹೂ ಕೀಳಬಾರದು ____________

5)  ಹಾರನ್ ಮಾಡಬಾರದು ____________

6)  ನಿಶ್ಶಬ್ದವಾಗಿರಬೇಕು ____________

@KTBS NOT TO BE REPUBLISHED

**ಚಟುವಟಿಕೆ 2 :** ಈ ಕೆಳಗೆ ನೀಡಲಾಗಿರುವ ಚಿತ್ರಗಳ ಸ್ಥಳಗಳಲ್ಲಿ ನೀಡಬಹುದಾದ ಸೂಚನೆಗಳನ್ನು ಬರೆಯಿರಿ.











@KTBS NOT TO BE REPUBLISHED

ಬುನಾದಿ ಹಂತ – ಚಟುವಟಿಕೆ ಹಾಳೆ 23

# ಟಿಪ್ಪಣಿ ಬರೆಹ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಭಾಷಾ ಸೂಕ್ಷ್ಮತೆಗಳ ಮೇಲೆ ಗಮನಹರಿಸಿ ತಮ್ಮ ಭಾಷೆಯ ರಚನೆ ಮಾಡಿಕೊಳ್ಳುವರು ಮತ್ತು ಅದನ್ನು ತಮ್ಮ ಬರವಣಿಗೆಯಲ್ಲಿ ಬಳಸುವರು.

**ಚಟುವಟಿಕೆ 1 :** ಕಥೆ : ಛಡಿ ಏಟು! – ಈ ಕಥೆಯನ್ನು ಓದಿಕೊಂಡು ಕಥೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.



ಮಾವಿನ ತೋಪು. ಇಡೀ ತೋಪು ಮಾವಿನಕಾಯಿ ಮತ್ತು ಹಣ್ಣುಗಳಿಂದ ತುಂಬಿತ್ತು. ಅದು ನೋಡುಗರ ಕಣ್ಮನ ಸೆಳೆಯುತ್ತಿತ್ತು. ಮಕ್ಕಳು ಹಣ್ಣನ್ನು ಪಡೆಯಲು ಕಲ್ಲು ಬೀಸುತ್ತಿದ್ದರು. ಒಂದು ಹುಡುಗಿ ಮಾವಿನ ಹಣ್ಣಿಗಾಗಿ ಕಲ್ಲು ಬೀಸಿದಳು. ಆ ಸಂದರ್ಭದಲ್ಲಿ ಅದೇ ರಸ್ತೆಯಲ್ಲಿ ಹೋಗುತ್ತಿದ್ದ ರಾಜನಿಗೆ ಕಲ್ಲು ಬಡಿಯಿತು. ರಾಜನು ಕಲ್ಲು ಬಂದ ದಿಕ್ಕಿಗೆ ನೋಡಿದನು. ಅವನ ಸೈನಿಕರು ಈ ದೃಶ್ಯ ನೋಡಿ ಗಾಬರಿಯಾದರು. ಓಡಿ ಹೋಗಿ ಕಲ್ಲು ಬೀರಿದ ಹುಡುಗಿಯನ್ನು ಹಿಡಿದು ತಂದರು. ಆ ಹುಡುಗಿಗೆ ಸೈನಿಕರು “ರಾಜನಿಗೆ ಏಕೆ ಕಲ್ಲು ಬೀಸಿದೆ?” ಎಂದು ಕೇಳಿದರು. ಹುಡುಗಿಯು “ನಾನು ರಾಜನಿಗೆ ಕಲ್ಲು ಬೀಸಲಿಲ್ಲ. ಮಾವಿನ ಮರಕ್ಕೆ ಬೀಸಿದೆ. ಅದು ಆಕಸ್ಮಿಕವಾಗಿ ರಾಜನಿಗೆ ಬಡಿದಿದೆ. ಕ್ಷಮಿಸಿ ನನ್ನ ತಪ್ಪಿಲ್ಲ” ಎಂದಳು. ಸೈನಿಕರು “ರಾಜನಿಗೆ ಕಲ್ಲು ಬೀಸಿದ್ದಕ್ಕೆ ಶಿಕ್ಷೆ ಏನು ಗೊತ್ತೇ? ಛಡಿ ಏಟು!” ಎಂದು ಭಯ ಹುಟ್ಟಿಸಿದರು. ಆಗ ಅವಳು ರಾಜನ ಹತ್ತಿರ ಹೋಗಿ “ಸ್ವಾಮಿ ಮರಕ್ಕೆ ಕಲ್ಲು ಬೀಸಿದರೆ ಅದು ಹಣ್ಣು ಕೊಡುತ್ತದೆ. ಆದರೆ ಆಕಸ್ಮಿಕವಾಗಿ ನಿಮಗೆ ಕಲ್ಲು ಬಿದ್ದುದಕ್ಕೆ ನನಗೆ ಛಡಿ ಏಟು ಕೊಡುವುದಾದರೆ ಛಡಿ ಏಟು ಕೊಡಿ” ಎಂದಳು. ರಾಜನು ಅವಳ ಜಾಣತನಕ್ಕೆ ಮೆಚ್ಚಿದನು. “ನೀನು ಜಾಣ ಹುಡುಗಿ. ಮರ ಕಲ್ಲು ಬೀರಿದವರಿಗೆ ಹಣ್ಣು ಕೊಡುತ್ತದೆ. ಆಕಸ್ಮಿಕವಾಗಿ ಕಲ್ಲು ತಗಲಿದ್ದಕ್ಕೆ ಛಡಿ ಏಟು ಕೊಡುವಷ್ಟು ಕಟುಕನಲ್ಲ ನಾನು. ಈ ತೋಟವನ್ನೆ ನಿನಗೆ ಬಹುಮಾನ ಕೊಡುತ್ತೇನೆ” ಎಂದು ಅವಳನ್ನು ಸಂತೈಸಿದನು.

© KTBS NOT TO BE REPUBLISHED

**ಚಟುವಟಿಕೆ 2 :** ಕೊಟ್ಟಿರುವ ಚಿತ್ರಗಳಲ್ಲಿ ನಿಮಗೆ ಯಾವ ರೀತಿಯ ಆಹಾರ ಇಷ್ಟ? ಏಕೆ? ನಿಮಗೆ ಯಾವುದು ಇಷ್ಟವಿಲ್ಲ ಏಕೆ? ಎಂಬುದನ್ನು ಟಿಪ್ಪಣಿ ಬರೆಯಿರಿ.





@KTBS
NOT TO BE REPUBLISHED

## ಬುನಾದಿ ಹಂತ – ಚಟುವಟಿಕೆ ಹಾಳೆ 24
# ಸುದ್ಧಿ ಸಮಾಚಾರ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಪಠ್ಯೇತರ ವಿಷಯ ಸಾಮಾಗ್ರಿಗಳನ್ನು (ಉದಾಹರಣೆಗೆ: ಬಾಲಪತ್ರಿಕೆ, ಸಮಾಚಾರ ಪತ್ರಿಕೆಗಳ ಶೀರ್ಷಿಕೆ, ಮಕ್ಕಳ ಸಾಹಿತ್ಯ ಇತ್ಯಾದಿ) ಓದಿ ತಿಳಿಯುವರು ಮತ್ತು ಅವುಗಳ ಬಗ್ಗೆ ನಿರರ್ಗಳವಾಗಿ ಮಾತನಾಡುವರು.

**ಚಟುವಟಿಕೆ 1 :** ಕೊಟ್ಟಿರುವ ಕರಪತ್ರವನ್ನು ಗಮನವಿಟ್ಟು ಓದಿ, ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ.




1) ಈ ಕರಪತ್ರವು ಯಾವ ವಿಷಯಕ್ಕೆ ಸಂಬಂಧಿಸಿದೆ?

_______________________________

_______________________________

_______________________________

2) ಈ ಶಾಲೆಯಲ್ಲಿ ದೊರೆಯುವ ಕಲಿಕಾ ಸೌಲಭ್ಯಗಳು ಯಾವುವು?

_______________________________

_______________________________

_______________________________

3) ಇದು ಯಾವ ಶಾಲೆಯ ಕರಪತ್ರವಾಗಿದೆ?

_______________________________

_______________________________

NOT TO BE REPUBLISHED

**ಚಟುವಟಿಕೆ 2 :** ನಿಮ್ಮ ಶಾಲೆಯಲ್ಲಿರುವ ದಿನಪತ್ರಿಕೆಯೊಂದನ್ನು ತೆಗೆದುಕೊಂಡು ಕೊಟ್ಟಿರುವ ವಿಷಯಕ್ಕೆ ಸಂಬಂಧಿಸಿದಂತೆ ಪ್ರಮುಖ ಸುದ್ಧಿಗಳನ್ನು ಸಂಗ್ರಹಿಸಿ ಬರೆದು ತರಗತಿಯಲ್ಲಿ ಓದಿರಿ.

ಸುದ್ಧಿ ಪತ್ರಿಕೆಯ ಹೆಸರು : ______________________

ಸುದ್ಧಿ ಪತ್ರಿಕೆ ದಿನಾಂಕ ಮತ್ತು ವಾರ : ______________________

ಸುದ್ಧಿ ಪತ್ರಿಕೆಯ ಸಂಪರ್ಕ ಸಂಖ್ಯೆ : ______________________

ಸುದ್ಧಿ ಪತ್ರಿಕೆಯ ಮುಖಪುಟದಲ್ಲಿರುವ ಪ್ರಮುಖ ಸುದ್ಧಿಗಳು :

______________________

______________________

______________________

______________________

ಸುದ್ಧಿ ಪತ್ರಿಕೆಯಲ್ಲಿರುವ ಕ್ರೀಡೆಗೆ ಸಂಬಂಧಿಸಿದ ಸುದ್ಧಿಗಳು :

______________________

______________________

______________________

______________________

ಸುದ್ಧಿ ಪತ್ರಿಕೆಯಲ್ಲಿರುವ ರಾಜ್ಯ ಮತ್ತು ರಾಷ್ಟ್ರೀಯ ಪ್ರಮುಖ ಸುದ್ಧಿಗಳು :

______________________

______________________

______________________

______________________

NOT TO BE REPUBLISHED @KTBS

**ಹೀಗೊಂದು ಕಲಿಕೆ !**

**ಕನ್ನಡ ಪತ್ರಿಕೆಗಳ ಸಂಕ್ಷಿಪ್ತ ಇತಿಹಾಸ**

1) ಮಂಗಳೂರು ಸಮಾಚಾರ (1843) : ಪ್ರಥಮ ಕನ್ನಡ ಪತ್ರಿಕೆ. ಇದನ್ನು ಜರ್ಮನ್ ಮಿಷನರಿ ಹರ್ಮನ್ ಮೊಗ್ಲಿಂಗ್ ಮಂಗಳೂರಿನಲ್ಲಿ ಪ್ರಾರಂಭಿಸಿದರು.
2) ಕರ್ನಾಟಕ ಪ್ರಕಾಶಿಕಾ (1857) : ಬಳ್ಳಾರಿಯಲ್ಲಿ ಪ್ರಾರಂಭವಾದ ಮತ್ತೊಂದು ಪ್ರಾಚೀನ ಪತ್ರಿಕೆ.
3) 20ನೇ ಶತಮಾನದ ಪ್ರಾರಂಭದಲ್ಲಿ ಸಾಮಾಜಿಕ ಸುಧಾರಣೆ ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಪತ್ರಿಕೆಗಳು ಪ್ರಮುಖ ಪಾತ್ರವಹಿಸಿದವು.
4) ಸಂಯುಕ್ತ ಕರ್ನಾಟಕ (1921) : ಕನ್ನಡ ಭಾಷೆ, ಸಾಹಿತ್ಯ ಮತ್ತು ರಾಷ್ಟ್ರಭಕ್ತಿಯ ವಾದವನ್ನು ಉತ್ತೇಜಿಸಿದ ಪ್ರಮುಖ ಪತ್ರಿಕೆ.
5) ಸ್ವಾತಂತ್ರ್ಯ ನಂತರ, ಪ್ರಜಾವಾಣಿ (1948), ವಿಜಯ ಕರ್ನಾಟಕ, ಉದಯವಾಣಿ, ಕನ್ನಡ ಪ್ರಭಾ ಮೊದಲಾದ ಪತ್ರಿಕೆಗಳು ಜನಪ್ರಿಯವಾಗಿದ್ದವು.

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 1
# ನನ್ನ ಅನಿಸಿಕೆ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಅಪರಿಚಿತ ಸನ್ನಿವೇಶದಲ್ಲೂ ಸಂಭವಿಸಿದ ಘಟನೆಗಳು/ಚಟುವಟಿಕೆಗಳು, ವಿವಿಧ ಪರಿಸರಗಳಲ್ಲಿ ಅನುಭವಿಸಿದ ಅನುಭವಗಳ ಬಗ್ಗೆ ಮಾತನಾಡುವರು ಮತ್ತು ಪ್ರಶ್ನಿಸುವರು.

**ಚಟುವಟಿಕೆ 1 :** ಕೊಟ್ಟಿರುವ ಚಿತ್ರಗಳಲ್ಲಿ ಕಾಣುತ್ತಿರುವ ವೃತ್ತಿಗಳನ್ನು ಗಮನಿಸುತ್ತಾ ಹೂವಿನ ದಳದಲ್ಲಿರುವ ಹೆಸರಿಗೆ ಗೆರೆ ಎಳೆದು ಹೊಂದಿಸಿರಿ ಹಾಗೂ ನಿಮಗಿಷ್ಟವಾದ ವೃತ್ತಿ ಯಾವುದು? ಏಕೆ? ಎಂದು ತರಗತಿಯಲ್ಲಿ ಹಂಚಿಕೊಂಡು ಆ ವೃತ್ತಿಯ ಬಗ್ಗೆ ಕೊಟ್ಟಿರುವ ಸ್ಥಳದಲ್ಲಿ ಬರೆಯಿರಿ.














©KTBS
NOT TO BE REPUBLISHED

**ಚಟುವಟಿಕೆ 2 :** ಡೈಸ್ ಬಳಸಿ ಲೂಡೋ ಆಟದ ಬೋರ್ಡ್‌ನಲ್ಲಿ ಆಟ ಆಡಿರಿ. ನಿಮ್ಮ ಕಾಯಿ ನಡೆಸುವಾಗ ಕಾಯಿ ಹೋದ ಚೌಕದಲ್ಲಿರುವ ಪದವು ನಾಮಪದದ ಯಾವ ವಿಧಕ್ಕೆ ಸೇರಿದೆ ಎಂದು ಹೇಳಿರಿ.




NOT TO BE REPUBLISHED @KTBS

### ಹೀಗೊಂದು ಕಲಿಕೆ !

ಯಾವುದೇ ವ್ಯಕ್ತಿ, ವಸ್ತು, ಸ್ಥಳ, ಪ್ರಾಣಿ, ಪಕ್ಷಿ ಇತ್ಯಾದಿಗಳನ್ನು ಸೂಚಿಸುವ ಪದಗಳಿಗೆ 'ನಾಮಪದ' ಎನ್ನುವರು. ನಾಮಪದಗಳನ್ನು ಹಲವು ವಿಧಗಳಾಗಿ ವಿಭಾಗಿಸುತ್ತೇವೆ.

1) ವಸ್ತುವಾಚಕಗಳು: ರೂಢನಾಮ, ಅಂಕಿತನಾಮ, ಅನ್ವರ್ಥನಾಮ
2) ಗುಣವಾಚಕಗಳು: ವಸ್ತು, ವ್ಯಕ್ತಿಗಳ ಗುಣ, ಸ್ವಭಾವ ತಿಳಿಸುವ ವಿಶೇಷಣಗಳು. ಉದಾ: ಸಿಹಿ, ದೊಡ್ಡ, ಒಳ್ಳೆಯ ಇತ್ಯಾದಿ.
3) ಪರಿಮಾಣವಾಚಕಗಳು: ವಸ್ತುವಿನ ಅಳತೆ, ಗಾತ್ರ ಹೇಳುವ ಪದಗಳು. ಉದಾ: ಹಲವು, ಕೆಲವು, ಅಷ್ಟು, ಇಷ್ಟು ಇತ್ಯಾದಿ.
4) ದಿಗ್ವಾಚಕಗಳು: ದಿಕ್ಕುಗಳ ಹೆಸರನ್ನು ಸೂಚಿಸುವ ಪದಗಳು. ಉದಾ: ಉತ್ತರ, ದಕ್ಷಿಣ, ವಾಯುವ್ಯ, ಮೂಡಣ ಇತ್ಯಾದಿ.
5) ಸಂಖ್ಯಾವಾಚಕ: ಸಂಖ್ಯೆಯನ್ನು ಹೇಳುವ ಪದಗಳು. ಉದಾ: ಒಂದು, ಹತ್ತು, ಸಾವಿರ, ಲಕ್ಷ ಇತ್ಯಾದಿ.
6) ಸಂಖ್ಯೇಯವಾಚಕ: ಸಂಖ್ಯೆಯಿಂದ ಕೂಡಿದ ವಸ್ತುಗಳನ್ನು ಹೇಳುವ ಪದಗಳು. ಉದಾ: ಎರಡನೆಯ, ಮೂರನೆಯ ಇತ್ಯಾದಿ.
7) ಭಾವನಾಮ: ವಸ್ತುಗಳ/ಕ್ರಿಯೆಯ ಭಾವವನ್ನು ತಿಳಿಸುವ ಪದಗಳು. ಉದಾ: ಬಿಳುಪು, ಆಟ ಇತ್ಯಾದಿ.
8) ಪ್ರಕಾರವಾಚಕ: ವಸ್ತುಗಳ ಸ್ಥಿತಿ ತಿಳಿಸುವ ಪದಗಳು. ಉದಾ: ಅಂಥದು, ಇಂಥದು ಇತ್ಯಾದಿ.
9) ಸರ್ವನಾಮ: ನಾಮಪದಗಳ ಬದಲಾಗಿ ಬಳಸುವ ಪದಗಳು. ಉದಾ: ಅವಳು, ಇವನು, ಅದು, ಇದು ಇತ್ಯಾದಿ.

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 2

## ಚಿತ್ರ ಮಾತು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಅಪರಿಚಿತ ಸನ್ನಿವೇಶದಲ್ಲೂ ಸಂಭವಿಸಿದ ಘಟನೆಗಳು/ಚಟುವಟಿಕೆಗಳು, ವಿವಿಧ ಪರಿಸರಗಳಲ್ಲಿ ಅನುಭವಿಸಿದ ಅನುಭವಗಳ ಬಗ್ಗೆ ಮಾತನಾಡುವರು ಮತ್ತು ಪ್ರಶ್ನಿಸುವರು.

**ಚಟುವಟಿಕೆ 1 :** ಕೊಟ್ಟಿರುವ ಚಿತ್ರ ಚೌಕುಳಿಯ ಮೇಲೆ ಡೈಸ್ ಬಿಡುವುದು. ಡೈಸ್ ಬೀಳುವ ಚಿತ್ರದ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ತರಗತಿಯಲ್ಲಿ ಹೇಳಿರಿ.

| | | | |
|---|---|---|---|
| | <br>ನನ್ನ ಮಹತ್ವದ ಬಗ್ಗೆ ಹೇಳು | <br>ನಾನು ಏಕೆ ಬೇಕು? ಹೇಳು | |
| <br>ನನ್ನ ಬಗ್ಗೆ ಹೇಳು | <br>ನನ್ನ ಬಗ್ಗೆ ಹೇಳು | <br>ನನ್ನ ಉಪಯೋಗ ಹೇಳು | <br>ನಾನು ಯಾರು? ನಾನು ಏಕೆ? ಬೇಕು |
| <br>ನನ್ನ ಉಪಯೋಗವೇನು | <br>ನನ್ನ ಮಹತ್ವದ ಬಗ್ಗೆ ಹೇಳು | <br>ನನ್ನ ವಿಶೇಷತೆಯ ಬಗ್ಗೆ ಹೇಳು | <br>ಅಭಿನಯಿಸು |
| | <br>ಕಾಗದ ಬಳಸಿ ಟೋಪಿ ತಯಾರಿಸಿ | <br>ನಾನು ಬರುವೆ? ಏಕೆ? | |

@KTBS NOT TO BE REPUBLISHED

**ಚಟುವಟಿಕೆ 2 :** ಕೊಟ್ಟಿರುವ ಪದಗಳನ್ನು ರೂಢನಾಮ, ಅಂಕಿತನಾಮ, ಅನ್ವರ್ಥನಾಮಗಳಾಗಿ ವಿಭಾಗಿಸಿ ಬರೆಯಿರಿ.

ನರ್ತಕಿ, ಊರು, ರವಿ, ದೇಶ, ಅಮೆರಿಕ, ಹಿಮಾಲಯ, ಪರ್ವತ, ನಾಯಿ, ದರ್ಜಿ, ನ್ಯಾಯಾಧೀಶ, ಶ್ವೇತ, ವ್ಯಾಪಾರಿ, ಸಲೀಂ, ಗ್ರಾಹಕ, ರೇಖಾ, ಹಳ್ಳಿ, ಜ್ಯೋತಿ, ದೇವಾಲಯ, ಜಯಶ್ರೀ, ಆಟಗಾರ, ಲೇಖಕಿ, ಶ್ರೀನಿವಾಸ್, ಕವಯಿತ್ರಿ, ಆಟ, ರಾಜ್ಯ, ಲೇಖಕ, ಮನೆ, ಕಾದಂಬರಿಕಾರ





| ರೂಢನಾಮ | ಅಂಕಿತನಾಮ | ಅನ್ವರ್ಥನಾಮ |
|---|---|---|
| | | |
| | | |
| | | |
| | | |
| | | |
| | | |
| | | |
| | | |
| | | |
| | | |

@KTBS NOT TO BE REPUBLISHED

**ಹೀಗೊಂದು ಕಲಿಕೆ !**

ವಸ್ತುವಾಚಕದಲ್ಲಿ ಮೂರು ವಿಧಗಳಿವೆ :

1) ರೂಢನಾಮ : ರೂಢಿಯಿಂದ ಬಂದ ಪದಗಳನ್ನು 'ರೂಢನಾಮ' ಎನ್ನುತ್ತೇವೆ.
ಉದಾ: ನದಿ, ರಾಜ್ಯ ಇತ್ಯಾದಿ.

2) ಅಂಕಿತನಾಮ : ವ್ಯವಹಾರದ ದೃಷ್ಟಿಯಿಂದ ಇಟ್ಟುಕೊಂಡ ಹೆಸರುಗಳನ್ನು 'ಅಂಕಿತನಾಮ' ಎನ್ನುತ್ತೇವೆ. ಉದಾ: ಸಂಗೀತ, ರಾಜು ಇತ್ಯಾದಿ.

3) ಅನ್ವರ್ಥನಾಮ : ಗುಣ, ಸ್ವಭಾವ, ವೃತ್ತಿ ಇವುಗಳನ್ನು ಸೂಚಿಸುವ ಪದಗಳನ್ನು 'ಅನ್ವರ್ಥನಾಮ' ಎನ್ನುತ್ತೇವೆ. ಉದಾ: ಶಿಕ್ಷಕಿ, ವಿದ್ಯಾರ್ಥಿ ಇತ್ಯಾದಿ.

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 3
# ಆಲಿಸು ಪ್ರಶ್ನಿಸು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ತಮ್ಮ ಆಸು ಪಾಸಿನಲ್ಲಿ ಸಂಭವಿಸುವ ವಿವಿಧ ಘಟನೆಗಳ ಬಗ್ಗೆ ಗಮನ ಹರಿಸುತ್ತಾ, ಅವುಗಳ ಬಗ್ಗೆ ಮೌಖಿಕವಾಗಿ ಪ್ರತಿಕ್ರಿಯೆ ನೀಡುವರು ಹಾಗೂ ಪ್ರಶ್ನಿಸುವರು.

**ಚಟುವಟಿಕೆ 1 :** ನೀಡಲಾಗಿರುವ ಚಿತ್ರವನ್ನು ಗಮನಿಸಿ, ಈ ಚಿತ್ರಗಳು ಯಾವುದರ ಕುರಿತಾಗಿದೆ ಎಂಬುದನ್ನು ಮಾದರಿಯಂತೆ ಬರೆದು, ಯಾವುದಾದರೊಂದು ವಿಷಯಕ್ಕೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸಿ ಬರೆಯಿರಿ.



ಸಹಬಾಳ್ವೆ











© KTBS NOT TO BE REPUBLISHED

**ಚಟುವಟಿಕೆ 2 :** ಕೆಳಗಿನ ಅಕ್ಷರ ಕೋಷ್ಟಕದಲ್ಲಿ ಅನುಕ್ರಮವಾಗಿರುವ ವರ್ಗೀಯ ಮತ್ತು ಅವರ್ಗೀಯ ವ್ಯಂಜನಗಳ ಒತ್ತಕ್ಷರಗಳಿಗೆ ಬಣ್ಣ ತುಂಬಿರಿ.

'ಕ' ವರ್ಗ – ಹಳದಿ ಬಣ್ಣ

'ಚ' ವರ್ಗ – ಕೇಸರಿ ಬಣ್ಣ

'ಟ' ವರ್ಗ – ಗಿಳಿ ಹಸಿರು

'ತ' ವರ್ಗ – ತಿಳಿ ನೀಲಿ

'ಪ' ವರ್ಗ – ಹಸಿರು

ಅವರ್ಗೀಯ ವ್ಯಂಜನಗಳು – ಬೂದು ಬಣ್ಣ

| | | | | | | | | | |
|---|---|---|---|---|---|---|---|---|---|
| ಕ್ಕ | ಮ್ಮ | ಯ್ಯ | ಊ | ಋ | ಇ | ಕ್ಕ | ಚ್ಚ | ಣ್ಣ | ಬ್ಬ |
| ಖ್ಖ | ಝ್ಝ | ರ್ರ | ಎ | ಒ | ಅಃ | ಗ್ಗ | ಪ್ಪ | ಓ | ಟ್ಟ |
| ಗ್ಗ | ನ್ನ | ಲ್ಲ | ಚ್ಚ | ಛ್ಛ | ಜ್ಜ | ಝ್ಝ | ಞ್ಞ | ಐ | ತ್ತ |
| ಫ್ಫ | ಗ್ಗ | ವ್ವ | ಜ್ಜ | ಙ | ಟ್ಟ | ಢ್ಢ | ಘ್ಘ | ಋ | ಡ್ಡ |
| ಜ್ಜ | ಅ | ಶ್ರ | ಷ್ಷ | ಸ್ಸ | ಹ್ಹ | ಳ್ಳ | ಒ | ಅ | ಢ್ಢ |
| ಎ | ಊ | ಆ | ಈ | ಆ | ಲ್ಲ | ಜ್ಜ | ಫ್ಫ | ಭ್ಭ | ಣ್ಣ |
| ಕ್ಕ | ತ್ತ | ಥ್ಥ | ದ್ದ | ಥ್ಥ | ನ್ನ | ಉ | ಹ್ಹ | ಳ್ಳ | ನ್ನ |
| ರ್ರ | ಇ | ಅಂ | ಞ್ಞ | ಪ್ಪ | ಫ್ಫ | ಬ್ಬ | ಭ್ಭ | ಮ್ಮ | ಅ |

@KTBS NOT TO BE REPUBLISHED

**ಚಟುವಟಿಕೆ 3 :** ಕೊಟ್ಟಿರುವ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.

**ಮಾದರಿ :** ಒಮ್ಮತ = ಒ, ಮ್+ಮ್+ಅ, ತ್+ಅ

1) ಭಯಾನಕ = ____________________

2) ಭೂರಮೆ = ____________________

3) ಮೋಹನ = ____________________

4) ಮಿಂಚಿನೋಲ್ = ____________________

5) ಕಾವೇರಿ = ____________________

## ಬೆಂಬಲಿತ ಕಲಿಕೆಯ ಹಂತ - ಚಟುವಟಿಕೆ ಹಾಳೆ 4
# ಧ್ವನಿ ಪ್ರತಿಧ್ವನಿ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿವಿಧ ಪ್ರಕಾರದ ಧ್ವನಿಗಳನ್ನು ಆಲಿಸಿದ ಅನುಭವಗಳನ್ನು (ಉದಾಹರಣೆಗೆ: ಅಲ್ಪಪ್ರಾಣ, ಮಹಾಪ್ರಾಣಾಕ್ಷರಗಳು) ತಮ್ಮದೆ ರೀತಿಯಲ್ಲಿ ಬರೆವಣಿಗೆಯಲ್ಲಿ ಅಭಿವ್ಯಕ್ತಿಗೊಳಿಸುವರು.

**ಚಟುವಟಿಕೆ 1 :** ಮಾದರಿಯಂತೆ ಚಿತ್ರಗಳಿಗೆ ಸರಿಹೊಂದುವ ಪದಬರೆಯಿರಿ. ಪ್ರತೀ ಪದದ ಮೊದಲ ಅಕ್ಷರ ಗಮನಿಸಿ ಓದಿರಿ.



ಬಾನು



ಭಾನು

















@KTBS NOT TO BE REPUBLISHED

**ಚಟುವಟಿಕೆ 2 :** ಕೆಳಗಿನ ನಾಲಿಗೆಸುರುಳಿ ವಾಕ್ಯಗಳನ್ನು ವೇಗವಾಗಿ ಹೇಳಿ ಧ್ವನಿ ವ್ಯತ್ಯಾಸವಾಗುವುದನ್ನು ಗಮನಿಸಿ.

1) ಕಿಟ್ಟಿ ಕತ್ತೆ ಕತ್ತಲಲ್ಲಿ ಕಟ್ಟೆಗೆ ಕಟ್ಟಿಕೊಂಡು ಕುಳಿತಿತ್ತು.

2) ಕಪ್ಪೆ ಕುಕ್ಕು ಕುಕ್ಕಿ ಕಕ್ಕಿ ಕಿಕ್ಕಿರಿಸಿತು.

3) ಅರಳಿಮರ ತಳಿರೊಡೆದೆರೆಡೆಲೆಯಾಯಿತು.

4) ಸಂತಸದಲ್ಲಿ ಸಂತೋಷ ಸಂಚರಿಸುತ್ತ ಸುತ್ತಲೂ ಸಂಚಲನ ತಂದ.

**ಹೀಗೊಂದು ಕಲಿಕೆ !**

ಅಲ್ಪಪ್ರಾಣ ಅಕ್ಷರಗಳು : ಕ, ಗ, ಚ, ಜ, ಟ, ಡ, ತ, ದ, ಪ, ಬ

ಮಹಾಪ್ರಾಣ ಅಕ್ಷರಗಳು : ಖ, ಘ, ಛ, ಝ, ಠ, ಢ, ಥ, ಧ, ಫ, ಭ

ಅನುನಾಸಿಕ ಅಕ್ಷರಗಳು : ಙ, ಞ, ಣ, ನ, ಮ

**ಚಟುವಟಿಕೆ 3 :** ಸೂಕ್ತವಾದ ಪದವನ್ನು ಆರಿಸಿ ಬರೆದು ಬಿಟ್ಟಸ್ಥಳ ತುಂಬಿರಿ.

| |
|---|
| ನಮ್ಮ, ಅದು, ಅವಳು, ಅವರು, ಅವನು, ಅಲ್ಲಿಂದ, ಅವರಿಂದ, ಇವನು, ನಾನು, ಅವನ, ನಾವು |

1) ಸಂಗೀತ ಏಳನೆಯ ತರಗತಿಯ ಬಾಲಕಿ. ________ ತುಂಬಾ ಇಂಪಾಗಿ ಹಾಡುತ್ತಾಳೆ.

2) ಅಮ್ಮ ಪೇಟೆಗೆ ಹೋಗಿದ್ದರು. ____________ ಹೊಸ ಬಟ್ಟೆ ತಂದರು.

3) ಸುಮ ಒಂದು ಬೆಕ್ಕನ್ನು ಸಾಕಿದ್ದಾಳೆ. __________ ಅವಳನ್ನು ಒಂದು ಕ್ಷಣವೂ ಬಿಡುವುದಿಲ್ಲ.

4) ರಮೇಶ ಊರಿಗೆ ಹೋಗಿದ್ದ. ___________ ಜೊತೆಯಲ್ಲಿ ಅಜ್ಜಿಯನ್ನು ಕರೆದುಕೊಂಡು ಬಂದನು.

5) ನಮ್ಮ ಶಾಲೆಯ ಬಳಿ ಒಂದು ಮರವಿದೆ. ____________ ಎಲ್ಲರಿಗೂ ನೆರಳನ್ನು ನೀಡುತ್ತದೆ.

6) ನನ್ನ ತಮ್ಮನ ಹೆಸರು ಪ್ರವೀಣ. ____________ ನನ್ನ ನೆಚ್ಚಿನ ಸಹೋದರ.

7) ___________ ನಾಳೆ ಬೆಂಗಳೂರಿಗೆ ಹೋಗಬೇಕು.

8) ಮೋಹನನಿಗೆ ____________ ಅಕ್ಕ ಒಂದು ಪುಸ್ತಕವನ್ನು ಕೊಟ್ಟಳು.

9) ___________ ಕೆಲಸಗಳನ್ನು ನಾವೇ ಮಾಡಿಕೊಳ್ಳಬೇಕು.

10) ಕಷ್ಟ ಬಂದಾಗ _____________ ಇತರರಿಗೆ ಸಹಾಯ ಮಾಡಬೇಕು.

**ಹೀಗೊಂದು ಕಲಿಕೆ !**

**ಸರ್ವನಾಮ**

"ನಾಮಪದಗಳ ಸ್ಥಾನದಲ್ಲಿ ಬದಲಿಸಿ ಬಳಸುವ ಪದಗಳನ್ನು ಸರ್ವನಾಮ ಎನ್ನುತ್ತೇವೆ."

ಉದಾ : ನಾನು, ನೀನು, ಅವನು, ಅವರು, ಅದು, ಇದು, ಅವು, ಅವಳು, ಇವಳು, ಇವನು

@KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ - ಚಟುವಟಿಕೆ ಹಾಳೆ 5
## ಚಿತ್ರಕಥೆ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಕಥೆ, ಕವಿತೆಗಳನ್ನು ತನ್ನದೆ ರೀತಿಯಲ್ಲಿ ಮತ್ತು ರಾಗದಲ್ಲಿ ಹಾಡುತ್ತಾ ಅದರೊಂದಿಗೆ ಸ್ವಂತದ ಕಥೆ, ವಿಷಯಗಳನ್ನು ಜೋಡಿಸುವರು.

**ಚಟುವಟಿಕೆ 1 :** ಕೊಟ್ಟಿರುವ ಪದ್ಯವನ್ನು ಶಿಕ್ಷಕರ ಸಹಾಯದಿಂದ ರಾಗವಾಗಿ ಹಾಡಿರಿ. ಈ ಪದ್ಯದಲ್ಲಿರುವ ಪ್ರಾಸಪದಗಳನ್ನು ಕೊಟ್ಟಿರುವ ಸ್ಥಳದಲ್ಲಿ ಮಾದರಿಯಂತೆ ಬರೆಯಿರಿ.

ಬಾರಲೆ ಹಕ್ಕಿ ಬಣ್ಣದ ಹಕ್ಕಿ
ಬಾರಲೆ ಹಕ್ಕಿ ಹಾರುವ ಹಕ್ಕಿ

ಗೆಳೆಯರು ಆಡಲು ಯಾರೂ ಇಲ್ಲ
ಕಳೆಯುವುದೆಂತು ವೇಳೆಯನೆಲ್ಲ
ಬಾ ಬಾ ನನಗೂ ಹಾಡಲು ಕಲಿಸು
ಬಾ ಬಾ ನನಗೂ ಹಾರಲು ಕಲಿಸು

ಅವ್ವನು ನೀರಿಗೆ ಹೋಗಿಹಳು
ಅಪ್ಪನು ಪೇಟೆಗೆ ಹೋಗಿಹನು
ಅವ್ವನು ಬರಲಿ ಅಪ್ಪನು ಬರಲಿ
ತಿನ್ನಲು ಹಣ್ಣನು ಕೊಡಿಸುವೆನು

ನನಗೂ ಎರಡು ರೆಕ್ಕೆಯ ಹಚ್ಚು
ಹಿಂಗಡೆ ಬಣ್ಣದ ಪುಚ್ಛವ ಚುಚ್ಚು
ನೆತ್ತಿಯ ಮೇಲೆ ಜುಟ್ಟನು ಹಚ್ಚು
ಮೆಲ್ಲನೆ ಮೇಲೆ ಹಾರಲು ಹಚ್ಚು

ನಾನು ನೀನೂ ಇಬ್ಬರು ಕೂಡಿ
ಮುಗಿಲಿನ ಕಡೆಗೆ ಹಾರುವ ಬಾ
ಅಲ್ಲಿಂದಿತ್ತ ಇಲ್ಲಿಂದತ್ತ
ಹಾರುತ ಹಾಡುತ ನಲಿಯುವ ಬಾ.

ರಚನೆ : ಸಿ.ಫ.ಕಟ್ಟೀಮನಿ



@KTBS NOT TO BE REPUBLISHED

**ಮಾದರಿ : ಹಾಡಲು–ಹಾರಲು**

**ಚಟುವಟಿಕೆ 2 :** ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು ಅಲ್ಲಿರುವ ಏಕವಚನ ಮತ್ತು ಬಹುವಚನದಿಂದ ಕೂಡಿರುವ ಪದಗಳನ್ನು ಮಾದರಿಯಂತೆ ಪಟ್ಟಿಮಾಡಿ ಬರೆಯಿರಿ.

### ಸ್ವಾತಂತ್ರ್ಯದ ಕನಸು

1930ರ ದಶಕ. ಶಿವಮೊಗ್ಗದ ಹಳ್ಳಿಯೊಂದರಲ್ಲಿ ಪುಟ್ಟಣ್ಣ ಎಂಬ **ಹುಡುಗ** ತನ್ನ ಅಜ್ಜನ ಜೊತೆ ಊರಿನ ಮಂದಿರದಲ್ಲಿ ಗಾಂಧೀಜಿಯವರ ಭಾಷಣ ಕೇಳುತ್ತಿದ್ದ. ಗಾಂಧೀಜಿ ಹೇಳಿದರು: "ಸ್ವಾತಂತ್ರ್ಯ ನಮ್ಮ ಹಕ್ಕು. ನಾವು ಅದನ್ನು ಪಡೆದೇ ತೀರುತ್ತೇವೆ."

ಆ ಮಾತು ಪುಟ್ಟಣ್ಣನ ಹೃದಯದಲ್ಲಿ ಗಂಭೀರವಾಗಿ ಹೊಕ್ಕಿತು. ಅವನು ದಿನದಿಂದ ದಿನಕ್ಕೆ ದೇಶಭಕ್ತಿಯಲ್ಲಿ ತಲ್ಲೀನನಾದ. ಶಾಲೆಯಲ್ಲೇ ಇತರ **ಮಕ್ಕಳಿ**ಗೆ ಗಾಂಧೀಜಿ, ನೇತಾಜಿ, ಭಗತ್‌ಸಿಂಗ್ ಕುರಿತಾಗಿ ಹೇಳುತ್ತಿದ್ದ. ಸಣ್ಣವನಾದರೂ, ಅವನ ಹೃದಯದಲ್ಲಿ ದೊಡ್ಡ ಹೋರಾಟಗಾರ ಬೆಳೆದುಬರುತ್ತಿದ್ದ.

ಒಂದು ದಿನ ಊರಿನಲ್ಲಿ ಬ್ರಿಟಿಷ್ ಅಧಿಕಾರಿಗಳು ಬಂದು ಸ್ವದೇಶಿ ವ್ಯಾಪಾರಿಗಳ ಅಂಗಡಿಗಳನ್ನುಮುಚ್ಚಿಸುತ್ತಿದ್ದರು. ಪುಟ್ಟಣ್ಣ ನೋಡಿದನು – ಅವರು ಊರಿನ ಖಾದಿ ಅಂಗಡಿಯನ್ನುಮುಚ್ಚಲುಹೊರಟಿದ್ದರು. ಅವನು ತಕ್ಷಣ ತನ್ನಸ್ನೇಹಿತರ ಜೊತೆ ಅಂಗಡಿಯಮುಂದೆ ಕುಳಿತು ಧರಣಿಮಾಡಿದ್ದನು. ಅವರೆಲ್ಲರೂ ಘೋಷಣೆ ಕೂಗಿದರು–"ಖಾದಿನಮ್ಮಹೆಮ್ಮೆ, ಭಾರತನಮ್ಮಮನೆ!"

ಬ್ರಿಟಿಷ್ ಪೋಲಿಸರು ಅವನನ್ನು ಧಿಕ್ಕರಿಸಿ, ಬೆದರಿಸಿದರು. ಆದರೆ ಪುಟ್ಟಣ್ಣ ಹೆದರುವವನಲ್ಲ. ಅವನು ಗಾಂಧೀಜಿಯ "ಅಹಿಂಸಾ" ಮಾರ್ಗವನ್ನು ಅನುಸರಿಸಿ, ಶಾಂತಿಯುತವಾಗಿ ತನ್ನ ಧೈರ್ಯವನ್ನು ತೋರಿದ.

ಇದು ಊರಿಗೇ ಸ್ಫೂರ್ತಿಯಾಯ್ತು. ಹಲವರು ಸ್ವದೇಶಿ ಚಳವಳಿಯಲ್ಲಿ ಭಾಗವಹಿಸಿದರು. ಬಟ್ಟೆ ಅಂಗಡಿಗಳು ಬ್ರಿಟಿಷ್ ವಸ್ತುಗಳನ್ನು ತಿರಸ್ಕರಿಸಿ ಖಾದಿಗೆ ಬದಲಾಯಿಸಿದರು. ಪುಟ್ಟಣ್ಣನ ಧೈರ್ಯ ಊರಿಗೆ ಬೆಳಕು ತೋರಿತು.
1947ರ ಆಗಸ್ಟ್ 15ರಂದು, ಸ್ವಾತಂತ್ರ್ಯದ ಬೆಳಕು ಬೆಳಗಿದಾಗ, ಪುಟ್ಟಣ್ಣನವರ ಕಣ್ಣುಗಳಲ್ಲಿ ನೀರು, ಹೃದಯದಲ್ಲಿ ತೃಪ್ತಿ –"ನಾವು ಗೆದ್ದೆವು," ಎನ್ನುತ್ತಿದ್ದರು.

| | ಏಕವಚನ ಪದಗಳು | ಬಹುವಚನ ಪದಗಳು |
|---|---|---|
| ಮಾದರಿ: | ಹುಡುಗ | ಮಕ್ಕಳು |
| | ____________ | ____________ |
| | ____________ | ____________ |
| | ____________ | ____________ |
| | ____________ | ____________ |
| | ____________ | ____________ |

@KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 6

# ಮಾತು ಮಾಣಿಕ್ಯ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಆಲಿಸಿದ ಅಥವಾ ನೋಡಿದ ಘಟನೆಗಳ ಬಗೆಗೆ (ಉದಾಹರಣೆಗೆ: ಸ್ಥಳೀಯ ಸಾಮಾಜಿಕ ಘಟನೆಗಳು, ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು) ಸಂಕೋಚವಿಲ್ಲದೆ ಮಾತನಾಡುವರು ಮತ್ತು ಪ್ರಶ್ನೆಮಾಡುವರು.

**ಚಟುವಟಿಕೆ 1 :** ಸುದ್ದಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ಪರಿಸರಕ್ಕೆ ಸಂಬಂಧಿಸಿದ ಚಿತ್ರವನ್ನು ಸಂಗ್ರಹಿಸಿ, ಕೊಟ್ಟಿರುವ ಸ್ಥಳದಲ್ಲಿ ಅಂಟಿಸಿ. ಚಿತ್ರಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಿ ಬರೆಯಿರಿ.

@KTBS
NOT TO BE REPUBLISHED

**ಚಟುವಟಿಕೆ 2 :** ಪರಿಸರಕ್ಕೆ ಸಂಬಂಧಿಸಿದ ಈ ಕವನವನ್ನು ಹಾಡಿರಿ ಮತ್ತು ಪರಿಸರ ನಾಶವಾಗುತ್ತಿರುವುದಕ್ಕೆ ಕಾರಣವಾದ ಅಂಶಗಳನ್ನು ಬರೆಯಿರಿ.

ಪ್ರಕೃತಿ ಪೋಷಣೆ



ಹಳ್ಳಿಯ ದಾರಿಯ ಬದಿಯಲಿ ಒಂದು
ಮಾವಿನ ಮರವಿತ್ತು
ಹಲವು ಕೊಂಬೆಗಳನು ಚಾಚಿ
ತಣ್ಣೆಳಲನು ಹರಡಿತ್ತು
ಹಕ್ಕಿ ಪಕ್ಷಿಗಳು ಗೂಡನು ಕಟ್ಟಿದೆ
ಮರಿಗಳ ಚಿಲಿಪಿಲಿ ಹಾಡಿತ್ತು
ಎಲೆಗಳ ಜೊತೆಗೆ ಕಾಯ ತೂಗಿ
ಬಾಯಲಿ ನೀರನು ತಂದಿತ್ತು
ಮಾವಿನ ಮರದಡಿ ಕಮ್ಮಿನ ಪರಿಮಳ
ಜನರ ಮನವನು ಸೆಳೆದಿತ್ತು
ಮರವೊಂದಾದರು ಉಪಕಾರವು ನೂರು
ಹಿರಿಮೆಯ ತೋರಿತ್ತು
ಶುದ್ಧ ಗಾಳಿ ಮಳೆ ನಂದನವೇ ಇಳೆ
ಹೂ ಹಸಿರಿನ ತಾಕತ್ತು
ಹಸಿರಿದ್ದರೆ ಉಸಿರು ನಿಲ್ಲುವುದು
ತಿಳಿದುಕೋ ಈ ಹೊತ್ತು.

– ಬಾಗೂರು ಮಾರ್ಕಾಂಡೇಯ

©KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 7
## ಮಾತು ಪ್ರತಿಮಾತು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಆಲಿಸಿದ ಅಥವಾ ನೋಡಿದ ಘಟನೆಗಳ ಬಗೆಗೆ (ಉದಾಹರಣೆಗೆ: ಸ್ಥಳೀಯ ಸಾಮಾಜಿಕ ಘಟನೆಗಳು, ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು) ಸಂಕೋಚವಿಲ್ಲದೆ ಮಾತನಾಡುವರು ಮತ್ತು ಪ್ರಶ್ನೆಮಾಡುವರು.

**ಚಟುವಟಿಕೆ 1 :** ವಿಭಕ್ತಿ ಪ್ರತ್ಯಯಗಳು – ಅಡಿಗೆರೆ ಎಳೆದಿರುವ ಪದದಲ್ಲಿರುವ ವಿಭಕ್ತಿ ಮತ್ತು ಪ್ರತ್ಯಯವನ್ನು ಮಾದರಿಯಂತೆ ಬರೆಯಿರಿ.

| ಕ್ರ.ಸಂ | ವಾಕ್ಯ | ಪ್ರತ್ಯಯ | ವಿಭಕ್ತಿ |
|---|---|---|---|
| 01. | **ಪಕ್ಷಿಯು** ಗೂಡನ್ನು ಕಟ್ಟಿತು. | ಉ | ಪ್ರಥಮ |
| 02. | **ಪಕ್ಷಿಯನ್ನು** ಆಕಾಶದಲ್ಲಿ ಹಾರಲು ಬಿಡಬೇಕು. | | |
| 03. | **ಪಕ್ಷಿಯಿಂದ** ಹಲವು ಉಪಯೋಗಗಳಿವೆ. | | |
| 04. | **ಪಕ್ಷಿಗೆ** ಕಾಳುಗಳು, ಸಣ್ಣ ಹುಳುಗಳೇ ಆಹಾರ. | | |
| 05. | **ಪಕ್ಷಿಯದೆಸೆಯಿಂದ**ಹೊಲದಲ್ಲಿ ಹುಳಗಳಿಲ್ಲ. | | |
| 06. | **ಪಕ್ಷಿಯ** ಪುಚ್ಛದ ಬಣ್ಣಗಳು ಹಲವಾರು. | | |
| 07. | **ಪಕ್ಷಿಯಲ್ಲಿ** ಹಾರಾಡುವ ಶಕ್ತಿಯಿದೆ. | | |

**ಚಟುವಟಿಕೆ 2 :** ಮೇಲಿನಂತೆ ರಾಜ, ಶಾಲೆ, ಶಿಲ್ಪ ಈ ಪದಗಳಿಗೆ ಏಳು ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿ ಮಾದರಿಯಂತೆ ಬರೆಯಿರಿ.

| ಕ್ರ.ಸಂ | ರಾಜ | ಶಾಲೆ | ಶಿಲ್ಪ |
|---|---|---|---|
| 01. | ರಾಜನು | ಶಾಲೆಯು | ಶಿಲ್ಪವು |
| 02. | | | |
| 03. | | | |
| 04. | | | |
| 05. | | | |
| 06. | | | |
| 07. | | | |

NOT TO BE REPUBLISHED @KTBS

**ಚಟುವಟಿಕೆ 3 :** ಕೊಟ್ಟಿರುವ ಕಥಾಭಾಗದಲ್ಲಿ ಬಳಸಿರುವ ವಿಭಕ್ತಿ ಪ್ರತ್ಯಯದಿಂದ ಕೂಡಿರುವ ಪದಗಳನ್ನು ಆರಿಸಿ ಬರೆದುಕೊಂಡು ವಿಭಕ್ತಿ ಪ್ರತ್ಯಯಗಳನ್ನು ಬಿಡಿಸಿ ಬರೆಯಿರಿ.

## ಧೀರ ಮಹಿಳೆ ನೀರಜಾ ಭಾನೋಟ್




ನಿರ್ಜಾ ಭಾನೋಟ್ ಧೈರ್ಯ, ಕರ್ತವ್ಯನಿಷ್ಠೆ ಮತ್ತು ಮಾನವೀಯತೆಯ ಅಮೂಲ್ಯ ಉದಾಹರಣೆ. 1963ರಲ್ಲಿ ಪಂಜಾಬಿನ ಚಂಡೀಗಡದಲ್ಲಿ ಹುಟ್ಟಿದ ನಿರ್ಜಾ, ನಂತರ ಪ್ಯಾನ್ ಅಮೆರಿಕನ್ ವಿಮಾನಸೇವೆಗೆ ಸೇರಿ ವಿಮಾನಸೇವಕಿ (ಫ್ಲೈಟ್ ಪರ್ಸರ್) ಆಗಿ ಕೆಲಸ ಮಾಡಿದಳು. ಅವಳ ಬದುಕಿನ ಅತ್ಯಂತ ಮಹತ್ವದ ಘಟನೆಯಾದದ್ದು, 1986ರ ಸೆಪ್ಟೆಂಬರ್ 5 ರಂದು ಸಂಭವಿಸಿದ ಪ್ಯಾನ್ ಆಮ್ ಫ್ಲೈಟ್ 73 ವಿಮಾನ ಅಪಹರಣ.
ಕರಾಚಿಯ ವಿಮಾನ ನಿಲ್ದಾಣದಲ್ಲಿ ಉಗ್ರರು ವಿಮಾನವನ್ನು ವಶಪಡಿಸಿಕೊಂಡಾಗ, ನಿರ್ಜಾ ವಿಮಾನದಲ್ಲಿನ ಮುಖ್ಯ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಬುದ್ಧಿವಂತಿಕೆ ಮತ್ತು ಧೈರ್ಯದೊಂದಿಗೆ, ಅವರು ತುರ್ತು ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಿ, ಪ್ರಯಾಣಿಕರನ್ನು ರಕ್ಷಿಸಲು ಕ್ರಮಕೈಗೊಂಡರು. ಅವರು ಉಗ್ರರ ಬೆದರಿಕೆಗೆ ತಲೆಬಾಗದೆ, ಮಕ್ಕಳು ಹಾಗೂ ಮಹಿಳೆಯರನ್ನು ಮೊದಲಿಗೆ ಸುರಕ್ಷಿತವಾಗಿ ವಿಮಾನದಿಂದ ಹೊರಹೋಗಲು ಸಹಾಯ ಮಾಡಿದರು. ಕೊನೆಗೂ ಗುರಿಯಿಟ್ಟ ಉಗ್ರರು ಅವರನ್ನು ಗುಂಡಿಕ್ಕಿ ಕೊಂದರು. ಆದರೆ ಅವರ ಧೈರ್ಯವು ನೂರಾರು ಜೀವಗಳನ್ನು ಉಳಿಸಿತು.
ಅವರ ಈ ಅತ್ಯುತ್ತಮ ಬಲಿದಾನಕ್ಕಾಗಿ ಭಾರತ ಸರ್ಕಾರ ನಿರ್ಜಾ ಭಾನೋಟ್‌ರವರಿಗೆ ಮರಣೋತ್ತರವಾಗಿ "ಅಶೋಕ ಚಕ್ರ" ಪ್ರಶಸ್ತಿ ನೀಡಿ ಗೌರವಿಸಿತು. ನಿರ್ಜಾ, ಅಶೋಕ ಚಕ್ರ ಪಡೆದ ಅತ್ಯಂತ ಯುವಪ್ರಾಯದ ವ್ಯಕ್ತಿ ಕೂಡ ಆಗಿದ್ದಾರೆ. ಇದರ ಜೊತೆಗೆ, ಅನೇಕ ಅಂತರರಾಷ್ಟ್ರೀಯ ಗೌರವಗಳೂ ಅವರಿಗೆ ಲಭಿಸಿವೆ. ಅವರ ಜೀವನವನ್ನು ಆಧರಿಸಿ "ನಿರ್ಜಾ" ಎಂಬ ಹೃದಯಸ್ಪರ್ಶಿ ಚಲನಚಿತ್ರವನ್ನೂ ನಿರ್ಮಿಸಲಾಗಿದೆ.
ನಿರ್ಜಾ ಭಾನೋಟ್‌ರವರ ಜೀವನ ನಮ್ಮೆಲ್ಲರಿಗೂ ಧೈರ್ಯ, ಮಾನವೀಯತೆ ಮತ್ತು ಕರ್ತವ್ಯದ ಪಾಠ ಕಲಿಸುತ್ತದೆ. ಅವರ ತ್ಯಾಗ ಮತ್ತು ಸಾಹಸಗಳನ್ನು ಸದಾ ಸ್ಮರಿಸಬೇಕಾಗಿದೆ.

**ಮಾದರಿ :** ಚಂಡೀಗಡದಲ್ಲಿ = ಚಂಡೀಗಡದ + ಅಲ್ಲಿ = ಸಪ್ತಮಿ ವಿಭಕ್ತಿ ಪ್ರತ್ಯಯ.

©KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ - ಚಟುವಟಿಕೆ ಹಾಳೆ 8
# ಜನಪದ ಜಗಲಿ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ತಮ್ಮ ಪರಿಸರದಲ್ಲಿರುವ ವಿವಿಧ ಜನಪದ ಕಥೆ ಮತ್ತು ಗೀತೆಗಳಬಗೆಗೆ ತಿಳಿದುಕೊಳ್ಳುತ್ತ ಚರ್ಚಿಸುವರು.

**ಚಟುವಟಿಕೆ 1 :** ಕೊಟ್ಟಿರುವ ಜನಪದ ಗೀತೆಯನ್ನು ಗುಂಪಿನಲ್ಲಿ ರಾಗವಾಗಿ ಹಾಡಿರಿ ಮತ್ತು ಈ ಹಾಡಿನ ಮಹತ್ವವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಯಾಕಳುವೆ ಎಲೆರಂಗ ಬೇಕಾದ್ದು ನಿನಗೀವೆ
ನಾಕೆಮ್ಮೆ ಕರೆದ ನೊರೆ ಹಾಲು। ಸಕ್ಕರೆ
ನೀ ಕೇಳಿದಾಗ ಕೊಡುವೇನು॥

ಯಾತಕಳುತಾನೆಂದು ಎಲ್ಲಾರು ಕೇಳ್ಯಾರು
ಕಾಯದ ಹಾಲ ಕೆನೆ ಬೇಡಿ। ಕಂದಯ್ಯ
ಕಾಡಿ ಕೈಬಿಟ್ಟು ಇಳಿದಾನ॥

ಅತ್ತರೆ ಅಳಲವ್ವ ಈ ಕೂಸು ನನಗಿರಲಿ
ಕೆಟ್ಟರೆ ಕೆಡಲಿ ಮನೆಗೆಲಸ। ಕಂದನಂತ
ಮಕ್ಕಳಿರಲವ್ವ ಮನೆತುಂಬ॥

ಅತ್ತು ಕಾಡುವನಲ್ಲ ಮತ್ತೆ ಬೇಡುವನಲ್ಲ
ಎತ್ತಿಕೊಳ್ಳೆಂಬ ಹಟವಿಲ್ಲ। ನಿನ್ನಂತ
ಹತ್ತು ಮಕ್ಕಳೂ ಇರಬಹುದು॥

ಆಡಿ ಬಾ ಎನ್ನ ಕಂದ ಅಂಗಾಲ ತೊಳೆದೇನ
ತೆಂಗಿನ ಕಾಯಿ ತಿಳಿನೀರ। ತಕ್ಕೊಂಡು
ಬಂಣಾರದ ಮೊರೆ ತೊಳೆದೇನ॥



@KTBS NOT TO BE REPUBLISHED

**ಚಟುವಟಿಕೆ 2 :** ನಿಮ್ಮ ಶಾಲೆಯ ಗ್ರಂಥಾಲಯಕ್ಕೆ ಕುವೆಂಪುರವರ ಕಾದಂಬರಿಗಳನ್ನು ಕಳುಹಿಸಿಕೊಡುವಂತೆ ಕೋರಿ ಪುಸ್ತಕ ಭಂಡಾರಕ್ಕೆ ಪತ್ರ ಬರೆಯಿರಿ.

**ಮಾದರಿ ವ್ಯಾವಹಾರಿಕ ಪತ್ರ**

ದಿನಾಂಕ : 10–04–2025
ಸ್ಥಳ : ಮೈಸೂರು

ಇಂದ,
**ಶ್ರೇಯಸ್**
5ನೇ ತರಗತಿ
ಸ.ಕಿ.ಪ್ರಾ.ಶಾಲೆ, ಕಾರಾಪುರ
ಹೆಚ್.ಡಿ.ಕೋಟೆ ತಾ,
ಮೈಸೂರು.

ಗೆ,
**ಮುಖ್ಯಸ್ಥರು**
ಕಲ್ಪನಾ ಪುಸ್ತಕ ಭಂಡಾರ,
ಶ್ರೀಕೃಷ್ಣನಗರ, ಮೈಸೂರು.

ಮಾನ್ಯರೆ,

ವಿಷಯ : ನಮ್ಮ ಶಾಲೆಯ ಗ್ರಂಥಾಲಯಕ್ಕೆ ಕುವೆಂಪುರವರ ಕಾದಂಬರಿಗಳನ್ನುಕಳುಹಿಸಿಕೊಡುವ ಬಗ್ಗೆ.

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಶಾಲೆಗೆ ಕುವೆಂಪುರವರ ಕಾನೂರು ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು ಇವೆರಡು ಕಾದಂಬರಿಗಳ ಒಂದೊಂದು ಪ್ರತಿಗಳನ್ನು ನಮ್ಮ ಶಾಲಾ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ. ಇವೆರಡೂ ಕಾದಂಬರಿಗಳ ಬೆಲೆಗೆ ಬ್ಯಾಂಕ್ ಡಿ.ಡಿ ಪಡೆದಿದ್ದು ಅದನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸುತ್ತಿದ್ದೇನೆ.

ಧನ್ಯವಾದಗಳೊಂದಿಗೆ,

ಇಂತಿ,

ಶ್ರೇಯಸ್

©KTBS NOT TO BE REPUBLISHED

**ಹೀಗೊಂದು ಕಲಿಕೆ !**

**ಪತ್ರಲೇಖನ :** ಇದು ಒಂದು ವಿಚಾರವನ್ನು ಒಬ್ಬರು, ಇನ್ನೊಬ್ಬರಿಗೆ ತಿಳಿಸಲು ಅಥವಾ ಯಾವುದಾದರೂ ಒಂದು ನಿರ್ದಿಷ್ಟ ವಿಷಯದ ಬಗ್ಗೆ ನಿವೇದಿಸುವ ಮನವಿ ಪತ್ರವಾಗಿರುತ್ತದೆ.

**ಪತ್ರಲೇಖನದ ವಿಧಗಳು :** ಪತ್ರಲೇಖನದಲ್ಲಿ ಪ್ರಮುಖವಾಗಿ ಎರಡು ವಿಧಗಳಿವೆ. ಒಂದು ವೈಯಕ್ತಿಕ ಪತ್ರ. ಈ ಪತ್ರವು ಒಬ್ಬರು ಮತ್ತೊಬ್ಬರಿಗೆ ತಮ್ಮ ಖಾಸಗಿ ವಿಚಾರಗಳನ್ನು ಕುರಿತು ಬರೆಯುವ ಪತ್ರವಾಗಿದೆ. ಆದರೆ, ಇಂದು ಮೊಬೈಲ್, ಕಂಪ್ಯೂಟರ್‌ಗಳ ಪ್ರಭಾವದಿಂದ ಈ ಮಾದರಿ ಪತ್ರವು ಕಡಿಮೆಯಾಗಿದೆ.

ಇನ್ನೊಂದು ವ್ಯಾವಹಾರಿಕ ಪತ್ರ. ಇಂದು ವಿಷಯವನ್ನು ಕುರಿತು ಮಾಡಿಕೊಂಡ ಮನವಿ, ಆಜ್ಞೆ, ಸುತ್ತೋಲೆ ಇವುಗಳನ್ನು ಒಳಗೊಂಡಿರುತ್ತದೆ. ಇಂದು ಈ ಪತ್ರದ ಮಾದರಿಯು ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ.

ಇಂದ,

________________

________________

________________

________________

ದಿನಾಂಕ : ________________

ಸ್ಥಳ : ________________

ಗೆ,

________________

________________

________________

ಮಾನ್ಯರೆ,

ವಿಷಯ : ________________________________________

________________________________________

________________________________________

________________________________________

________________________________________

________________________________________

________________________________________

________________

________________

________________

@KTBS
NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ - ಚಟುವಟಿಕೆ ಹಾಳೆ 9
# ಓಲೆ ಕರೆಯೋಲೆ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿವಿಧ ಉದ್ದೇಶಗಳಿಗಾಗಿ ಬರೆಯುತ್ತಿರುವ ಲೇಖನಗಳಲ್ಲಿ ಶಬ್ದಗಳ ಆಯ್ಕೆ, ವಾಕ್ಯ ರಚನೆ, ತಮ್ಮ ಲೇಖನದ ಸ್ವರೂಪಗಳನ್ನು (ಉದಾ: ಮಿತ್ರನಿಗೆ ಪತ್ರ ಬರೆಯುವುದು, ಪತ್ರಿಕಾ ಸಂಪಾದಕರಿಗೆ ಪತ್ರ ಬರೆಯುವುದು) ಆಧರಿಸಿ ನಿರ್ಣಯದೊಂದಿಗೆ ಬರೆಯುವರು.

**ಚಟುವಟಿಕೆ 1 :** ಮಾದರಿ ಪತ್ರ: ನಿಮ್ಮ ಶಾಲೆಯಿಂದ ಕೈಗೊಂಡ ಶಾಲಾ ಪ್ರವಾಸದ ಬಗ್ಗೆ ನಿಮ್ಮ ಗೆಳೆಯ/ಗೆಳತಿಗೆ ಪತ್ರ ಬರೆಯಿರಿ.

ವೈಯಕ್ತಿಯ ಪತ್ರದ ಮಾದರಿ

ಕ್ಷೇಮ

ಸುಮೇದ್
#362/1, 10ನೇ ಮುಖ್ಯ ರಸ್ತೆ
ಜೆ.ಸಿ.ನಗರ, ಮೈಸೂರು–11
ದಿನಾಂಕ : 29–07–2024

ನನ್ನ ನಲ್ಮೆಯ ಗೆಳೆಯ,

ನಾನು ಇಲ್ಲಿ ಕ್ಷೇಮವಾಗಿರುವೆ. ನೀನು ಕೂಡ ಕ್ಷೇಮವಾಗಿರುವೆ ಎಂದು ತಿಳಿದಿದ್ದೇನೆ. ನಿನ್ನ ಪತ್ರ ತಲುಪಿತು. ಓದಿಸಂತೋಷವಾಯಿತು. ಕಳೆದ ವಾರ ನಾವೆಲ್ಲ ವಿದ್ಯಾರ್ಥಿಗಳು ಪ್ರವಾಸ ಕೈಗೊಂಡಿದ್ದೆವು. ಐತಿಹಾಸಿಕ ಸ್ಥಳಗಳಾದ ಬಳ್ಳಾರಿಯ ಹಂಪೆ, ಚಿತ್ರದುರ್ಗದ ಕೋಟೆ ಪುರಾಣ ಪ್ರಸಿದ್ಧ ಸ್ಥಳಗಳಾದ ಸಿದ್ಧಗಂಗೆ, ಶಿವಗಂಗೆ ಇವುಗಳಿಗೆ ಭೇಟಿ ನೀಡಿ, ಇತಿಹಾಸದ ಶಿಲ್ಪ ಕಲೆಗಳ ಬಗ್ಗೆ ತಿಳಿದುಕೊಂಡೆವು. ಈ ಶೈಕ್ಷಣಿಕ ಪ್ರವಾಸ ನನಗೆತುಂಬಾ ಖುಷಿ ಕೊಟ್ಟಿತು ಮತ್ತು ಜ್ಞಾನವನ್ನು ಹೆಚ್ಚಿಸಿತು. ನಿನ್ನ ಶಾಲೆಯಲ್ಲೂ ಪ್ರವಾಸ ಕೈಗೊಂಡರೆ ತಪ್ಪದೆ ಹೋಗು ನಾನು ಇಲ್ಲಿಚೆನ್ನಾಗಿ ವ್ಯಾಸಂಗ ಮಾಡುತ್ತಿದ್ದೇನೆ. ನೀನು ನಿನ್ನ ಓದಿನ ಕಡೆ ಹೆಚ್ಚಿನ ಗಮನ ನೀಡು.

ನಿನ್ನ ನಲ್ಮೆಯ ಗೆಳೆಯ,
ಸುಮೇದ್

ಗೆ,
ಶ್ರೀಕೃಷ್ಣ
#35, ಕೌಸ್ತುಭ
7ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ,
ಶ್ರೀನಿವಾಸಪುರ
ಕೋಲಾರ–12

© KTBS NOT TO BE REPUBLISHED

**ಚಟುವಟಿಕೆ 2 :** ನಿಮ್ಮ ಶಾಲೆಯಿಂದ ಕೈಗೊಂಡಿದ್ದ ಶೈಕ್ಷಣಿಕ ಪ್ರವಾಸದ ಅನುಭವಗಳನ್ನು ಕುರಿತು ನಿಮ್ಮ ಗೆಳೆಯ/ಗೆಳತಿಗೆ ಒಂದು ಪತ್ರ ಬರೆಯಿರಿ.

@KTBS
NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 10
## ನಿರೂಪಣೆ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಬೇರೆ ಬೇರೆ ಸಂದರ್ಭಗಳಲ್ಲಿ (ಸೂಚನಾ ಫಲಕದಲ್ಲಿ ಹಾಕಿರುವ ಸೂಚನೆ, ಕಾರ್ಯಕ್ರಮಗಳ ಪಟ್ಟಿ ಜ್ಞಾನ ಪಡೆದುಕೊಳ್ಳಲು) ಕಾರ್ಯಕ್ರಮಗಳ ನಿರೂಪಣೆ ಮಾಡುವ ಕೌಶಲ ಬೆಳೆಸಿಕೊಳ್ಳುವರು.

**ಚಟುವಟಿಕೆ 1 :** ನಿಮ್ಮ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಸಮಾರಂಭದ ದಿನ ಕೈಗೊಳ್ಳಬಹುದಾದ ಸ್ವಾಗತ ಮತ್ತು ವಂದನಾರ್ಪಣೆ ಟಿಪ್ಪಣಿ ಮಾದರಿಯನ್ನು ಬರೆಯಿರಿ.

**ಸ್ವಾಗತ :**

**ವಂದನಾರ್ಪಣೆ :**

@KTBS NOT TO BE REPUBLISHED

**ಹೀಗೊಂದು ಕಲಿಕೆ !**

ಸಾಮಾನ್ಯವಾಗಿ ಶಾಲೆಗಳಲ್ಲಿ ಕೈಗೊಳ್ಳುವ ಕಾರ್ಯಕ್ರಮಗಳ ಸಿದ್ಧತಾ ಪಟ್ಟಿ ಹೀಗಿರುತ್ತದೆ.

ಪ್ರಾರ್ಥನೆ, ಸ್ವಾಗತ, ಕಾರ್ಯಕ್ರಮ ಉದ್ಘಾಟನೆ, ದಿನದ ಮಹತ್ವ ಕುರಿತು ಭಾಷಣ, ಸಾಂಸ್ಕೃತಿಕ ಕಾರ್ಯಕ್ರಮಗಳು, ಮುಖ್ಯ ಅತಿಥಿಗಳ ಭಾಷಣ, ಇನ್ನಿತರ ನಿರ್ದಿಷ್ಟ ಕಾರ್ಯಕ್ರಮಗಳು, ಅಧ್ಯಕ್ಷರ ಭಾಷಣ, ವಂದನಾರ್ಪಣೆ.

**ಚಟುವಟಿಕೆ 2 :** ವಿಶೇಷಣಗಳು – ಕೊಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.

- ಒಂದು ಊರಿನಲ್ಲಿ ಶಂಕರ ಎಂಬ ಚಿಕ್ಕ ಹುಡುಗನಿದ್ದನು.
- ಬಿಳಿ ಆನೆಗಳು ಬರ್ಮಾ ದೇಶದಲ್ಲಿ ಕಾಣಬಹುದು.
- ಹಳೇ ಎತ್ತಿಗೆ ಹಾಲು ಬಂಡಿ.

ಮೇಲಿನ ವಾಕ್ಯಗಳನ್ನು ಗಮನಿಸಿ. ಇಲ್ಲಿ 'ಚಿಕ್ಕ ಹುಡುಗ', 'ಬಿಳಿ ಆನೆ', 'ಹಳೇ ಎತ್ತು' 'ಎಂಬಲ್ಲಿ ಚಿಕ್ಕ', 'ಹಳೇ', 'ಬಿಳಿ' ಎಂಬ ಪದಗಳು ಅದೇ ವಾಕ್ಯದಲ್ಲಿ ಕಾಣುವ ಹುಡುಗ, ಎತ್ತು ಹಾಗೂ ಆನೆ ಎಂಬ ನಾಮಪದಗಳ ವಿಶೇಷವನ್ನು ಕುರಿತು ಹೇಳುತ್ತವೆ. ದೊಡ್ಡ ಚೀಲ, ಕೆಂಪು ತಾವರೆ, ಪುಟ್ಟ ನಾಯಿಮರಿ ಇವೆಲ್ಲ ಪದಗಳಲ್ಲೂ ವಿಶೇಷಣಗಳಿರುವುದನ್ನು ಗಮನಿಸಿ. ಹೀಗೆ ನಾಮಪದಗಳ ಮೊದಲಲ್ಲಿ ಆಯಾ ನಾಮಪದಗಳ ವಿಶೇಷವನ್ನು ಕುರಿತು ಹೇಳುವ ಪದಗಳನ್ನು 'ವಿಶೇಷಣ'ಗಳೆನ್ನುತ್ತೇವೆ.

ಈ ವಾಕ್ಯಗಳಲ್ಲಿ ಉದಾಹರಣೆಯಂತೆ ವಿಶೇಷ್ಯ ಮತ್ತು ವಿಶೇಷಣಗಳನ್ನು ಗುರುತಿಸಿ ಬರೆಯಿರಿ.

| ಕ್ರ.ಸಂ | ವಾಕ್ಯಗಳು | ವಿಶೇಷ್ಯ | ವಿಶೇಷಣ |
|---|---|---|---|
| 1. | ಹಸಿರು ತೋಟದಲ್ಲಿ ಮಕ್ಕಳು ಆಡುವರು. | **ತೋಟ** | **ಹಸಿರು** |
| 2. | ದೊಡ್ಡ ಗಿಡದ ಕೆಳಗೆ ನಾಯಿ ಮಲಗಿತ್ತು. | | |
| 3. | ಚುರುಕು ವಿದ್ಯಾರ್ಥಿನಿ ಎಲ್ಲಾ ಪ್ರಶ್ನೆಗಳಿಗೆ ಉತ್ತರ ನೀಡಿದಳು. | | |
| 4. | ಶುದ್ಧ ನೀರನ್ನು ಕುಡಿಯುವುದು ಆರೋಗ್ಯಕ್ಕೆ ಒಳ್ಳೆಯದು. | | |
| 5. | ಹಳೆಯ ಪುಸ್ತಕದಲ್ಲಿ ವಿಶಿಷ್ಟ ಮಾಹಿತಿಯಿದೆ. | | |
| 6. | ನೀಲಿಯ ಆಕಾಶದಲ್ಲಿ ಪಕ್ಷಿಗಳು ಹಾರುತ್ತವೆ. | | |

© KTBS NOT TO BE REPUBLISHED

**ಹೀಗೊಂದು ಕಲಿಕೆ !**

ವಿಶೇಷ್ಯ ಎಂದರೇನು?

ವ್ಯಕ್ತಿಯ ಹೆಸರು, ವಸ್ತು, ಸ್ಥಳ ಅಥವಾ ಪ್ರಾಣಿ ಇತ್ಯಾದಿಗಳನ್ನು ಸೂಚಿಸುವ ಪದವನ್ನು ವಿಶೇಷ್ಯ ಎನ್ನುತ್ತಾರೆ. ಇದು ಯಾವುದಾದರೂ ಒಂದು ವಿಧದ ನಾಮಪದವಾಗಿರುತ್ತದೆ.

ವಿಶೇಷಣ ಎಂದರೇನು?

ವಿಶೇಷ್ಯದ ಗುಣ, ಬಣ್ಣ, ಆಕಾರ, ಪ್ರಮಾಣ, ಸ್ಥಿತಿ ಇತ್ಯಾದಿಗಳನ್ನು ವಿವರಿಸುವ ಪದವನ್ನು ವಿಶೇಷಣ ಎನ್ನುತ್ತಾರೆ. ಇದು ವಿಶೇಷ್ಯವನ್ನು ವಿವರಿಸುತ್ತದೆ.

# ವಚನಾಮೃತ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಓದಿದ ಸಾಹಿತ್ಯಗಳ (ಹಾಸ್ಯ, ಸಾಹಸ, ಸಾಮಾಜಿಕ ಕತೆ, ಕವಿತೆ, ವಚನ ಮುಂತಾದವುಗಳು) ವಿಷಯ ವಸ್ತು ಘಟನೆಗಳು, ಚಿತ್ರಗಳು ಮತ್ತು ಪಾತ್ರಗಳು, ಶಿರೋನಾಮೆಗಳ ಸ್ವತಃ ಟಿಪ್ಪಣಿ ಬರೆಯುವರು.

**ಚಟುವಟಿಕೆ 1 :** ಈ ವಚನಕಾರರನ್ನು ಗುರುತಿಸಿ ಅವರ ಹೆಸರು ಬರೆಯಿರಿ.






@KTBS NOT TO BE REPUBLISHED

**ಚಟುವಟಿಕೆ 2 :** ಈ ವಚನಕಾರರ ಅಂಕಿತನಾಮಗಳನ್ನು ಬರೆಯಿರಿ.

| ಕ್ರ.ಸಂ | ವಚನಕಾರರ ಹೆಸರು | ಅಂಕಿತನಾಮ |
|---|---|---|
| 1. | ಬಸವಣ್ಣ | |
| 2. | ಅಕ್ಕಮಹಾದೇವಿ | |
| 3. | ಅಲ್ಲಮಪ್ರಭು | |
| 4. | ಚೆನ್ನಬಸವಣ್ಣ | |
| 5. | ಜೇಡರ ದಾಸಿಮಯ್ಯ | |
| 6. | ಮಡಿವಾಳ ಮಾಚಯ್ಯ | |
| 7. | ಮುಕ್ತಾಯಕ್ಕ | |
| 8. | ಸತ್ಯಕ್ಕ | |

**ಚಟುವಟಿಕೆ 3 :** ಈ ವಚನದ ಅರ್ಥವನ್ನು ಚರ್ಚಿಸಿ ಬರೆಯಿರಿ.

ಉಳ್ಳವರು ಶಿವಾಲಯ ಮಾಡುವರಯ್ಯಾ,
ನಾನೇನ ಮಾಡಲಿ ಬಡವನಯ್ಯಾ.
ಎನ್ನ ಕಾಲೇ ಕಂಬ, ದೇಹವೇ ದೇಗುಲ,
ಶಿರವೇ ಹೊನ್ನ ಕಲಶವಯ್ಯಾ. ಕೂಡಲಸಂಗಮದೇವಾ,
ಕೇಳಯ್ಯಾ ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

@KTBS
NOT TO BE REPUBLISHED

**ಹೀಗೊಂದು ಕಲಿಕೆ !**
**ವಚನ ಸಾಹಿತ್ಯ**

ವಚನ ಸಾಹಿತ್ಯ 12ನೇ ಶತಮಾನದ ಸಮಯದಲ್ಲಿ ಬೆಳೆಯಿತು. ಇದನ್ನು ಬಸವಣ್ಣ, ಅಕ್ಕ ಮಹಾದೇವಿ, ಅಲ್ಲಮಪ್ರಭು ಮುಂತಾದ ಶರಣರು ಬರೆದರು. ಈ ಸಾಹಿತ್ಯವು ಭಕ್ತಿಯು, ಸಮಾನತೆ ಮತ್ತು ಸಾಮಾಜಿಕ ಬದಲಾವಣೆಗಳನ್ನು ಉತ್ತೇಜಿಸಿತು. ವಚನಗಳು ಸುಲಭವಾದ ಭಾಷೆಯಲ್ಲಿ, ನೇರವಾಗಿ ದೇವರನ್ನು ಉದ್ದೇಶಿಸಿ ಬರೆದ ಪ್ರಬಂಧಗಳಾಗಿವೆ.

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 12
## ವಿಮರ್ಶೆ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಓದಿದ ಸಾಹಿತ್ಯಗಳ (ಹಾಸ್ಯ, ಸಾಹಸ, ಸಾಮಾಜಿಕ ಕತೆ, ಕವಿತೆ, ವಚನ ಮುಂತಾದವುಗಳು) ವಿಷಯ ವಸ್ತು ಘಟನೆಗಳು, ಚಿತ್ರಗಳು ಮತ್ತು ಪಾತ್ರಗಳು, ಶಿರೋನಾಮೆಗಳ ಸ್ವತಃ ಟಿಪ್ಪಣಿ ಬರೆಯುವರು.

### ಕ್ರಿಯಾಪದದ ವಿಧಗಳು

1) ಈಗಾಗಲೇ ನಡೆದುಹೋದ ಕ್ರಿಯೆಯನ್ನು ಸೂಚಿಸುವ ಕ್ರಿಯಾಪದಗಳನ್ನು 'ಭೂತಕಾಲ ಕ್ರಿಯಾಪದ' ಎನ್ನುತ್ತೇವೆ.
2) ಸದ್ಯದ ಪರಿಸ್ಥಿತಿಯನ್ನು 'ವರ್ತಮಾನ' ಎನ್ನುತ್ತೇವೆ. ಹೀಗಾಗಿ ಸದ್ಯದಲ್ಲೇ ಕ್ರಿಯೆ ನಡೆಯುತ್ತದೆ ಎಂಬುದನ್ನು ಸೂಚಿಸುವ ಕ್ರಿಯಾಪದಗಳನ್ನು 'ವರ್ತಮಾನಕಾಲದ ಕ್ರಿಯಾಪದಗಳು' ಎನ್ನುತ್ತೇವೆ.
3) ಮುಂದಿನ ಕಾಲವನ್ನು 'ಭವಿಷ್ಯತ್ ಕಾಲ' ಎಂದು ಹೇಳುತ್ತೇವೆ. ಹೀಗೆ ಮುಂದೆ ಆಗುವ ಕ್ರಿಯೆಯನ್ನು ಸೂಚಿಸುವ ಕ್ರಿಯಾಪದಗಳನ್ನು 'ಭವಿಷ್ಯತ್ ಕಾಲದ ಕ್ರಿಯಾಪದ' ಎನ್ನುತ್ತೇವೆ.

**ಚಟುವಟಿಕೆ 1 :** ಅದಲು ಬದಲಾಗಿರುವ ಪದಗಳನ್ನು ಜೋಡಿಸಿ ಮಾದರಿಯಂತೆ ಅರ್ಥಪೂರ್ಣ ವಾಕ್ಯ ರಚಿಸಿ ಬರೆಯಿರಿ.

**ಮಾದರಿ :** ಎಳೆಯುತ್ತದೆ / ಬಂಡಿಯನ್ನು / ಎತ್ತು
ಎತ್ತು ಬಂಡಿಯನ್ನು ಎಳೆಯುತ್ತದೆ.

1) ಮಾವಿನಹಣ್ಣು / ಬೀಳುತ್ತದೆ / ಮರದಿಂದ

______________________________

2) ನುಡಿಯುತ್ತಿದ್ದರು / ಗಾಂಧೀಜಿ / ಸತ್ಯವನ್ನು

______________________________

3) ಆಕಾಶದಲ್ಲಿ / ಹದ್ದು / ಹಾರಾಡುತ್ತಿದೆ.

______________________________

4) ತರಕಾರಿಗಳನ್ನು / ತಂದನು / ಸಂತೆಯಿಂದ / ಹೇಮಂತನು

______________________________

5) ಕಾಯುತ್ತಾರೆ / ಗಡಿಯನ್ನು / ಸೈನಿಕರು

______________________________

© KTBS NOT TO BE REPUBLISHED

**ಚಟುವಟಿಕೆ 2 :** ಈ ವಾಕ್ಯಗಳಲ್ಲಿನ ಕರ್ತೃ, ಕರ್ಮ ಮತ್ತು ಕ್ರಿಯಾಪದಗಳನ್ನು ಗುರುತಿಸಿ ಮಾದರಿಯಂತೆ ಬರೆಯಿರಿ.

| ಕ್ರ.ಸಂ | ವಾಕ್ಯ | ಕರ್ತೃಪದ | ಕರ್ಮಪದ | ಕ್ರಿಯಾಪದ |
|---|---|---|---|---|
| 01. | ಸರಸ್ವತಿ ಶಾಲೆಗೆ ಹೋಗುತ್ತಾಳೆ. | **ಸರಸ್ವತಿ** | **ಶಾಲೆ** | **ಹೋಗುತ್ತಾಳೆ** |
| 02. | ಮೊಹಮ್ಮದನು ಮನೆಗೆ ಬರುತ್ತಾನೆ. | | | |
| 03. | ಗಿಳಿಗಳು ಆಕಾಶದಲ್ಲಿ ಹಾರಾಡುತ್ತವೆ. | | | |
| 04. | ಅಮ್ಮ, ಅಣ್ಣನನ್ನು ಕರೆಯುವೆನು. | | | |
| 05. | ಸಿದ್ಧಾರ್ಥನು ಕರೆಯನ್ನು ಕೇಳಿಸಿಕೊಳ್ಳಲಿಲ್ಲ. | | | |
| 06. | ಶ್ರೀನಿವಾಸನು ಹೆಚ್ಚಾಗಿ ಮಾತನಾಡುತ್ತಾನೆ. | | | |
| 07. | ರೈತರು ಕಾಳುಗಳನ್ನು ಬಿತ್ತುತ್ತಿದ್ದಾರೆ. | | | |
| 08. | ಮಕ್ಕಳು ಸಂಭ್ರಮದಿಂದ ಕುಣಿಯುತ್ತಿದ್ದಾರೆ. | | | |
| 09. | ಕೊಕ್ಕರೆಗಳು ಮೀನುಗಳನ್ನು ತಿನ್ನುತ್ತಿವೆ. | | | |
| 10. | ಕಲ್ಲು ಬೀಸಿ ಕನ್ನಡಿಯು ಒಡೆಯಿತು. | | | |

@KTBS NOT TO BE REPUBLISHED

**ಚಟುವಟಿಕೆ 3 :** ಕೊಟ್ಟಿರುವ ವಾಕ್ಯಗಳಲ್ಲಿರುವ ಕ್ರಿಯಾಪದಗಳನ್ನು ಗಮನಿಸಿ, ಕಾಲಕ್ಕೆ ಅನುಗುಣವಾಗಿ ಕ್ರಿಯಾಪದದ ಕಾಲವನ್ನು ಮಾದರಿಯಂತೆ ಬರೆಯಿರಿ.

| ಕ್ರ.ಸಂ | ವಾಕ್ಯಗಳು | ಕ್ರಿಯಾಪದ | ಕ್ರಿಯಾಪದದ ಕಾಲ |
|---|---|---|---|
| 1. | ನಾನು ಪ್ರತಿದಿನ ಶಾಲೆಗೆ ಹೋಗುತ್ತೇನೆ. | **ಹೋಗುತ್ತೇನೆ** | **ವರ್ತಮಾನಕಾಲ** |
| 2. | ಅವರು ಸಮಯಕ್ಕೆ ಪಾಠಶಾಲೆಗೆ ಬಂದರು. | | |
| 3. | ಅವರು ಎಲ್ಲರೂ ಒಟ್ಟಾಗಿ ಹಬ್ಬವನ್ನು ಆಚರಿಸುವರು. | | |
| 4. | ನಾವು ಬಸ್ಸಿನಲ್ಲಿ ಮನೆಗೆ ಹೋಗುತ್ತೇವೆ. | | |
| 5. | ಮಕ್ಕಳು ಉದ್ಯಾನವನದಲ್ಲಿ ಆಟ ಆಡಿದರು. | | |

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 13
## ಚರ್ಚೆ–ಸಂವಾದ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಯಾವುದಾದರು ಹೊಸ ಪಠ್ಯವಸ್ತುವನ್ನು ಓದಿ ಅದರಲ್ಲಿ ಬರುವ ವಿಷಯವನ್ನು ಊಹಿಸಿ ಅಥವಾ ಚರ್ಚಿಸಿ ಅರ್ಥೈಸಿಕೊಂಡು ವಿವರಿಸುವರು.

**ಚಟುವಟಿಕೆ 1 :** ಇಲ್ಲಿ ನೀಡಲಾಗಿರುವ ಚಿತ್ರಗಳಲ್ಲಿ ಕಂಡುಬರುವ ಸೂಚನೆಗಳನ್ನು ಪಟ್ಟಿಮಾಡಿ ಬರೆದು, ತರಗತಿಯಲ್ಲಿ ಚರ್ಚಿಸಿರಿ.



NOT TO BE REPUBLISHED @KTBS

**ಚಟುವಟಿಕೆ 2 :** ಕೊಟ್ಟಿರುವ ಚಿತ್ರಗಳಿಗೆ ಸಂಬಂಧಿಸಿದಂತೆ ಸರಿಹೊಂದುವ ಮೂರು ಸೂಚನೆಗಳನ್ನು ಮಾದರಿಯಂತೆ ಬರೆಯಿರಿ.

**ಸೂಚನೆಗಳು**



ಮಾದರಿ : 1. ಪಾದರಕ್ಷೆಗಳನ್ನು ಹೊರಗೆ ಬಿಡಿ.
2. ಸ್ವಚ್ಛತೆ ಕಾಪಾಡಿ.
3. ನೇತ್ರದಾನ ಮಹಾದಾನ.




______________________

______________________

______________________



______________________

______________________

______________________



______________________

______________________

______________________



______________________

______________________

______________________

@KTBS NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ - ಚಟುವಟಿಕೆ ಹಾಳೆ 14

# ಸಂಧಿ ಮಾಡೋಣ–1

(ಕನ್ನಡ ಸಂಧಿಗಳು)

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಯಾವುದಾದರು ಹೊಸ ಪಠ್ಯವಸ್ತುವನ್ನು ಓದಿ ಅದರಲ್ಲಿ ಬರುವ ವಿಷಯವನ್ನು ಊಹಿಸಿ ಅಥವಾ ಚರ್ಚಿಸಿ ಅರ್ಥೈಸಿಕೊಂಡು ವಿವರಿಸುವರು.

**ಚಟುವಟಿಕೆ 1 :** ನೀಡಲಾಗಿರುವ ಪಠ್ಯಾಂಶವನ್ನು ಓದಿ ಅಡಿಗೆರೆ ಎಳೆದಿರುವ ಪದಗಳನ್ನು ಬರೆದು, ಬಿಡಿಸಿ ಬರೆಯಿರಿ.

ಶ್ರೀನಿವಾಸನು **ಮಳೆಗಾಲ**ದಲ್ಲಿ **ಮಳೆಯನ್ನು** ಲೆಕ್ಕಿಸದೆ **ಊರೂರು** ಸುತ್ತುತ್ತಾ ಅಲೆಯುತ್ತಿದ್ದನು. ಯಾರೊಂದಿಗೂ **ಮಾತಿಲ್ಲ** ಕಥೆಯಿಲ್ಲದೆ **ಬೇರೊಂದು ಚಿಂತನೆಯಲ್ಲಿ** ತೊಡಗಿದ್ದನು. ಬೇರೊಬ್ಬನ **ಸಂಗವಿಲ್ಲದ** ಅವನು **ಗುರುವನ್ನು** ನೆನೆಯುತ್ತಾ **ಕಂಬನಿ** ಹಾಕುತ್ತ **ಬೆಟ್ಟದಾವರೆ** ಹಿಡಿದು **ಗುಡಿಯೊಳಗೆ** ಬಂದು ದೇವರಿಗೆ **ಹೂವನ್ನು** ಅರ್ಪಿಸಿದನು.

| ಪದ ಬರೆಯಿರಿ | ಬಿಡಿಸಿ ಬರೆಯಿರಿ | ಪದ ಬರೆಯಿರಿ | ಬಿಡಿಸಿ ಬರೆಯಿರಿ |
|---|---|---|---|
| ಮಳೆಗಾಲ | ಮಳೆ + ಕಾಲ | | |
| | | | |
| | | | |
| | | | |
| | | | |
| | | | |

@KTBS NOT TO BE REPUBLISHED

**ಚಟುವಟಿಕೆ 2 :** ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ಪೂರ್ವ ಪದದ ಕೊನೆಯ ಸ್ವರಾಕ್ಷರ ಹಾಗೂ ಉತ್ತರ ಪದದ ಮೊದಲ ಸ್ವರಾಕ್ಷರವನ್ನು ಗುರುತಿಸಿ ಬರೆಯಿರಿ.(ಲೋಪಸಂಧಿ)

| ಪದಗಳು | ಬಿಡಿಸಿ ಬರೆಯಿರಿ | ಸ್ವರ ಅಕ್ಷರಗಳು | ಬಿಟ್ಟುಹೋದ ಅಕ್ಷರ |
|---|---|---|---|
| ಬೇರೊಬ್ಬ | ಬೇರೆ+ಒಬ್ಬ | ಎ + ಒ | ಎ |
| ಬೇರೊಂದು | | | |
| ನೂರಾರು | | | |
| ಮಾತಿಲ್ಲ | | | |

ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ಪೂರ್ವ ಪದದ ಕೊನೆಯ ಸ್ವರಾಕ್ಷರ ಹಾಗೂ ಉತ್ತರ ಪದದ ಮೊದಲ ಸ್ವರಾಕ್ಷರವನ್ನು ಗುರುತಿಸಿ ಬರೆಯಿರಿ. (ಆಗಮಸಂಧಿ)

| ಪದಗಳು | ಬಿಡಿಸಿ ಬರೆಯಿರಿ | ಸ್ವರ ಅಕ್ಷರಗಳು | ಸೇರಿದ ಅಕ್ಷರ |
|---|---|---|---|
| ಶಾಲೆಯಿಂದ | ಶಾಲೆ+ಇಂದ | ಎ + ಇ | ಯ್ |
| ಗುರುವನ್ನು | | | |
| ಮನೆಯಲ್ಲಿ | | | |
| ಆರಂಭವಾಗು | | | |

@KTBS NOT TO BE REPUBLISHED

ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ಉತ್ತರ ಪದದ ಮೊದಲ ವ್ಯಂಜನಾಕ್ಷರ ಹಾಗೂ ಬದಲಾದ ವ್ಯಂಜನಾಕ್ಷರ ಗುರುತಿಸಿ ಬರೆಯಿರಿ. (ಆದೇಶ ಸಂಧಿ)

| ಪದಗಳು | ಬಿಡಿಸಿ ಬರೆಯಿರಿ | ಉತ್ತರ ಪದದಲ್ಲಿರುವ ಮೊದಲ ವ್ಯಂಜನಾಕ್ಷರ | ಬದಲಾದ ವ್ಯಂಜನಾಕ್ಷರ |
|---|---|---|---|
| ಹೂಬುಟ್ಟಿ | ಹೂ+ಪುಟ್ಟಿ | ಪ್ | ಬ್ |
| ಹಳಗನ್ನಡ | | | |
| ಬೆಟ್ಟದಾವರೆ | | | |
| ಮಳೆಗಾಲ | | | |

**ಹೀಗೊಂದು ಕಲಿಕೆ !**

ಎರಡು ಪದಗಳು ಅರ್ಥಬದ್ಧವಾಗಿ ಸೇರುವುದಕ್ಕೆ 'ಸಂದಿ' ಎನ್ನುವರು. ಸಂಧಿಗಳಲ್ಲಿ ಎರಡು ವಿಧಗಳು ಕನ್ನಡ ಸಂಧಿಗಳು (ಲೋಪಸಂಧಿ, ಆಗಮಸಂಧಿ, ಆದೇಶಸಂಧಿ) ಮತ್ತು ಸಂಸ್ಕೃತ ಸಂಧಿಗಳು (ಸವರ್ಣದೀರ್ಘಸಂಧಿ, ಗುಣಸಂಧಿ, ವೃದ್ಧಿಸಂಧಿ, ಯಣ್‌ಸಂಧಿ, ಅನುನಾಸಿಕಸಂಧಿ, ಜಶ್ತ್ವಸಂಧಿ, ಶ್ಚುತ್ವಸಂಧಿ)

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 15

## ಸಾರಾಂಶ ಬರೆಹ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿಷಯಗಳ ಬಗ್ಗೆ ತಾರ್ಕಿಕ ಆಲೋಚನೆ ಮಾಡಿ ಏಕೆ? ಏನು? ಹೇಗೆ? ಯಾವಾಗ? ಎಂದು ಪ್ರಶ್ನಿಸಿ ಅರ್ಥೈಸಿಕೊಂಡು ಹೇಳುವರು.

**ಚಟುವಟಿಕೆ 1 :** ಕೊಟ್ಟಿರುವ ಕವಿತೆಯ ಸಾರಾಂಶವನ್ನು ಬರೆಯಿರಿ.

ನಾವೆಲ್ಲರೂ ಒಂದೇ ಎನ್ನುತ
ಎಲ್ಲರ ಜೊತೆಯಲ್ಲಿ ನಡೆಯೋಣ
ಭೇದ ಭಾವವ ತೊಡೆಯುತ
ಅಂಧಕಾರವನು ಅಳಿಸೋಣ

ಗಂಡು–ಹೆಣ್ಣು ಭೇದವ ತೊಡೆದು
ಲಿಂಗ–ಸಮಾನತೆ ಮೆರೆಯೋಣ
ಅಸಮಾನತೆಯನು ತಡೆದು
ಸಮಾನತೆಯನ್ನು ಸಾರೋಣ

ಉಡಿಗೆ–ತೊಡಿಗೆಗಳು ಬೇರೆಯಾದರೂ
ಆಚಾರ ವಿಚಾರ ತಿಳಿಯೋಣ
ಜಾತಿ – ಧರ್ಮವ ಮರೆಯುತ
ಒಂದೇ ಎಂದು ಕೂಗೋಣ.

ರಚನೆ : ಜ್ಯೋತಿ. ಕೆ.ಎಮ್



@KTBS NOT TO BE REPUBLISHED

**ಚಟುವಟಿಕೆ 2 :** ಭಾರತದ ವಿವಿಧ ರಾಜ್ಯಗಳ ರಾಜ್ಯಭಾಷೆಗಳನ್ನು ಬರೆಯಿರಿ ಹಾಗೂ ಶಾಸ್ತ್ರೀಯ ಸ್ಥಾನಮಾನ ಪಡೆದ ಭಾಷೆಗಳನ್ನು ಪಟ್ಟಿಮಾಡಿರಿ.



@KTBS NOT TO BE REPUBLISHED

ಶಾಸ್ತ್ರೀಯ ಸ್ಥಾನಮಾನ ಪಡೆದ ಭಾಷೆಗಳು : ____________________

____________________

____________________

**ಚಟುವಟಿಕೆ 3 :** ಭಾರತದ ವಿವಿಧ ರಾಜ್ಯಗಳ ರಾಜ್ಯಭಾಷೆಗಳನ್ನು ಬರೆಯಿರಿ ಹಾಗೂ ಶಾಸ್ತ್ರೀಯ ಸ್ಥಾನಮಾನ ಪಡೆದ ಭಾಷೆಗಳನ್ನು ಪಟ್ಟಿಮಾಡಿರಿ.

| ಕ್ರ.ಸಂ | ರಾಜ್ಯದ ಹೆಸರು | ರಾಜ್ಯ ಭಾಷೆ |
|---|---|---|
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |

@KTBS
NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ - ಚಟುವಟಿಕೆ ಹಾಳೆ 16

# ಸಂಧಿ ಮಾಡೋಣ–2

(ಸಂಸ್ಕೃತ ಸಂಧಿಗಳು)

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿಷಯಗಳ ಬಗ್ಗೆ ತಾರ್ಕಿಕ ಆಲೋಚನೆ ಮಾಡಿ ಏಕೆ? ಏನು? ಹೇಗೆ? ಯಾವಾಗ? ಎಂದು ಪ್ರಶ್ನಿಸಿ ಅರ್ಥೈಸಿಕೊಂಡು ಹೇಳುವರು.

**ಚಟುವಟಿಕೆ 1 :** ಕೊಟ್ಟಿರುವ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆದು, ಪೂರ್ವ ಪದದ ಕೊನೆಯ ಸ್ವರಾಕ್ಷರ ಹಾಗೂ ಉತ್ತರ ಪದದ ಮೊದಲ ಸ್ವರಾಕ್ಷರವನ್ನು ಗುರುತಿಸಿ ಬರೆಯಿರಿ.

| ಪದಗಳು | ಬಿಡಿಸಿ ಬರೆಯಿರಿ | ಸ್ವರ ಅಕ್ಷರಗಳು | ದೀರ್ಘಸ್ವರ |
|---|---|---|---|
| ರವೀಂದ್ರ | ರವಿ + ಇಂದ್ರ | ಇ + ಇ | ಈ |
| ದೇವಾಲಯ | | | |
| ಗುರೂಪದೇಶ | | | |
| ಮಹಾತ್ಮ | | | |

©KTBS NOT TO BE REPUBLISHED

**ಸವರ್ಣದೀರ್ಘಸಂಧಿ :** ಸಂಧಿಕಾರ್ಯ ನಡೆಯುವಾಗ ಒಂದೇ ರೀತಿಯ ಸ್ವರಾಕ್ಷರಗಳುಪರಸ್ಪರ ಸೇರಿ ದೀರ್ಘಸ್ವರ ಆದೇಶವಾದರೆ ಅಂತಹ ಸಂಧಿಯನ್ನು 'ಸವರ್ಣದೀರ್ಘಸಂಧಿ' ಎಂದು ಕರೆಯುತ್ತೇವೆ.

**ಚಟುವಟಿಕೆ 2 :** ಕೊಟ್ಟಿರುವ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆದು, ಪೂರ್ವ ಪದದ ಕೊನೆಯ ಸ್ವರಾಕ್ಷರ ಹಾಗೂ ಉತ್ತರ ಪದದ ಮೊದಲ ಸ್ವರಾಕ್ಷರವನ್ನು ಗುರುತಿಸಿ ಬರೆಯಿರಿ.

| ಪದಗಳು | ಬಿಡಿಸಿ ಬರೆಯಿರಿ | ಸ್ವರ ಅಕ್ಷರಗಳು | ಹೊಸದಾಗಿ ಬಂದ ಸ್ವರಾಕ್ಷರ |
|---|---|---|---|
| ದೇವೇಂದ್ರ | ದೇವ + ಇಂದ್ರ | ಅ + ಇ | ಏ |
| ಮಹೇಶ | | | |
| ಅರುಣೋದಯ | | | |
| ಮಹರ್ಷಿ | | | |

**ಗುಣಸಂಧಿ :** 'ಅ' ಅಥವಾ 'ಆ' ಎಂಬ ಸ್ವರಗಳಿಗೆ 'ಇ' ಅಥವಾ 'ಈ' ಎಂಬ ಸ್ವರ ಸೇರಿದಾಗ 'ಏ'ಕಾರವೂ 'ಉ' ಅಥವಾ 'ಊ' ಸ್ವರ ಸೇರಿದಾಗ 'ಓ'ಕಾರವೂ 'ಋ' ಎಂಬ ಸ್ವರವು ಸೇರಿದಾಗ 'ಅರ್' ಕಾರವೂಬರುವುದನ್ನು 'ಗುಣಸಂಧಿ' ಎಂದು ಕರೆಯುತ್ತೇವೆ.

**ಚಟುವಟಿಕೆ 3 :** ಕೊಟ್ಟಿರುವ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆದು, ಪೂರ್ವ ಪದದ ಕೊನೆಯ ಸ್ವರಾಕ್ಷರ ಹಾಗೂ ಉತ್ತರ ಪದದ ಮೊದಲ ಸ್ವರಾಕ್ಷರವನ್ನು ಗುರುತಿಸಿ ಬರೆಯಿರಿ.

| ಪದಗಳು | ಬಿಡಿಸಿ ಬರೆಯಿರಿ | ಸ್ವರ ಅಕ್ಷರಗಳು | ಹೊಸದಾಗಿ ಬಂದ ಸ್ವರಾಕ್ಷರ |
|---|---|---|---|
| ಏಕೈಕ | ಏಕ + ಏಕ | ಅ + ಏ | ಐ |
| ಶಿವೈಕ್ಯ | | | |
| ಮಹೌದಾರ್ಯ | | | |
| ವನೌಷಧ | | | |

**ವೃದ್ಧಿಸಂಧಿ :** 'ಅ', 'ಆ' ಕಾರಗಳ ಮುಂದೆ 'ಏ', 'ಐ' ಕಾರಗಳು ಬಂದರೆ ಅವೆರಡರ ಸ್ಥಾನದಲ್ಲಿ 'ಐ' ಕಾರವೂ ಮತ್ತು 'ಅ', 'ಆ' ಕಾರಗಳ ಮುಂದೆ 'ಓ', 'ಔ' ಕಾರಗಳು ಬಂದರೆ ಅವೆರಡರ ಸ್ಥಾನದಲ್ಲಿ 'ಔ' ಕಾರವೂ ಬರುವುದು. ಇದಕ್ಕೆ 'ವೃದ್ಧಿಸಂಧಿ' ಎಂದು ಹೆಸರು.

**ಚಟುವಟಿಕೆ 4 :** ಕೊಟ್ಟಿರುವ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆದು, ಪೂರ್ವ ಪದದ ಕೊನೆಯ ಸ್ವರಾಕ್ಷರ ಹಾಗೂ ಉತ್ತರ ಪದದ ಮೊದಲ ಸ್ವರಾಕ್ಷರವನ್ನು ಗುರುತಿಸಿ ಬರೆಯಿರಿ.

@KTBS
NOT TO BE REPUBLISHED

| ಪದಗಳು | ಬಿಡಿಸಿ ಬರೆಯಿರಿ | ಸ್ವರ ಅಕ್ಷರಗಳು | ಹೊಸದಾಗಿ ಸೇರಿದ ಅಕ್ಷರ |
|---|---|---|---|
| ಇತ್ಯಾದಿ | ಇತಿ + ಆದಿ | ಇ + ಆ | ಯ್ |
| ಗುರ್ವಾಜ್ಞೆ | | | |
| ಪಿತ್ರಾರ್ಜಿತ | | | |
| ಪ್ರತ್ಯುಪಕಾರ | | | |
| ಜಾತ್ಯತೀತ | | | |

**ಯಣ್‌ಸಂಧಿ :** ಇ, ಈ , ಉ, ಊ, ಋ ಕಾರಗಳಿಗೆ ಸವರ್ಣವಲ್ಲದ ಸ್ವರ ಪರವಾದರೆ, 'ಇ' 'ಈ' ಕಾರಗಳಿಗೆ 'ಯ'ಕಾರವೂ, ಉ, ಊ ಕಾರಗಳಿಗೆ 'ವ' ಕಾರವೂ 'ಋ' ಕಾರಕ್ಕೆ 'ರ' ಕಾರವೂ ಸೇರುವುದನ್ನು 'ಯಣ್ ಸಂಧಿ' ಎಂದು ಕರೆಯುವರು.

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 17
## ಸ್ಪಷ್ಟಮಾತು

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿಭಿನ್ನ ಸಂದರ್ಭ/ಸನ್ನಿವೇಶಗಳಲ್ಲಿ ಹೇಳಲ್ಪಡುವ ಇತರರ ಮಾತುಗಳನ್ನು ತಮ್ಮದೆ ಶೈಲಿಯಲ್ಲಿ ಪುನರ್ ಸೃಷ್ಟಿಸುವರು. ಉದಾಹರಣೆಗೆ: ತಾವು ಸ್ವತಃ ನೋಡದಿರುವ ತನ್ನ ಒಡನಾಡಿಯ ಯಾತ್ರೆಯ ಅನುಭವ, ಇತ್ಯಾದಿ.

**ಚಟುವಟಿಕೆ 1 :** ಕೊಟ್ಟಿರುವ ಪದಗಳನ್ನು ಬಳಸಿ, ಬಿಟ್ಟ ಸ್ಥಳವನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.

| | | |
|---|---|---|
| **ದಯವಿಟ್ಟು** | **ಕ್ಷಮಿಸಿ** | **ಧನ್ಯವಾದಗಳು** |
| **ಪ್ರಶಂಸಿಸು** | **ನಮಸ್ಕಾರಗಳು** | **ಒಪ್ಪಿದೆ / ಹೌದು** |

1) ತರಗತಿಯಲ್ಲಿ ಯಾರೂ ಉತ್ತರಿಸದ ಪ್ರಶ್ನೆಗೆ ಉತ್ತರಿಸಿದಾಗ – ______________________

2) ನಿನ್ನ ಗೆಳೆಯರಿಂದ ಪೆನ್ಸಿಲ್ ಕೇಳಿ ಪಡೆಯುವಾಗ – ______________________

3) ನಿನ್ನ ಗೆಳೆಯನ ಪೆನ್ಸಿಲ್‌ನನ್ನು ಹಿಂದಿರುಗಿಸಲು ಸಾಧ್ಯವಾಗದಿದ್ದಾಗ – ______________________

4) ನಿನ್ನ ಗೆಳೆಯನಿಂದ ಪೆನ್ಸಿಲ್ ಪಡೆದ ನಂತರ – ______________________

**ಚಟುವಟಿಕೆ 2 :** ನಾವು ಸಹಕರಿಸೋಣ – ಚಿತ್ರವನ್ನು ಗಮನಿಸು. ಚಿತ್ರಗಳು ಸೂಚಿಸುವ ಸಂದರ್ಭಗಳಲ್ಲಿ ನೀನೇನು ಮಾಡುವೆ? ಬರೆ.



______________________
______________________
______________________
______________________



______________________
______________________
______________________
______________________

**ಹೀಗೊಂದು ಕಲಿಕೆ !**

ಗುರುಹಿರಿಯರಿಗೆ, ಕಿರಿಯರೊಡನೆ ಗೌರವಪೂರ್ವಕವಾಗಿ ಮಾತನಾಡುವ ಕೌಶಲ ಬೆಳೆಸಿಕೊಳ್ಳೋಣ. ವಿವಿಧ ಸನ್ನಿವೇಶ, ಘಟನೆಗಳಲ್ಲಿ ಇತರರ ಜೊತೆ ಹೇಗೆ ಮಾತನಾಡಬೇಕು, ಹೇಗೆ ವರ್ತಿಸಬೇಕು ಎಂಬುದನ್ನು ಅರಿಯೋಣ.

@KTBS NOT TO BE REPUBLISHED

**ಚಟುವಟಿಕೆ 3 :** ಸಮಾಸಗಳ ಪರಿಚಯ.

ಈ ಕೆಳಗಿನ ವಾಕ್ಯವೃಂದಗಳಲ್ಲಿ ಅಡಿಗೆರೆ ಎಳೆದಿರುವ ಪದಗಳ ವ್ಯತ್ಯಾಸವನ್ನು ಗಮನಿಸಿ ಓದಿರಿ.

**ವಾಕ್ಯವೃಂದ 1 :** ಮೈಸೂರಿನಲ್ಲಿ **ಅರಸನ ಮನೆ** ಇದೆ. **ಅರಸನ ಮನೆ**ಯಲ್ಲಿ **ಬಿಳಿದು ಕೊಡೆ**ಯೂ ಇದೆ.**ಅರಸನ ಮನೆ**ಯನ್ನು **ನಾಲ್ಕು ಮಡಿ** ಕೃಷ್ಣರಾಜರು ಕಟ್ಟಿಸಿದರು. **ಅರಸನ ಮನೆ**ಯಲ್ಲಿ ಓಡಾಡಿ ನನಗೆ **ಕಾಲ ಅಡಿ** ನೋವು ಬಂದಿತು. **ಅರಸನ ಮನೆ**ಯಲ್ಲಿ**ಆನೆಯೂ ಕುದುರೆಯೂ ದನವೂ**ಇವೆ. **ಅರಸನ ಮನೆ**ಯನ್ನು ನೋಡುವಾಗ ನನ್ನ ಜೊತೆ **ಚಕ್ರವನ್ನು ಕೈಯಲ್ಲಿ ಹಿಡಿದವನು** ಇದ್ದ. ಇಬ್ಬರೂ **ಅರಸನ ಮನೆ**ಯನ್ನು **ಮೈಯನ್ನು ಮರೆತು** ನೋಡಿದೆವು.

**ವಾಕ್ಯವೃಂದ 2 :** ಮೈಸೂರಿನಲ್ಲಿ **ಅರಮನೆ** ಇದೆ. **ಅರಮನೆ**ಯಲ್ಲಿ **ಬೆಳ್ಗೊಡೆ**ಯೂ ಇದೆ.**ಅರಮನೆ**ಯನ್ನು **ನಾಲ್ವಡಿ** ಕೃಷ್ಣರಾಜರು ಕಟ್ಟಿಸಿದರು. **ಅರಮನೆ**ಯಲ್ಲಿ ಓಡಾಡಿ ನನಗೆ **ಅಂಗಾಲು** ನೋವು ಬಂದಿತು. **ಅರಮನೆ**ಯಲ್ಲಿ**ಆನೆ ಕುದುರೆ ದನಗಳು**ಇವೆ. **ಅರಮನೆ**ಯನ್ನು ನೋಡುವಾಗ ನನ್ನ ಜೊತೆ **ಚಕ್ರಪಾಣಿ** ಇದ್ದ. ಇಬ್ಬರೂ **ಅರಮನೆ**ಯನ್ನು **ಮೈಮರೆತು** ನೋಡಿದೆವು.

| ವಾಕ್ಯವೃಂದ 1 ರಲ್ಲಿನ ಪದಗಳು | ವಾಕ್ಯವೃಂದ 2 ರಲ್ಲಿನ ರೂಪ ಬದಲಾದ ಪದಗಳು |
|---|---|
| | |
| | |
| | |
| | |
| | |

@KTBS NOT TO BE REPUBLISHED

ಮೇಲಿನ ವಾಕ್ಯವೃಂದದಲ್ಲಿ ಅರಸನ ಮನೆ, ಬಿಳಿದು ಕೊಡೆ, ನಾಲ್ಕು ಮಡಿ, ಕಾಲ ಅಡಿ, ಆನೆಯೂ ಕುದುರೆಯೂ ದನವೂ, ಚಕ್ರವನ್ನು ಕೈಯಲ್ಲಿ ಹಿಡಿದವನು ಎಂಬ ಪದಗಳನ್ನು ಬಿಡಿಸಿ ಬರೆಯಲಾಗಿದೆ. ಈ ಪದಗಳನ್ನು ಕೂಡಿಸಲು ಸಾಧ್ಯ. ಹೀಗೆ ಕೂಡಿಸುವುದರಿಂದ ಅಕ್ಷರಗಳ ಅನಗತ್ಯ ಬಳಕೆ ಮತ್ತು ಉಚ್ಚಾರಣೆಯ ಕಾಲ ಕಡಿಮೆಯಾಗುತ್ತದೆ ಮತ್ತು ಉಚ್ಚಾರಣೆ ಮತ್ತಷ್ಟು ಸುಲಭವಾಗುತ್ತದೆ.

**ಹೀಗೆ ಕೂಡಿಸುವುದು ಅಥವಾ ಸಮಸ್ತಗೊಳಿಸುವುದು ಎಂದರೆ ಸಮಾಸ ಮಾಡುವುದು ಎಂದು ಅರ್ಥ. ಹೀಗೆ ಕೂಡಿಸಿದ ಪದದಲ್ಲಿ ಎರಡು ಭಾಗಗಳಿವೆ. ಒಂದನ್ನು 'ಪೂರ್ವಪದ', ಅದರ ಎದುರಿಗೆ ಬರುವುದನ್ನು 'ಉತ್ತರಪದ' ಎಂದೂ ಕರೆಯಲಾಗುತ್ತದೆ. ಕೂಡಿಸಿದ ಪದವನ್ನು ಮತ್ತೆ ಬಿಡಿಸಿ ಬರೆದರೆ ಅದು 'ವಿಗ್ರಹವಾಕ್ಯ'. ಸಮಾಸವಾದ ಪದವನ್ನು ವಾಕ್ಯದಲ್ಲಿ ಬಳಸಿದಾಗ ಯಾವ ಪದದ ಅರ್ಥ ಮುಖ್ಯವಾಗುತ್ತದೆ ಎಂಬುದರ ಆಧಾರದ ಮೇಲೆ ವಿವಿಧ ಸಮಾಸಗಳನ್ನು ಗುರುತಿಸಲಾಗುತ್ತದೆ. ಸಮಾಸವೆಂಬುದು ಪೂರ್ಣ ಪದಗಳೊಂದಿಗೆ ನಡೆಯುವ ಕ್ರಿಯೆಯಾಗಿದ್ದು ಆದ್ದರಿಂದ ಇದನ್ನು 'ಸಮಸ್ತ ಪದಗಳು' ಎಂದೂ ಸಹ ಗುರುತಿಸಬಹುದು.**

## ಬೆಂಬಲಿತ ಹಂತ – ಚಟುವಟಿಕೆ ಹಾಳೆ 18

# ಸಮಸ್ತ ಪದಗಳು–1

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿಭಿನ್ನ ಸಂದರ್ಭ/ಸನ್ನಿವೇಶಗಳಲ್ಲಿ ಹೇಳಲ್ಪಡುವ ಇತರರ ಮಾತುಗಳನ್ನು ತಮ್ಮದೆ ಶೈಲಿಯಲ್ಲಿ ಪುನರ್ ಸೃಷ್ಟಿಸುವರು. (ಉದಾಹರಣೆಗೆ : ತಾವು ಸ್ವತಃ ನೋಡದಿರುವ ತನ್ನ ಒಡನಾಡಿಯ ಯಾತ್ರೆಯ ಅನುಭವ, ಇತ್ಯಾದಿ.)

**ಚಟುವಟಿಕೆ 1 :** ಸಮಾಸ ಪದಗಳು ಮತ್ತು ವಿಗ್ರಹವಾಕ್ಯ (ಬಿಡಿಸಿ ಬರೆದ) ಮಾಡಿದ ಪದಗಳನ್ನು ಹೊಂದಿಸಿ ಬರೆಯಿರಿ.

**ಸಮಾಸ ಪದಗಳು**

ಮಳೆಗಾಲ, ಹೆಮ್ಮರ, ಅಂಗೈ, ರಾಮಲಕ್ಷ್ಮಣರು, ಮುಂದಲೆ

ತಲೆನೋವು, ಕೆಂದಾವರೆ, ಮುಂಗಾಲು, ಮಲ್ಲಿಗೆಹೂವು, ಮೆಲ್ನುಡಿ

ಕೃಷ್ಣಾರ್ಜುನರು, ಅರಮನೆ, ಮನೆಗೆಲಸ, ಗಿಡಮರಬಳ್ಳಿಗಳು

**ವಿಗ್ರಹವಾಕ್ಯ ಪದಗಳು**

ಹಿರಿದು + ಮರ, ತಲೆಯಲ್ಲಿ + ನೋವು, ಅರಸನ + ಮನೆ, ಮೆಲ್ಲಿತು + ನುಡಿ

ಕೈಯ + ಅಡಿ, ರಾಮನು + ಲಕ್ಷ್ಮಣನು, ಮಳೆಯ + ಕಾಲ, ತಲೆಯ + ಮುಂದೆ

ಕೆಂಪಾದ + ತಾವರೆ, ಗಿಡಗಳು + ಮರಗಳು + ಬಳ್ಳಿಗಳು, ಮನೆಯ + ಕೆಲಸ

ಕಾಲಿನ + ಮುಂದು, ಮಲ್ಲಿಗೆಯ + ಹೂವು, ಕೃಷ್ಣನು + ಅರ್ಜುನನು, ಅರಸನ + ಮನೆ

| ಸಮಾಸಪದ | ವಿಗ್ರಹವಾಕ್ಯ |
|---|---|
| | |
| | |
| | |
| | |
| | |
| | |

@KTBS NOT TO BE REPUBLISHED

**ಚಟುವಟಿಕೆ 2 :** ಈ ಮೇಲಿನ ಸಮಾಸ ಪದಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಯಾವುದಕ್ಕೆ ಸಂಬಂಧಿಸಿದೆ ಎಂಬುದನ್ನು ಪತ್ತೆಹಚ್ಚಿ ಬರೆಯಿರಿ.

| ನಾಮಪದಗಳಿರುವ ಪದ | ವಿಶೇಷಣದಿಂದ ಕೂಡಿದ ಪದ | ದೇಹಕ್ಕೆ ಸಂಬಂಧಿಸಿದ ಪದ | ಎರಡು/ಎರಡಕ್ಕಿಂತ ಹೆಚ್ಚು ನಾಮಪದಗಳಿರುವ ಪದ |
|---|---|---|---|
| | | | |
| | | | |
| | | | |
| | | | |
| | | | |
| **ತತ್ಪುರುಷ ಸಮಾಸ** | **ಕರ್ಮಧಾರೆಯ ಸಮಾಸ** | **ಅಂಶಿ ಸಮಾಸ** | **ದ್ವಂದ್ವ ಸಮಾಸ** |

@KTBS NOT TO BE REPUBLISHED

**ಹೀಗೊಂದು ಕಲಿಕೆ !**

1) ಎರಡು ನಾಮಪದಗಳು ಸೇರಿ ಸಮಾಸವಾದಾಗ ಉತ್ತರಪದದ ಅರ್ಥವು ಪ್ರಧಾನವಾಗಿದ್ದರೆ ಅಂತಹ ಸಮಾಸಗಳಿಗೆ **'ತತ್ಪುರುಷ ಸಮಾಸ'** ಎಂದು ಹೆಸರು.
2) ಪೂರ್ವೋತ್ತರ ಪದಗಳು ವಿಶೇಷಣ-ವಿಶೇಷ್ಯ ಸಂಬಂಧದಿಂದ ಕೂಡಿ ಆಗುವ ಸಮಾಸಕ್ಕೆ **'ಕರ್ಮಧಾರೆಯ ಸಮಾಸ'** ಎಂದು ಹೆಸರು.
3) ಪೂರ್ವೋತ್ತರ ಪದಗಳು ಹೀಗೆ ಅಂಶಿ ಅಂಶ ಭಾವದಿಂದ ಸೇರಿ ಸಮಾಸವಾದರೆ ಅಂತಹ ಸಮಾಸಗಳಿಗೆ **'ಅಂಶಿ ಸಮಾಸ'** ಎಂದು ಹೆಸರು.
4) ಎರಡು ಅಥವಾ ಎರಡಕ್ಕಿಂತಲೂ ಹೆಚ್ಚು ನಾಮಪದಗಳು ಸೇರಿ ಸಮಾಸವಾಗುವಾಗ ಎಲ್ಲ ಪದಗಳ ಅರ್ಥವೂ ಪ್ರಧಾನವಾಗಿದ್ದರೆ ಅಂತಹ ಸಮಾಸಕ್ಕೆ **'ದ್ವಂದ್ವ ಸಮಾಸ'** ಎಂದು ಹೆಸರು.

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 19

# ಆಲೋಚನೆ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ತಾವು ಓದಿದ ಸಾಹಿತ್ಯದ ವಿಷಯಗಳ ಬಗ್ಗೆ ತಾರ್ಕಿಕ ಆಲೋಚನೆಮಾಡಿ ಏಕೆ? ಏನು? ಹೇಗೆ? ಯಾವಾಗ? ಎಂದು ಪ್ರಶ್ನಿಸುವರು.

**ಚಟುವಟಿಕೆ 1 :** ಚಿತ್ರ ನೋಡಿ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವ್ಯಕ್ತಿಗಳ ಹೆಸರು ಬರೆಯಿರಿ ಹಾಗೂ ನಿಮಗಿಷ್ಟವಾಗುವ ಒಬ್ಬರ ಬಗ್ಗೆ ಟಿಪ್ಪಣಿ ಬರೆಯಿರಿ.









@KTBS NOT TO BE REPUBLISHED

**ಚಟುವಟಿಕೆ 2 :** ನೀಡಿರುವ ಭಾರತದ ರಾಷ್ಟ್ರಧ್ವಜದಲ್ಲಿರುವ ಅಶೋಕ ಚಕ್ರಕ್ಕೆ ಸೂಕ್ತವಾದ ಬಣ್ಣವನ್ನು ತುಂಬಿರಿ ಹಾಗೂ ಅದರ ವಿಶೇಷತೆಗಳನ್ನು ಬರೆಯಿರಿ.



@KTBS NOT TO BE REPUBLISHED

ಬೆಂಬಲಿತ ಕಲಿಕೆಯ ಹಂತ - ಚಟುವಟಿಕೆ ಹಾಳೆ 20

## ಯೋಚನಾ ಲಹರಿ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ತಾವು ಓದಿದ ಸಾಹಿತ್ಯದ ವಿಷಯಗಳ ಬಗ್ಗೆ ತಾರ್ಕಿಕ ಆಲೋಚನೆ ಮಾಡಿ ಏಕೆ? ಏನು? ಹೇಗೆ? ಯಾವಾಗ? ಎಂದು ಪ್ರಶ್ನಿಸುವರು.

**ಚಟುವಟಿಕೆ 1 :** ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ಪೂರ್ವ ಪದದ ಕೊನೆಯ ಅಕ್ಷರ ಹಾಗೂ ಉತ್ತರ ಪದದ ಮೊದಲ ಅಕ್ಷರವನ್ನು ಗುರುತಿಸಿ ಬರೆಯಿರಿ.

| ಪದಗಳು | ಬಿಡಿಸಿ ಬರೆಯಿರಿ | ಅಕ್ಷರಗಳು | ಹೊಸ ಅಕ್ಷರ |
|---|---|---|---|
| ವಾಗೀಶ | ವಾಕ್ + ಈಶ | ಕ್ + ಈ | ಗ್ |
| ವಾಗ್ದಾನ | | | |
| ದಿಗಂತ | | | |
| ಷಡಾನನ | | | |

**ಜಶ್ತ್ವ ಸಂಧಿ :** ಸಂಧಿಕಾರ್ಯ ನಡೆಯುವಾಗ ಪೂರ್ವ ಪದದ ಅಂತ್ಯದಲ್ಲಿರುವ ಕ, ಚ, ಟ, ತ, ಪ ಗಳಿಗೆ ಗ, ಜ, ಡ, ದ, ಬ ಗಳು ಆದೇಶವಾಗಿ ಬರುವುದನ್ನು 'ಜಶ್ತ್ವ ಸಂದಿ' ಎಂದು ಕರೆಯುತ್ತೇವೆ.

@KTBS NOT TO BE REPUBLISHED

**ಚಟುವಟಿಕೆ 2 :** ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ಪೂರ್ವ ಪದದ ಕೊನೆಯ ಅಕ್ಷರ ಹಾಗೂ ಉತ್ತರ ಪದದ ಮೊದಲ ಅಕ್ಷರವನ್ನು ಗುರುತಿಸಿ ಬರೆಯಿರಿ.

| ಪದಗಳು | ಬಿಡಿಸಿ ಬರೆಯಿರಿ | ಅಕ್ಷರಗಳು | ಹೊಸ ಅಕ್ಷರ |
|---|---|---|---|
| ಮನಶ್ಶುದ್ಧಿ | ಮನಸ್ + ಶುದ್ಧಿ | ಸ್ + ಶ | ಶ |
| ಯಶಶ್ಚಂದ್ರಿಕೆ | | | |
| ಸಚ್ಚಿತ್ರ | | | |

**ಶ್ಚುತ್ವ ಸಂಧಿ :** 'ಶ್ಚು' ಎಂದರೆ ಶಕಾರ ಮತ್ತು ಚವರ್ಗಾಕ್ಷರಗಳು. ಈ ಅಕ್ಷರಗಳು ಆದೇಶವಾಗಿ ಬಂದರೆ ಶ್ಚುತ್ವಸಂಧಿ. ಸಂಧಿಕಾರ್ಯ ನಡೆಯುವಾಗ ಪೂರ್ವ ಪದದ ಅಂತ್ಯದಲ್ಲಿರುವ 'ಸ'ಕಾರ ಅಥವಾ 'ತ'ವರ್ಗದ ಅಕ್ಷರಗಳಿರುತ್ತವೆ ಉತ್ತರಪದ ಶಕಾರ ಅಥವಾ 'ಚ'ವರ್ಗದ ಅಕ್ಷರಗಳಿಂದ ಆರಂಭವಾಗುತ್ತದೆ. 'ಸ'ಕಾರವಿದ್ದ ಕಡೆ ಶಕಾರವೂ 'ತ'ವರ್ಗದ ಅಕ್ಷರಗಳಿದ್ದ ಕಡೆ 'ಚ'ವರ್ಗದ ಅಕ್ಷರಗಳೂ ಆದೇಶವಾಗಿ ಬರುವುದನ್ನು 'ಶ್ಚುತ್ವ ಸಂಧಿ' ಎಂದು ಕರೆಯುತ್ತೇವೆ.

**ಚಟುವಟಿಕೆ 3 :** ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ಪೂರ್ವ ಪದದ ಕೊನೆಯ ಅಕ್ಷರ ಹಾಗೂ ಉತ್ತರ ಪದದ ಮೊದಲ ಅಕ್ಷರವನ್ನು ಗುರುತಿಸಿ ಬರೆಯಿರಿ.

| ಪದಗಳು | ಬಿಡಿಸಿ ಬರೆಯಿರಿ | ಅಕ್ಷರಗಳು | ಹೊಸ ಅಕ್ಷರ |
|---|---|---|---|
| ವಾಙ್ಮಯ | ವಾಕ್ + ಮಯ | ಕ್ + ಮ | ಙ |
| ಷಣ್ಮುಖ | | | |
| ಸನ್ಮಾನ | | | |

**ಅನುನಾಸಿಕ ಸಂಧಿ :** ಙ, ಞ, ಣ, ನ, ಮ ಇವು ಅನುನಾಸಿಕ ಅಕ್ಷರಗಳು. ಈ ಅಕ್ಷರಗಳು ಆದೇಶವಾಗಿ ಬಂದರೆ ಅನುನಾಸಿಕ ಸಂಧಿ. ಸಂಧಿಕಾರ್ಯ ನಡೆಯುವಾಗ ಪೂರ್ವ ಪದದ ಅಂತ್ಯದಲ್ಲಿರುವ ಕ್, ಚ್, ಟ್, ತ್, ಪ್ ಅಕ್ಷರಗಳಿರುತ್ತವೆ ಉತ್ತರಪದ ಅನುನಾಸಿಕ ಅಕ್ಷರಗಳಿಂದ ಆರಂಭವಾಗುತ್ತದೆ. ವರ್ಗದ ಕ, ಚ, ಟ, ತ, ಪ ವ್ಯಂಜನಗಳಿಗೆ ಅದೇ ವರ್ಗದ ಅನುನಾಸಿಕ ಅಕ್ಷರಗಳೂ ಆದೇಶವಾಗಿ ಬರುವುದನ್ನು 'ಅನುನಾಸಿಕ ಸಂಧಿ' ಎಂದು ಕರೆಯುತ್ತೇವೆ.




NOT TO BE REPUBLISHED @KTBS

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 21
# ಭಾವಾಭಿನಯ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಭಾಷೆಯ ಪ್ರಯೋಗ, ವ್ಯಾಕರಣ ನಿಯಮಗಳ, ಭಾಷೆಯ ಸ್ವರೂಪವನ್ನು ಅರ್ಥೈಸಿಕೊಳ್ಳುವರು ಮತ್ತು ಅವುಗಳನ್ನುಸಂದರ್ಭಕ್ಕೆ ತಕ್ಕಂತೆ ಪ್ರಯೋಗಿಸುವರು.

**ಚಟುವಟಿಕೆ 1 :** ಕೊಟ್ಟಿರುವ ನಾಟಕದ ಭಾಗವನ್ನು ನಿಮ್ಮ ತರಗತಿಯಲ್ಲಿ ಅಭಿನಯಿಸಿರಿ.

### ದೃಶ್ಯ: ರಾಮನ ಶಿಬಿರ (ಲಂಕೆಯ ಬಳಿ)

(ನಾಟಕ ಆರಂಭವಾಗುತ್ತದೆ. ರಾಮನು ತೀವ್ರವಾಗಿ ಯೋಚಿಸುತ್ತಾ ಕುಳಿತಿರುವನು.)

**ರಾಮ:** (ಆಲೋಚನೆಯಲ್ಲಿಂದ ಎದ್ದು) ಲಕ್ಷ್ಮಣಾ, ಹನುಮಾನ್! ಇಂದು ನಾನು ನನ್ನ ಪತ್ನಿ ಸೀತೆಯನ್ನು ಮರಳಿ ಕರೆತರುವುದಾಗಿ ನಿರ್ಧರಿಸಿದ್ದೇನೆ. ರಾವಣನ ಅಹಂಕಾರ ಕೊನೆಗೊಳ್ಳಬೇಕು.

**ಲಕ್ಷ್ಮಣ:** ಅಣ್ಣಾ, ನಾವೆಲ್ಲಾ ಸಿದ್ಧರಾಗಿದ್ದೇವೆ. ನಿನ್ನ ಆಜ್ಞೆಯನ್ನು ಕಾಯುತ್ತಿದ್ದೇವೆ.

**ಹನುಮಾನ್:** ರಾಮಾ, ನಾನು ಈಗಲೇ ಲಂಕೆಗೆ ಹಾರಿ ಹೋಗಿ ಸೀತಾಮಾತೆಯನ್ನು ಹುಡುಕಿ ಬಂದಿದ್ದೇನೆ. ಅವರು ಸುರಕ್ಷಿತವಾಗಿದ್ದಾರೆ, ಆದರೆ ಕಷ್ಟದಲ್ಲಿದ್ದಾರೆ.

**ರಾಮ :** ಅವಳಿಗೆ ನನ್ನ ಸಂದೇಶವನ್ನು ತಲುಪಿಸಬೇಕು.

ರಾವಣನಿಗೆ ಹೇಳು –ನಾನು ಶಾಂತಿಯಿಂದ ಮಾತಾಡಲು ಸಿದ್ಧನು. ಆದರೆ ಅವನು ಸೀತೆಯನ್ನು ಬಿಡದಿದ್ದರೆ, ಯುದ್ಧ ನಿಶ್ಚಿತ!



**(ರಾಮನು ತನ್ನ ದೂತನಿಗೆ ಸಂದೇಶ ನೀಡುತ್ತಾನೆ.)**

**ರಾಮ :** ದೂತಾ, ಈ ಸಂದೇಶವನ್ನು ರಾವಣನಿಗೆ ತಲುಪಿಸು. ಅವನು ಸಮಯದಲ್ಲಿ ನಿರ್ಧಾರ ಮಾಡದಿದ್ದರೆ, ಅವನ ಧ್ವಂಸ ಖಚಿತ.

**ದೂತ :** ಜೈ ಶ್ರೀರಾಮು! ನಾನು ತಕ್ಷಣವೇ ಹೊರಡುತ್ತೇನೆ!

**(ದೂತ ಹೊರಡುತ್ತಾನೆ. ರಾಮ, ಲಕ್ಷ್ಮಣ, ಹನುಮಾನ್ ಗಂಭೀರವಾಗಿ ನಿಂತಿರುತ್ತಾರೆ.)**

**ಹನುಮಾನ್ :** ರಾಮಾ, ನೀವು ಧರ್ಮದ ಮಾರ್ಗದಲ್ಲಿದ್ದೀರಿ. ಸೀತಾಮಾತೆಗೆ ನ್ಯಾಯ ಸಿಗಬೇಕೆಂದು ನಾವು ಯುದ್ಧವನ್ನೂ ಸ್ವೀಕರಿಸುತ್ತೇವೆ.

**(ಪರದೆ ಬಿದ್ದು ನಾಟಕ ಮುಗಿಯುತ್ತದೆ.)**

**ಸಂದೇಶ : ಧರ್ಮ ಮತ್ತು ನ್ಯಾಯಕ್ಕಾಗಿ ಕೂಡಾ ಶಕ್ತಿಯ ಬಳಕೆ ಎಚ್ಚರಿಕೆಯಿಂದ ಆಗಬೇಕು. ರಾಮನು ತೋರಿದ ಧರ್ಮಪಥ ನಮ್ಮೆಲ್ಲರ ಆದರ್ಶವಾಗಬೇಕು.**

@KTBS NOT TO BE REPUBLISHED

**ಚಟುವಟಿಕೆ 2 :** ಕೊಟ್ಟಿರುವ ಚಿತ್ರಗಳನ್ನು ಗಮನಿಸಿ ಪ್ರತೀ ಚಿತ್ರದಲ್ಲೂ ಅವರಿಬ್ಬರ ನಡುವೆ ನಡೆಯಬಹುದಾದ ಸಂಭಾಷಣೆಯನ್ನು ಊಹಿಸಿ ಬರೆಯಿರಿ.







@KTBS
NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 22
# ಸಮಸ್ತ ಪದಗಳು–2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಭಾಷೆಯ ಪ್ರಯೋಗ, ವ್ಯಾಕರಣ ನಿಯಮಗಳ, ಭಾಷೆಯ ಸ್ವರೂಪವನ್ನು ಅರ್ಥೈಸಿಕೊಳ್ಳುವರು ಮತ್ತು ಅವುಗಳನ್ನು ಸಂದರ್ಭಕ್ಕೆ ತಕ್ಕಂತೆ ಪ್ರಯೋಗಿಸುವರು.

**ಚಟುವಟಿಕೆ 1 :** ಸಮಾಸಪದಗಳನ್ನು ಅವುಗಳ ವಿಗ್ರಹವಾಕ್ಯಗಳೊಂದಿಗೆ ಜೋಡಿಸಿ ಬರೆಯಿರಿ.

**ಸಮಾಸ ಪದಗಳು**

ಒಗ್ಗಟ್ಟು, ಮುಕ್ಕಣ್ಣ, ಕೈತೊಳೆ, ಆ ಹುಡುಗ

ಕಡೆಗೋಲು, ಊಟಮಾಡು, ಚಂದ್ರಮುಖಿ, ಸಪ್ತಸ್ವರಗಳು,

ಇಮ್ಮಡಿ, ಚಕ್ರಪಾಣಿ, ತಲೆಬಾಚು, ಈ ಕಲ್ಲು

**ವಿಗ್ರಹವಾಕ್ಯ ಪದಗಳು**

ಚಂದ್ರನಂತೆ ಮುಖವುಳ್ಳವಳು, ಒಂದು+ಕಟ್ಟು, ಕಡೆಯುವುದು+ಕೋಲು,

ಅವನು+ಹುಡುಗ, ಮೂರು ಕಣ್ಣುಳ್ಳವನು, ಕೈಯನ್ನು+ತೊಳೆ, ಎರಡು+ಮಡಿ,

ಊಟವನ್ನು+ಮಾಡು, ಸಪ್ತಗಳಾದ+ಸ್ವರಗಳು, ಚಕ್ರವನ್ನು ಹಿಡಿದಿರುವವನು,

ತಲೆಯನ್ನು+ಬಾಚು, ಇದು+ಕಲ್ಲು

| ಸಮಾಸಪದ | ವಿಗ್ರಹವಾಕ್ಯ |
|---|---|
| | |
| | |
| | |
| | |
| | |
| | |

@KTBS NOT TO BE REPUBLISHED

**ಚಟುವಟಿಕೆ 2 :** ಹೊಂದಿಸಿ ಬರೆದ ಸಮಾಸ ಪದಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಯಾವುದಕ್ಕೆ ಸಂಬಂಧಿಸಿದೆ ಎಂಬುದನ್ನು ಪತ್ತೆಹಚ್ಚಿ ಬರೆಯಿರಿ.

| **ಸಂಖ್ಯಾವಾಚಕವಿರುವ ಪದ** | **ಒಬ್ಬ ವ್ಯಕ್ತಿಗೆ ಹೇಳುವಂತಿರುವ ಪದ** | **ಕ್ರಿಯಾಪದವಿರುವ ಪದ** | **ಸರ್ವನಾಮವಿರುವ ಪದ** |
|---|---|---|---|
| | | | |
| | | | |
| | | | |
| | | | |
| | | | |
| **ದ್ವಿಗು ಸಮಾಸ** | **ಬಹುವ್ರೀಹಿ ಸಮಾಸ** | **ಕ್ರಿಯಾ ಸಮಾಸ** | **ಗಮಕ ಸಮಾಸ** |

@KTBS NOT TO BE REPUBLISHED

**ಹೀಗೊಂದು ಕಲಿಕೆ !**

1) ಪೂರ್ವಪದವು ಸಂಖ್ಯಾವಾಚಕವಾಗಿದ್ದು, ಉತ್ತರದಲ್ಲಿರುವ ನಾಮಪದದೊಡನೆ ಸೇರಿ ಆಗುವ ಸಮಾಸವೇ **'ದ್ವಿಗುಸಮಾಸ'**.

2) ಸಮಾಸವಾದಾಗ ಪೂರ್ವೋತ್ತರ ಪದಗಳು ಪ್ರಧಾನವಾಗದೆ ಬೇರೊಂದು ಪದ ಪ್ರಧಾನವಾದರೆ ಅಂತಹ ಸಮಾಸಗಳಿಗೆ **'ಬಹುವ್ರೀಹಿ ಸಮಾಸ'** ಎಂದು ಹೆಸರು.

3) ಸಮಾಸದಲ್ಲಿ ಪೂರ್ವಪದವು ನಾಮಪದವಾಗಿದ್ದು, ಉತ್ತರ ಪದವು ಕ್ರಿಯಾ ಪದವಾಗಿದ್ದರೆ ಅಂತಹ ಸಮಾಸಗಳಿಗೆ **'ಕ್ರಿಯಾ ಸಮಾಸ'** ಎಂದು ಹೆಸರು.

4) ಪೂರ್ವ ಪದವು ಸರ್ವನಾಮ ಕೃದಾಂತಗಳಲ್ಲಿ ಒಂದಾಗಿದ್ದು ಉತ್ತರ ಪದದಲ್ಲಿರುವ ನಾಮಪದದೊಡನೆ ಸೇರಿ ಆಗುವ ಸಮಾಸವೇ **'ಗಮಕ ಸಮಾಸ'**.

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 23
# ವೇದನೆ ಸಂವೇದನೆ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಭಾಷೆಯ ಪ್ರಯೋಗ, ವ್ಯಾಕರಣ ನಿಯಮಗಳ, ಭಾಷೆಯ ಸ್ವರೂಪವನ್ನು ಅರ್ಥೈಸಿಕೊಳ್ಳುವರು ಮತ್ತು ಅವುಗಳನ್ನು ಸಂದರ್ಭಕ್ಕೆ ತಕ್ಕಂತೆ ಪ್ರಯೋಗಿಸುವರು.

**ಚಟುವಟಿಕೆ 1 :** ಕೊಟ್ಟಿರುವ ಚಿತ್ರವನ್ನು ನೋಡಿ, ಕಥೆಯನ್ನು ಊಹಿಸಿಕೊಂಡು ನಿಮ್ಮದೇ ಆದ ಶೈಲಿಯಲ್ಲಿ ಬರೆಯಿರಿ ಮತ್ತು ಕಥೆಗೊಂದು ಹೆಸರನ್ನು ಬರೆಯಿರಿ.



©KTBS NOT TO BE REPUBLISHED

**ಚಟುವಟಿಕೆ 2 :** ಹಾವು–ಏಣಿ ಆಟ – ಡೈಸ್ ಬಳಸಿ ಬಂದ ಅಂಕಿಯ ಪ್ರಕಾರ ಕಾಯಿ ನಡೆಸುವುದು. ಕಾಯಿ ನಡೆಸಿದ ಚೌಕದಲ್ಲಿರುವ ಪದವು ದ್ವಿರುಕ್ತಿ, ಅನುಕರಣಾವ್ಯಯ, ಜೋಡುನುಡಿ ಇವುಗಳಲ್ಲಿ ಯಾವುದು? ಎಂದು ಹೇಳಿ ಮುಂದಕ್ಕೆ ಸಾಗಬೇಕು.




©KTBS NOT TO BE REPUBLISHED

**ಚಟುವಟಿಕೆ 3 :** – ಹಾವು ಏಣಿ ಆಟದಲ್ಲಿ ನೀನು ಹೋದ ಮನೆಯಲ್ಲಿದ್ದ ಪದಗಳನ್ನು ಆರಿಸಿ ಸರಿಹೊಂದುವ ಗುಂಪಿನಲ್ಲಿ ಬರೆಯಿರಿ.

| ದ್ವಿರುಕ್ತಿ ಪದಗಳು | ಅನುಕರಣಾವ್ಯಯ ಪದಗಳು | ಜೋಡುನುಡಿ ಪದಗಳು |
|---|---|---|
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |

@KTBS
NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 24
## ಹೇಗಾಯ್ತು?

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಓದಿದ ಸಾಹಿತ್ಯದ ವಿಷಯಗಳ ಬಗ್ಗೆ ತಾರ್ಕಿಕ ಆಲೋಚನೆ ಮಾಡಿ ಏಕೆ? ಏನು? ಹೇಗೆ? ಯಾವಾಗ? ಎಂದು ಪ್ರಶ್ನಿಸುವರು.

**ಚಟುವಟಿಕೆ 1 :** ಕೊಟ್ಟಿರುವ ಕಥೆಯನ್ನು ಓದಿ ನ್ಯಾಯ ತೀರ್ಮಾನ ಮಾಡಿದ ಬಗೆಯನ್ನು ಕುರಿತು ಚರ್ಚಿಸಿ, ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.



### ಶಿಬಿ ಚಕ್ರವರ್ತಿ – ಧರ್ಮದ ಜೀವಂತ ರೂಪ

ಪ್ರಾಚೀನ ಭಾರತದಲ್ಲಿ ಶಿಬಿ ಎಂಬ ಚಕ್ರವರ್ತಿ ಆಳುತ್ತಿದ್ದನು. ಅವನು ಶೂರ, ಧೈರ್ಯಶಾಲಿ ಹಾಗೂ ಅತ್ಯಂತ ಧರ್ಮಪ್ರಿಯನು. ಅವನ ರಾಜ್ಯದಲ್ಲಿ ಪ್ರಜೆಗಳು ಧರ್ಮದ ಆಧಾರದ ಮೇಲೆ ಬದುಕುತ್ತಿದ್ದರು. ಶಿಬಿಯು ಯಾವಾಗಲೂ ಸತ್ಯ ಮತ್ತು ನ್ಯಾಯವನ್ನು ಪಾಲಿಸುತ್ತಿದ್ದನು ಮತ್ತು ಎಲ್ಲರಿಗೂ ಸಮಾನವಾಗಿ ವರ್ತಿಸುತ್ತಿದ್ದನು.

ಒಂದು ದಿನ ಶಿಬಿಯ ಅರಮನೆಯ ಮೇಲೆ ಒಂದು ಪಾರಿವಾಳವು ಬಂದು ಬಿದ್ದಿತು. ಅದು ತೀವ್ರ ಭಯದಿಂದ ಅಲೆದಾಡುತ್ತಾ ಕಂಗೆಟ್ಟಂತೆ ಕಾಣಿಸುತ್ತಿತ್ತು. ಅದರ ಹಿಂದೆ ಬಂದು ನಿಂತಿದ್ದ ಗಿಡುಗ, ಪಾರಿವಾಳವನ್ನು ಹಿಡಿಯಲು ಉತ್ಸುಕನಾಗಿತ್ತು. ಶಿಬಿ ಪಾರಿವಾಳವನ್ನು ರಕ್ಷಿಸಿದನು.

**ಗಿಡುಗ :** "ಮಹಾರಾಜನೇ, ನಾನು ಈ ಪಾರಿವಾಳವನ್ನು ತಿಂದು ಬದುಕಬೇಕು. ಇದು ನನ್ನ ಆಹಾರ. ನೀನು ನನಗೆ ನನ್ನ ಆಹಾರವನ್ನು ತಪ್ಪಿಸುತ್ತಿದ್ದೀಯೆಂದರೆ, ನೀನು ನನ್ನ ಜೀವವನ್ನೇ ನಾಶ ಮಾಡುತ್ತಿದ್ದೀಯೆ."

**ಶಿಬಿ :** "ನಾನು ನಿನ್ನ ಹಕ್ಕು ತಪ್ಪಿಸುತ್ತಿಲ್ಲ. ಆದರೆ ನಿರಪರಾಧಿಯಾದ ಈ ಜೀವವನ್ನು ನಾನು ಕಾಪಾಡಲೇಬೇಕು. ನೀನು ಬೇರೆ ಆಹಾರ ಕೇಳು, ನಾನು ಏನಾದರೂ ಕೊಡುವೆ."

**ಗಿಡುಗ ಕೇಳಿತು :** "ನೀನು ನಿಜವಾಗಿಯೂ ಧರ್ಮನಿಷ್ಠನೇ? ಹಾಗಾದರೆ, ಈ ಪಾರಿವಾಳದ ತೂಕದಷ್ಟು ನಿನ್ನ ಮಾಂಸವನ್ನು ನನಗೆ ಕೊಡು."

ಶಿಬಿಯು ಧೈರ್ಯದಿಂದ ಒಪ್ಪಿಕೊಂಡ. ತೂಕದ ತಕ್ಕಡಿಗೆ ಪಾರಿವಾಳವೊಂದೆಡೆ ಇಡಲಾಗಿತು. ಮತ್ತೊಂದೆಡೆ ಶಿಬಿಯು ತಾನಾಗಿ ತನ್ನ ಮಾಂಸವನ್ನು ಕತ್ತರಿಸಿ ಇಡತೊಡಗಿದ. ಆದರೆ ಎಷ್ಟೆಷ್ಟು ಮಾಂಸ ಇಟ್ಟರೂ ಪಾರಿವಾಳದ ತೂಕ ಕಡಿಮೆಯಾಗಲಿಲ್ಲ. ಕೊನೆಗೆ ಶಿಬಿಯು ತನ್ನ ದೇಹವನ್ನೆಲ್ಲಾ ಸಮರ್ಪಣೆಗೆ ಸಿದ್ಧನಾದಾಗ, ಆ ಪಾರಿವಾಳ ಮತ್ತು ಗಿಡುಗ ನಿಜರೂಪ ತಾಳಿದವು. ಅವು ದೇವತೆಗಳು – ಇಂದ್ರ ಮತ್ತು ಅಗ್ನಿ. ಶಿಬಿಯ ಧರ್ಮಪರೀಕ್ಷೆ ಮಾಡಲು ಅವನು ಸಿದ್ಧನಾಗಿದ್ದ ತ್ಯಾಗವನ್ನು ಪರೀಕ್ಷಿಸಿದವು.

**ಇಂದ್ರನು ಹೇಳಿದರು :** "ಓ ಶಿಬಿ, ನೀನು ನಿಜವಾದ ರಾಜನು. ನಿನ್ನ ಧರ್ಮದ ಅಭಿಮಾನ, ಪ್ರಾಣಕ್ಕೂ ಮುಂಚೆ ಇರುವ ನಿಷ್ಠೆ ನಮ್ಮನ್ನು ಗೆದ್ದಿದೆ. ನಿನ್ನ ಧರ್ಮದ ಫಲವಾಗಿ ನಿನ್ನ ರಾಜ್ಯ ಸದಾ ಸುಖಿಯಾಗಿರಲಿ." ಎಂದು ಆಶೀರ್ವದಿಸಿದರು.

©KTBS NOT TO BE REPUBLISHED

**ಚಟುವಟಿಕೆ 2 :** ಕೊಟ್ಟಿರುವ ವಿಷಯಗಳಲ್ಲಿ ನಿಮಗೆ ಇಷ್ಟವಾದ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ.

**(ನನ್ನ ಹವ್ಯಾಸಗಳು, ಕ್ರೀಡೆಗಳು, ರಾಷ್ಟ್ರೀಯ ಹಬ್ಬಗಳು, ಪುಸ್ತಕಗಳು, ಗ್ರಾಮೀಣಬದುಕು)**

@KTBS NOT TO BE REPUBLISHED

**ಹೀಗೊಂದು ಕಲಿಕೆ !**

**ಪ್ರಬಂಧ ರಚನೆ**

ಪ್ರಬಂಧವು ಗದ್ಯ ಸಾಹಿತ್ಯದ ಒಂದು ಪ್ರಕಾರವಾಗಿದೆ. ಪ್ರಬಂಧಗಳನ್ನು ಓದುವುದರಿಂದ ಹಾಗೂ ಬರೆಯುವುದರಿಂದ ವಿಷಯ ಮತ್ತು ಭಾಷೆಗಳೆರಡರ ಜ್ಞಾನ ಏಕಕಾಲದಲ್ಲಿ ಲಭಿಸುತ್ತದೆ. ಪ್ರಬಂಧಸಾಹಿತ್ಯವು ಸರಳವೂ ಉಪಯುಕ್ತವೂ ಆಗಿದ್ದು, ಸಮಕಾಲೀನ ಜಗತ್ತನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ. **ಪ್ರಬಂಧ ರಚನೆಯ ಹಂತಗಳು** : 1) ವಿಯಷದ ಆಯ್ಕೆ 2) ಮಾಹಿತಿಗಳ ಸಂಗ್ರಹಣೆ 3) ವಿಷಯವನ್ನು ಕ್ರಮಬದ್ಧವಾಗಿ ಜೋಡಿಸುವುದು 4) ವಿಷಯದ ಮಂಡನೆ/ವಿವರಣೆ 5) ಪರಿಶೀಲನೆ 6) ಉಪಸಂಹಾರ

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 25

## ಸಾಂದರ್ಭಿಕ ನಡೆ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿಭಿನ್ನ ಉದ್ದೇಶಗಳಿಗಾಗಿ ಬರೆಯುತ್ತಿರುವ ತಮ್ಮ ಬರವಣಿಗೆಯಲ್ಲಿ ಲೇಖನ ಚಿಹ್ನೆಗಳನ್ನು (ಉದಾ: ಪೂರ್ಣವಿರಾಮ, ಅಲ್ಪವಿರಾಮ, ಪ್ರಶ್ನಾರ್ಥಕ ಭಾವಸೂಚಕ ಇತ್ಯಾದಿ) ಸೂಕ್ತವಾಗಿ ಬಳಸುವರು.

**ಚಟುವಟಿಕೆ 1 :** ನೀಡಲಾಗಿರುವ ಚಿತ್ರಗಳನ್ನು ನೋಡಿ ಹಬ್ಬದ ಹೆಸರನ್ನು ಬರೆಯಿರಿ. ನಿಮಗಿಷ್ಟವಾದ ಹಬ್ಬದ ಆಚರಣೆಯ ವಿಶೇಷತೆಯ ಬಗ್ಗೆ ನಿಮ್ಮ ಮಾತುಗಳಲ್ಲಿ ಬರೆಯಿರಿ.











NOT TO BE REPUBLISHED
KTBS

**ಚಟುವಟಿಕೆ 2 :** ನನ್ನನ್ನು ಅರ್ಥೈಸಿಕೊಂಡು ಹಾಡಿ, ನಿಮ್ಮ ಪುಸ್ತಕದಲ್ಲಿ ಬರೆಯಿರಿ.



ಪೂರ್ಣ ಅರ್ಥದೊಂದಿಗೆ ವಾಕ್ಯದ ಕೊನೆಯಲ್ಲಿ ಬಳಸು
ನಾನು ಬರುವೆ ಪೂರ್ಣ ವಿರಾಮ ಚಿಹ್ನೆ ( . )
ಕತೃ ,ಕರ್ಮ, ಕ್ರಿಯಾಪದ ವಿಶೇಷಗಳ ಕೊನೆಯಲ್ಲಿ ಬಳಸಲು
ನಾನು ಬರುವೆ ಅಲ್ಪ ವಿರಾಮ ಚಿಹ್ನೆ ( , )
ಹೇಳಲು, ಕೇಳಲು ಪ್ರಶ್ನೆಯು ಪದ, ವಾಕ್ಯದ ಕೊನೆಯಲ್ಲಿ ಬಳಸಲು
ನಾನು ಬರುವ ಪ್ರಶ್ನಾರ್ಥಕ ಚಿಹ್ನೆ ( ? )
ಭಾವನೆಗಳನ್ನು ಸೂಚಿಸಲು ಪದ ವಾಕ್ಯಗಳ ಮುಂದೆ ಬಳಸಲು
ನಾನು ಬರುವೆ ಭಾವನಾತ್ಮಕ ಚಿಹ್ನೆ ( ! )
ಅಭಿಪ್ರಾಯದ ವಿವರಣೆಯು ಮುಂದಿನಂತೆ ಎಂದು ತಿಳಿಸಿ ಬಳಸಲು
ನಾನು ಬರುವೆ ವಿವರಣಾತ್ಮಕ ಚಿಹ್ನೆ ( : )
ವಾಕ್ಯ ರಚನೆಯಲ್ಲಿ ಪಾರಿವಾಷಿಕ, ಪ್ರಧಾನ ಪದಗಳಿಗೆ ಬಳಸಲು
ನಾನು ಬರುವ ವಾಕ್ಯವೇಷ್ಟನ ಚಿಹ್ನೆ ( ' ' )
ಇನ್ನೊಬ್ಬರ ಹೇಳಿಕೆಗಳನ್ನು ಯಥಾವತ್ತಾಗಿ ತಿಳಿಸಿ ಬಳಸಲು
ನಾನು ಬರುವೆ ಉದ್ಧರಣ ಚಿಹ್ನೆ ( " " )
ಅನೇಕ ಉಪವಾಕ್ಯಗಳು ಪ್ರಧಾನ ವಾಕ್ಯಕ್ಕೆ ಅಧೀನವಾದಾಗ ಬಳಸಲು
ನಾನು ಬರುವೆ ಅರ್ಧ ವಿರಾಮ ಚಿಹ್ನೆ ( ; )
ಪರ್ಯಾಯ ಪದ, ವಿವರಣಾತ್ಮಕ ಪದ, ಆಕರಗಳ ಸೂಚಿಸಲು ಬಳಸಲು
ನಾನು ಬರುವೆ ಆವರಣ ಚಿಹ್ನೆ ( : )
ಎರಡು ಪದಗಳ ಅರ್ಥ ಸಮಾನವೆಂದಾಗ ಬಳಸಲು
ನಾನು ಬರುವೆ ಸಮಾನಾರ್ಥಕ ಚಿಹ್ನೆ ( = )

ರಚನೆ – ಜ್ಯೋತಿ.ಕೆ.ಎಮ್

NOT TO BE REPUBLISHED ©KTBS

**ಹೀಗೊಂದು ಕಲಿಕೆ !**

ಬರವಣಿಗೆಯ ಮೂಲಕ ಪ್ರಕಟವಾಗುವ ಆಲೋಚನೆ ಅಭಿಪ್ರಾಯಗಳಲ್ಲಿ ಅರ್ಥೈಸಲು ವಾಕ್ಯ ಮತ್ತು ವಾಕ್ಯ ಭಾಗಗಳ ಉಚಿತವಾದ ಎಡೆಗಳಲ್ಲಿ ಕಲ್ಪಿಸುವ ವಿರಾಮಸ್ಥಾನಗಳ ಲಿಖಿತ ಸಂಕೇತಗಳೇ 'ಲೇಖನ ಚಿಹ್ನೆಗಳು'.

ಬೆಂಬಲಿತ ಕಲಿಕೆಯ ಹಂತ - ಚಟುವಟಿಕೆ ಹಾಳೆ 26

## ನಡೆ ನುಡಿ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ವಿಭಿನ್ನ ಉದ್ದೇಶಗಳಿಗಾಗಿ ಬರೆಯುತ್ತಿರುವ ತಮ್ಮ ಬರವಣಿಗೆಯಲ್ಲಿ ಲೇಖನ ಚಿಹ್ನೆಗಳನ್ನು (ಉದಾ: ಪೂರ್ಣವಿರಾಮ, ಅಲ್ಪವಿರಾಮ, ಪ್ರಶ್ನಾರ್ಥಕ ಭಾವಸೂಚಕ ಇತ್ಯಾದಿ) ಸೂಕ್ತವಾಗಿ ಬಳಸುವರು.

**ಚಟುವಟಿಕೆ 1 :** ಲೇಖನ ಚಿಹ್ನೆಗಳನ್ನು ಹೊಂದಿಸಿ ಬರೆಯಿರಿ.

1) . – ಅಲ್ಪವಿರಾಮ ಚಿಹ್ನೆ ____________

2) “ ” – ಭಾವಸೂಚಕ ಚಿಹ್ನೆ ____________

3) ! – ಅರ್ಧವಿರಾಮ ಚಿಹ್ನೆ ____________

4) ; – ಆವರಣ ಚಿಹ್ನೆ ____________

5) ? – ಸಮನಾರ್ಥಕ ಚಿಹ್ನೆ ____________

6) ‘ ’ – ವಿವರಣಾತ್ಮಕ ಚಿಹ್ನೆ ____________

7) ( ) – ಉದ್ಧರಣ ಚಿಹ್ನೆ ____________

8) : – ಪೂರ್ಣವಿರಾಮ ಚಿಹ್ನೆ ____________

9) = – ಪ್ರಶ್ನಾರ್ಥಕ ಚಿಹ್ನೆ ____________

10) , – ವಾಕ್ಯವೇಷ್ಟನ ಚಿಹ್ನೆ ____________

©KTBS NOT TO BE REPUBLISHED

**ಚಟುವಟಿಕೆ 2 :** ಕೆಳಗೆ ನೀಡಿರುವ ವಾಕ್ಯವನ್ನು ಓದುತ್ತಾ ಬರೆಯಿರಿ.

1) ತಾಯಿಯಂತೆ ಮಗಳು; ನೂಲಿನಂತೆ ಸೀರೆ.

____________

2) ಲಕ್ಷ್ಮಿ, ಸರಸ್ವತಿ, ದುರ್ಗಾ, ಪಾರ್ವತಿ ಇವರು ನಾಲ್ವರು ಗೆಳತಿಯರು.

____________

3) ನೀನು ಯಾರು? ಎಲ್ಲಿಂದ ಬಂದಿರುವೆ? ಕಾರಣ ಕೊಡು.

____________

4) ಅಬ್ಬಾ! ಎಂಥ ಸುಂದರವಾದ ದೃಶ್ಯ.

____________

**ಚಟುವಟಿಕೆ 3 :** ಈ ಗದ್ಯಭಾಗವನ್ನು ಅಭಿನಯಿಸಿರಿ. ನೀಡಿರುವ ಸ್ಥಳದಲ್ಲಿ ಲೇಖನ ಚಿಹ್ನೆಗಳನ್ನು ಗಮನಿಸುತ್ತಾ ಬರೆಯಿರಿ.

ಡಾಕ್ಟರ್ : ನಿನ್ನ ಹೆಸರೇನು ಪುಟ್ಟಿ?
ಕಾವ್ಯ : ಕಾವ್ಯ.
ಡಾಕ್ಟರ್ : ಏನು ತೊಂದರೆ ಕಾವ್ಯ?
ಕಾವ್ಯ : ಡಾಕ್ಟರ್, ನಿನ್ನೆಯಿಂದ ಹೊಟ್ಟೆ ನೋಯುತ್ತಿದೆ. ಶಾಲೆಗೂ ಹೋಗಿಲ್ಲ..
ಡಾಕ್ಟರ್ : ಹೌದಾ... ಅದಕ್ಕೆ ಯಾಕೆ ಚಿಂತೆ? ಓ! ಇದ್ಯಾರು ನಿನ್ನ ಅಮ್ಮನಾ?
ಕಾವ್ಯ : ಹೌದು ಡಾಕ್ಟರ್.
ಡಾಕ್ಟರ್ : ಸರಿ, ನಿನ್ನೆ ಏನೇನು ತಿಂದಿದ್ದೆ ಹೇಳ್ತೀಯಾ?
ಕಾವ್ಯ : ನಿನ್ನೆ ಬೆಳಗ್ಗೆ ಇಡ್ಲಿ ಚಟ್ನಿ. ಮಧ್ಯಾಹ್ನ ಮೊಸರನ್ನ. ರಾತ್ರಿ ಅನ್ನ ಸಾಂಬಾರ್ ಊಟ ಮಾಡಿದ್ದೆ ಸರ್.
ಡಾಕ್ಟರ್ : ಆಯ್ತು. ನಿಮ್ಮ ಮನೆಗೆ ಕುಡಿಯುವ ನೀರನ್ನು ಎಲ್ಲಿಂದ ತರುತ್ತೀರಿ?
ಕಾವ್ಯ : ಮನೆಯ ಮುಂದೆ ಸಾರ್ವಜನಿಕ ನಲ್ಲಿ ಇದೆ. ಅಲ್ಲಿಂದ ನೀರು ತರುತ್ತೇವೆ ಸರ್.
ಡಾಕ್ಟರ್ : ಅದನ್ನು ಹಾಗೆಯೇ ಕುಡಿಯಲು ಬಳಸುತ್ತೀರ?
ಅಮ್ಮ : ಇಲ್ರೀ ಸಾಯೇಬ್ರೆ! ಕುದಿಸಿ ಆರಿಸಿದ ನಂತರಾನೇ ಮಕ್ಳಿಗೆ ಕುಡಿಯಾಕೆ ಕೊಡ್ತೀವಿ.
ಡಾಕ್ಟರ್ : ಒಳ್ಳೆಯ ಅಭ್ಯಾಸ. ಹಾಗಾದರೆ ನಾನು ಈ ಮಾತ್ರೆಗಳನ್ನು ಕೊಡುತ್ತೇನೆ. 3 ದಿನ ತೆಗೆದುಕೊಳ್ಳಿರಿ.
ಅಮ್ಮ : ಸರಿ ಸಾಯೇಬ್ರೆ.

@KTBS
NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 27

# ಅಂದ ಚಂದ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಭಾಷೆಯ ಸೂಕ್ಷ್ಮತೆ, ವ್ಯವಸ್ಥೆ, ಶೈಲಿಗಳ ಬಗೆಗೆ ಗಮನಕೊಡುತ್ತಾ ಅವುಗಳನ್ನು ಮೆಚ್ಚಿಕೊಳ್ಳುವರು ಮತ್ತು ಅಭ್ಯಾಸ ಮಾಡುವರು. (ಉದಾಹರಣೆಗೆ : ಕವಿತೆಯೊಳಗಿನ ಪ್ರಾಸ, ಲಯ, ಛಂದಸ್ಸು)

**ಚಟುವಟಿಕೆ 1 :** ಕೆಳಗಿನ ಪದ್ಯ ಭಾಗವನ್ನು ಹಾಡಿ ಲಘು ( U ) ಗುರು ( – ) ಹಾಕುವ ನಿಯಮ ತಿಳಿದು, ನೋಟ್ ಪುಸ್ತಕದಲ್ಲಿ ಬರೆಯಿರಿ.

ಗುರು ಚಿಹ್ನೆ–ಪದ್ಯದ ರಚನೆಯ ನಿಯಮ ತಿಳಿಸುವುದೇ ಛಂದಸ್ಸು
ಅದರಲ್ಲಿ ಮೂರು ಪ್ರಧಾನ ಅಂಶಗಳು ಅದುವೇ ಸೊಗಸು
ಆ ಅಂಶಗಳೇ ಗಣ, ಯತಿ, ಪ್ರಾಸವೆಂಬುದ ಬಳಸು
ಗಣವೆಂದರೆ ಗುಂಪು ಅದುವೇ ಕಾವ್ಯಕ್ಕೆ ಸೊಂಪು
ಗಣದಲಿದೆ ಮೂರು,ಅಂಶ, ಮಾತ್ರಾ, ಅಕ್ಷರ ಗಣದ ಇಂಪು
ಮಾತ್ರಾ ಗಣವು ಅಕ್ಷರವ ಉಚ್ಚರಿಸಲು ಬಳಸುವ ಸಮಯವೇ ಕಂಪು
ಮಾತ್ರಾ ಗಣದಲ್ಲಿ ಮುಖ್ಯ ಲಘು ಗುರು ಹಾಕುವ ಪ್ರಸ್ತಾರವು
ಒಂದು ಮಾತ್ರಾ  ಕಾಲದಲ್ಲಿ ಉಚ್ಚರಿಸುವ ಹ್ರಸ್ವಾಕ್ಷರವೇ ಲಘುವು
ಎರಡು ಮಾತ್ರಾ ಕಾಲದಲ್ಲಿ ಉಚ್ಚರಿಸುವ ದೀರ್ಘಾಕ್ಷರವೇ ಗುರುವು
ಎಲ್ಲಾ ದೀರ್ಘಸ್ವರ ಸಹಿತ ಗುಣಿತಾಕ್ಷರಗಳಿಗೆ ಗುರು ಹಾಕು
ಅನುಸ್ವಾರ ಮತ್ತು ವಿಸರ್ಗದಿಂದ ಕೂಡಿದ ಅಕ್ಷರಕ್ಕೆ ಗುರು ಬೇಕು
ಒತ್ತಕ್ಷರ ಮತ್ತು ವ್ಯಂಜನಾಕ್ಷರದ ಹಿಂದಿನ ಅಕ್ಷರಕ್ಕೆ ಗುರು ಸಾಕು
ಷಟ್ಪದಿಯ ಮೂರು ಆರನೇ ಸಾಲಿನ ಕೊನೆ ಅಕ್ಷರ ಲಘುವಾಗಿರಲೇಬೇಕು.

ರಚನೆ – ಜ್ಯೋತಿ.ಕೆ.ಎಮ್




©KTBS NOT TO BE REPUBLISHED

**ಹೀಗೊಂದು ಕಲಿಕೆ !**

**ಛಂದಸ್ಸು – ಪದ್ಯವನ್ನು ರಚಿಸುವ ಶಾಸ್ತ್ರ.**

ಛಂದಸ್ಸಿನ ಶಾಸ್ತ್ರದ ಪ್ರಕಾರ ರಚಿತವಾದ ಪದ್ಯವನ್ನು ಛಂದೋಬದ್ಧ ಪದ್ಯ ಎನ್ನುವರು. ಛಂದಸ್ಸು ಕನ್ನಡ ಸಾಹಿತ್ಯ, ಸಂಸ್ಕೃತ ಸಾಹಿತ್ಯದ ಆರಂಭದ ದಿನಗಳಿಂದಲೂ ಬಳಕೆಯಲ್ಲಿದ್ದು, ಕಾಲಕ್ರಮದಲ್ಲಿ ಹಲವಾರು ಬದಲಾವಣೆಗೊಳಪಟ್ಟಿದೆ.

**ಚಟುವಟಿಕೆ 2 :** ಲಘು ( U ) ಗುರು ( – ) ಹಾಕಿರುವ ಅಕ್ಷರಗಳನ್ನು ಗಮನಿಸಿ, ಕೆಳಗೆ ನೀಡಲಾಗಿರುವ ಅಕ್ಷರಗಳಿಗೆ ಲಘು ( U ) ಗುರು ( – ) ಚಿಹ್ನೆ ಹಾಕಿ.

ಮಾದರಿ :

| U | – | U | – | U | – | U | U | – | – | U | – | – |
|---|---|---|---|---|---|---|---|---|---|---|---|---|
| ಅ | ಆ | ಇ | ಈ | ಉ | ಊ | ಋ | ಎ | ಏ | ಐ | ಒ | ಓ | ಔ |

| | | | | | |
|---|---|---|---|---|---|
| ಅ | ಇ | ಉ | ಋ | ಎ | ಒ |

| | | | | | | |
|---|---|---|---|---|---|---|
| ಆ | ಈ | ಊ | ಏ | ಐ | ಓ | ಔ |

| | | | | | | | | | | | | |
|---|---|---|---|---|---|---|---|---|---|---|---|---|
| ಇ | ಆ | ಏ | ಒ | ಉ | ಐ | ಋ | ಅ | ಈ | ಐ | ಒ | ಓ | ಔ |

@KTBS NOT TO BE REPUBLISHED

**ಚಟುವಟಿಕೆ 3 :** ಕೊಟ್ಟಿರುವ ಗುಣಿತಾಕ್ಷರಗಳಿಗೆ ಲಘು–ಗುರು ಹಾಕಿರಿ.

| | | | | | | | | | |
|---|---|---|---|---|---|---|---|---|---|
| ಕ | ಕಾ | ಕಿ | ಕೀ | ಕು | ಕೂ | ಕೃ | ಕೆ | ಕೇ | ಕೈ |

| | | | | |
|---|---|---|---|---|
| ಕೊ | ಕೋ | ಕೌ | ಕಂ | ಕಃ |

**ಹೀಗೊಂದು ಕಲಿಕೆ !**

ಲಘು – ಒಂದು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳನ್ನು ಲಘು (U) ಎನ್ನುವರು.
ಗುರು – ಎರಡು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳನ್ನು ಗುರು ( – ) ಎಂದು

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ 28

# ಪ್ರಸ್ತಾರ ವಿಸ್ತಾರ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ :** ಭಾಷೆಯ ಸೂಕ್ಷ್ಮತೆ, ವ್ಯವಸ್ಥೆ, ಶೈಲಿಗಳ ಬಗೆಗೆ ಗಮನಕೊಡುತ್ತಾ ಅವುಗಳನ್ನು ಮೆಚ್ಚಿಕೊಳ್ಳುವರು ಮತ್ತು ಅಭ್ಯಾಸ ಮಾಡುವರು. (ಉದಾಹರಣೆಗೆ: ಕವಿತೆಯೊಳಗಿನ ಪ್ರಾಸ, ಲಯ, ಛಂದಸ್ಸು)

**ಚಟುವಟಿಕೆ 1 :** : ಕೊಟ್ಟಿರುವ ಅನುಸ್ವಾರ (ಂ) ಮತ್ತು ವಿಸರ್ಗಗಳಿಂದ (ಃ) ಕೂಡಿದ ಪದಗಳಿಗೆ ಲಘು–ಗುರು ಹಾಕಿರಿ.

| – U | – U |
|---|---|
| ಅಂದ | ದುಃಖ |



| | | | | |
|---|---|---|---|---|
| ಗಂಧ | ಮಂದಾರ | ಅಂಗ | ಚಂದನ | ಬಹುಶಃ |

| | | | | |
|---|---|---|---|---|
| ಅಂತಃಪುರ | ಅಂತಃಕರಣ | ಅರ್ಜುನಃ | ಫಲ್ಗುಣಃ | ನಮಃ ಶಿವಾಯ |

@KTBS NOT TO BE REPUBLISHED

**ಚಟುವಟಿಕೆ 2 :** ಒತ್ತಕ್ಷರದಿಂದ ಕೂಡಿದ ಪದಗಳಿಗೆ ಮಾದರಿಯನ್ನು ಅನುಸರಿಸಿ ಲಘು–ಗುರು ಹಾಕಿರಿ.

| – U | – U | – U U U | U – | U – |
|---|---|---|---|---|
| ಅಮ್ಮ | ಕಾವ್ಯ | ಉಚ್ಚರಿಸು | ರಮೇಶ್ | ಭವನ್ |

| | | | | |
|---|---|---|---|---|
| ಕಣ್ಮಣಿ | ಸೂರ್ಯ | ವರ್ತನೆ | ಪೈರು | ಕೇಳ್ |

| | | | | |
|---|---|---|---|---|
| ಸಮರ್ಥನೆ | ವೈರಿವ್ಯೂಹ | ಭೂರಿಶ್ರವ | ಜಯದ್ರಥ | ಧರ್ಮರಾಜ |

**ಚಟುವಟಿಕೆ 3 :** ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರು ಬರೆಯಿರಿ.

ಜನಪನಂಘ್ರಿಗೆ ಮಣಿದು ಕೈ ಮುಗಿ
ದೆನೆಗೆ ಬೆಸಸೈ ಬೊಪ್ಪ ತಾ ಬ
ಲ್ಲೆನು ಮಹಾಹವದೊಳಗೆ ಪದ್ಮವ್ಯೂಹ ಭೇದನವ
ಅನುವರವ ಗೆಲುವೆನು ಕೃತಾಂತನ
ಮನೆಗೆ ಕಳುಹುವೆನಹಿತರನು ನೀ
ನಿನಿತು ಚಿಂತಿಸಲೇಕೆ ಕಾಳಗಕೆನ್ನ ಕಳುಹೆಂದ

@KTBS
NOT TO BE REPUBLISHED

**ಹೀಗೊಂದು ಕಲಿಕೆ !**

**'ಲಘು' ಬರುವ ಅಕ್ಷರಗಳು :**
ಹ್ರಸ್ವಸ್ವರಗಳು ಮತ್ತು ಹ್ರಸ್ವಸ್ವರದಿಂದ ಕೂಡಿದ ವ್ಯಂಜನಾಕ್ಷರಗಳು.

**'ಗುರು' ಬರುವ ಅಕ್ಷರಗಳು :**
ದೀರ್ಘಸ್ವರಗಳು ಹಾಗೂ ದೀರ್ಘಸ್ವರದಿಂದ ಕೂಡಿದ ವ್ಯಂಜನಾಕ್ಷರಗಳು.
ಅನುಸ್ವಾರ ಮತ್ತು ವಿಸರ್ಗದಿಂದ ಕೂಡಿದ ಅಕ್ಷರಗಳು.
ಒತ್ತಕ್ಷರವಿರುವ ಅಕ್ಷರದ ಹಿಂದಿನ ಅಕ್ಷರ.
ವ್ಯಂಜನದ ಅಕ್ಷರದ ಮುಂದೆ ಇರುವ ಸ್ವರವಿಲ್ಲದ ಅಕ್ಷರ ಎರಡೂ ಸೇರಿ ಒಂದು ಗುರುವಾಗುತ್ತದೆ. (ವಿನಯ್)
ಷಟ್ಪದಿಗಳಲ್ಲಿ ಮೂರು ಮತ್ತು ಆರನೇ ಸಾಲಿನ ಕೊನೆ ಅಕ್ಷರ ಗುರುವಾಗುತ್ತದೆ.